# ಅದ್ಭುತ ಶಂಕರ



ಅದ್ವೈತವೇದಾಂತವಾಚಸ್ಪತಿ, ಮಹಾಮಹೋಪಾಧ್ಯಾಯ
ವಿದ್ವಾನ್ ಡಾ॥ ಕೆ. ಜಿ. ಸುಬ್ರಾಯಶರ್ಮಾ

ಆನಂದಗ್ರಂಥಮಾಲಾ–ಕುಸುಮ 100

# ಅದ್ಭುತ ಶಂಕರ

**ಪ್ರವಚನಕಾರರು ಮತ್ತು ಲೇಖಕರು**

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ, ಅದ್ವೈತಜ್ಞಾನಸಿಂಧು, ವಿದ್ಯಾವಿಧಿನಿಧಿ, ವೇದಶ್ರೀ, ವೇದಾಂತವಾರಿಧಿ, ವೇದಾಂತಭಾಸ್ಕರ, ವೇದಾಂತಸರಸ್ವತಿ, ವೇದಾಂತಕೇಸರಿ, ವೇದಾಂತ ಸಾರ್ವಭೌಮ, ವೇದಾಂತಕಾಮಧೇನು, ವೇದಾಂತರಾಜಹಂಸ, ವಿವೇಕ ಭಾಸ್ಕರ, ಶಾಸ್ತ್ರನಿಧಿ, ಅದ್ವೈತವೇದಾಂತಕೇಸರಿ, ಅದ್ವೈತಜ್ಞಾನತೇಜ, ವೇದಾಂತಸಾಗರ, ವೇದಾಂತರತ್ನ, ಶಾಸ್ತ್ರವಿದ್ಯಾನಿಧಿ, ವೇದಾಂತಚಿಂತಾಮಣಿ, ಅದ್ವೈತಸಾರತಿಲಕ, ವೇದಾಂತಪ್ರಭಾಕರ, ಅದ್ವೈತ ವೇದಾಂತವಾರಿಧಿ, ಅದ್ವೈತವೇದಾಂತಚೂಡಾಮಣಿ, ಅದ್ವೈತವೇದತಿಲಕ, ಅದ್ವೈತ ವೇದಾಂತವಿಚಕ್ಷಣ, ವೇದಾಂತಸಾರತಿಲಕ, ವೇದಾಗಮವಿದ್ಯಾಸಾಗರ, ಸುವರ್ಣಕರ್ನಾಟಕ ಕನ್ನಡಿಗ, ಭುವಿ ವೇದಾಂತೈಕಶ್ರೇಷ್ಠರತ್ನ, ರಾಷ್ಟ್ರರತ್ನ, ಸುವರ್ಣಕರ್ನಾಟಕ ಸುವರ್ಣವೇದಾಂತಿ, ವೇದಾಂತರತ್ನಾಕರ, ಸ್ವರ್ಣಭೂಷಣ, ವೇದಾಂತಗಂಗಾಧರ, ಅದ್ವೈತವೇದಾಂತವಾಚಸ್ಪತಿ, ಅದ್ವೈತವೇದಾಂತಶಿಖಾಮಣಿ, ಗೋವಿಂದಲಕ್ಷ್ಮೀಪುರಸ್ಕಾರ, ಬಸವನಗುಡಿರತ್ನ, ಶ್ರೀ ಶ್ರೀ ಸದ್ಗುರುಹೃದಯಭಾಸ್ಕರ, ಅದ್ವೈತವೇದಾಂತ ಸವ್ಯಸಾಚಿ, ಸದ್ಗುರು ಸೇವಾ ಧುರೀಣ, ಪರಿಪೂರ್ಣ ಮಹನೀಯ ೨೦೧೨, ಮಂತ್ರಾಲಯದ ಶ್ರೀಶ್ರೀಸುಶಮೀಂದ್ರತೀರ್ಥಸ್ವಾಮೀಜಿ **"ರಾಷ್ಟ್ರೀಯ ಜ್ಞಾನ ಪುರಸ್ಕಾರ"**, ಅದ್ವೈತ ವೇದಾಂತ ಪ್ರತಿಭಾ ಪ್ರಕಾಶ, ಜಿಜ್ಞಾಸುಕಾಮಧೇನು, ಮುಮುಕ್ಷುಮೋಕ್ಷಧೇನು, ಉಪನಿಷದ್ ರತ್ನಾಕರ, ಶ್ರೀ ಸಿದ್ಧಾರೂಢ ಸದ್ಭಾವನಾ ಪ್ರಶಸ್ತಿ, ವೇದಾಂತ ಪ್ರವಚನ ಚತುರ, ವೇದಾಂತ ಪರುಷಮಣಿ, ಶಾಂಕರಾದ್ವೈತವೇದಾಂತಾಚಾರ್ಯ, ಅದ್ವೈತವೇದಾಂತಸಾರಥಿ, ಶ್ರೀಪ್ರಸನ್ನಗಣಪತಿ (ಬಲಮುರಿ) ಅನುಗ್ರಹ ಪ್ರಶಸ್ತಿ—೨೦೧೫, ಪ್ರಾಜ್ಞ ವೇದಾಂತ ಯೋಗ, ವೇದಾಂತ ಚಕ್ರವರ್ತಿ, ಸರ್ವಋತು ಪ್ರವಚನಕಾರ, ವೇದಾಂತವಿದ್ಯಾಕೌಸ್ತುಭ, ಅಧ್ಯಾತ್ಮ ಪ್ರವಚನ ಭೂಷಣ, "೭೦ರ ವೀರ ವೇದಾಂತಿ", **ಶಾಂಕರಭಾಷ್ಯಭಾಸ್ಕರ, ಬ್ರಹ್ಮವಿದ್ಯಾಪಾರಂಗತ, ವೇದ ವಾರಿಧಿ, ಸಹೃದಯ ಅಧ್ಯಾತ್ಮ ಚಿಂತಕ, ವಿಪ್ರರತ್ನ ಶಿರೋಮಣಿ, ಅದ್ಭುತ ಶಾಂಕರ ರತ್ನ, ಸುವರ್ಣ ಕರ್ನಾಟಕ "ರಾಜ್ಯೋತ್ಸವ ಪ್ರಶಸ್ತಿ"—೨೦೦೫**, ಮತ್ತು **"ಸುವರ್ಣ ಕರ್ನಾಟಕ ಸಾಹಿತ್ಯ ಪ್ರಶಸ್ತಿ"** ಪುರಸ್ಕೃತ,

**ಅದ್ವೈತ ವಾಚಸ್ಪತಿ, ಮಹಾಮಹೋಪಾಧ್ಯಾಯ ವೇ. ಬ್ರ. ಶ್ರೀ ವಿದ್ವಾನ್**

**ಡಾ॥ ಕೆ. ಜಿ. ಸುಬ್ರಾಯಶರ್ಮಾ, ಎಂ.ಎ., ಡಿ.ಲಿಟ್.**

**(ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ಅಂತೇವಾಸಿ ಸಾಕ್ಷಾತ್‌ಶಿಷ್ಯರು)**

**ಶ್ರೀ ನಿತ್ಯಾನಂದ ಪ್ರಿಂಟರ್ಸ್**

ಅಶೋಕನಗರ, ಬೆಂಗಳೂರು - 560 050

a1

**ದ್ವಿತೀಯ ಮುದ್ರಣ: ನವೆಂಬರ್ 2018**

**“ಅದ್ಭುತ ಶಂಕರ”-100**
“ADBHUTA SHANKARA” – 100
**100th** Flower in the ‘**Aananda Grantha Maalaa**’ Series
*by* Vedanta Chakravarthi, **Mahaamahopaadhyaaya**
Vidwan **Dr. K. G. SUBRAYA SHARMA, M.A., D.Litt.**
# 127, “**Seetha-Preethi**”, Balaji Nagar,
ICICI Bank Cross Road, Uttarahalli Main Road
**P. O. Subrahmanyapura, Bengaluru - 560 061**
**Ph : 080-2639 6786 ; Mobile : 98862 81622**
e-mail: kgssharma@gmail.com
website: kgssharma.in

**Pages: viii + 48 = 56; Price: Rs. 40/- ; ಬೆಲೆ: ರೂ. 40/-**

**First Edition : July 2018 ; 1000 Copies**
**Second Edition : November 2018 ; 1000 Copies**

© All Rights Reserved by the **Author**

© ಈ ಗ್ರಂಥದ ಹಕ್ಕುಗಳೆಲ್ಲವೂ **ಲೇಖಕರಿಗೇ** ಸೇರಿವೆ.

**For Copies and other Books Please Contact**
**Adbhuta Shaankara Ratna, Mahaamahopaadhyaaya, Vidwan**
**Dr. K. G. SUBRAYA SHARMA, M.A., D.Litt.**
**# 127, “Seetha-Preethi”, Balaji Nagar,**
**ICICI Bank Cross Rd., Uttarahalli Main Rd.**
**P. O. Subrahmanyapura, Bengaluru - 560 061**
**Ph: 080-2639 6786 ; Mobile: 98862 81622**
**e-mail: kgssharma@gmail.com**
**website: kgssharma.in**

*Printed and Published by*
B. N. Nataraj
Sri Nithyananda Printers
# 46, 4th Cross, Ashoknagar, BSK 1st Stage
Bengaluru - 560 050. © 2242 6027

# ನಮೋ ನಮಃ ಸದ್ಗುರುಪಾದುಕಾಭ್ಯಾಮ್

ನನ್ನ ಅಂತರಂಗದ ಆರಾಧ್ಯದೇವತೆಯಾಗಿರುವ **ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸದ್ಗುರುಗಳವರ** ಪರಮಪವಿತ್ರಪಾವನಪಾದಾರವಿಂದಂಗಳಲ್ಲಿ ನನ್ನ ಹೃತ್ಪೂರ್ವಕವಾದ ಸಾಷ್ಟಾಂಗ ಪ್ರಣಾಮಗಳನ್ನು ಭಕ್ತಿಯಿಂದ ಸಮರ್ಪಿಸು ತ್ತಿದ್ದೇನೆ. ನನ್ನ ಹದಿನಾರು ವರ್ಷಗಳ (೧೯೫೯ ರಿಂದ ೧೯೭೫) ಗುರುಕುಲ ವಾಸದ ಅವಧಿಯಲ್ಲಿ ನನಗೆ ಅಖಂಡಸದ್ಗುರುಸೇವಾಸೌಭಾಗ್ಯವು ದೊರಕಿದ್ದು ನನ್ನ ಪೂರ್ವಪುಣ್ಯದ ಫಲ! ಆ ಅವಧಿಯಲ್ಲಿ ನನ್ನ ಸದ್ಗುರುಗಳು ಕೂತಾಗ, ನಿಂತಾಗ, ಕೈಹಿಡಿದು ನಡೆಸುವಾಗ, ಬರುವಾಗ, ಭಿಕ್ಷೆಹಾಕುವಾಗ, ಸ್ನಾನ ಮಾಡಿಸುವಾಗ, ಬರೆಯುವಾಗ, ಮಲಗುವಾಗಲೆಲ್ಲ ನನಗೆ ಅನೇಕ ವಿಷಯ ಗಳನ್ನು ಹೇಳುತ್ತಲೇ ಇದ್ದರು. ಇದನ್ನೆಲ್ಲ ನಾನು **ಸದ್ಗುರೂಪದೇಶಗಳು** ಎಂದೇ ಭಾವಿಸಿರುತ್ತೇನೆ. ಇದೆಲ್ಲವೂ ಸದ್ಗುರುಕೃಪೆಯೇ ಅಲ್ಲವೇ?

ಸುಮಾರು ಎಂಭತ್ತರಿಂದ ತೊಂಭತ್ತಾರರ ವರ್ಷದ ವರೆಗೆ, ವಯೋವೃದ್ಧ ರಾದ ಆ ಯತಿಪುಂಗವರ ಸೇವಾಭಾಗ್ಯವು ನನಗೆ ಲಭ್ಯವಾದದ್ದು ನನ್ನ ಸೌಭಾಗ್ಯ! ನನಗೆ ಪಾಠಮಾಡುವಾಗ ಆಗಾಗ್ಗೆ ಸದ್ಗುರುಗಳು **ಇದು ಶಂಕರರ ಅದ್ಭುತ ವಾಕ್ಯ, ಸಂದೇಶ, ಸ್ತೋತ್ರ, ಸಾಧನೆ, ಉಪದೇಶಗಳು** ಎಂದೆಲ್ಲಾ ಹೇಳು ತ್ತಿದ್ದರು. ನಾನೂ ಕೂಡ ನನ್ನ ಉಪನ್ಯಾಸಗಳಲ್ಲಿ, ಪ್ರವಚನಗಳಲ್ಲಿ ಆಗಾಗ್ಗೆ **"ಇದು ಅದ್ಭುತಶಂಕರರ ಅದ್ಭುತಸಂದೇಶ"** ಎಂದು ಈಗಲೂ ಹೇಳುತ್ತಲೇ ಇರುತ್ತೇನೆ. ಶ್ರೋತೃಗಳ ಅಪೇಕ್ಷೆಯಂತೆ **"ಅದ್ಭುತ ಶಂಕರ"**–೧೦೦ ಎಂಬೀ ಗ್ರಂಥವನ್ನು ಬರೆದು ಸದ್ಗುರುಗಳ ಚರಣಾರವಿಂದಂಗಳಲ್ಲಿ ಪ್ರೀತಿಯಿಂದ ಸಮರ್ಪಿಸುತ್ತಿದ್ದೇನೆ.

೧೯೫೯ ರಿಂದ ೨೦೧೮ ರ ವರೆಗೂ, ಇಂದಿಗೂ ವೇದಾಂತಪ್ರವಚನ ಗಳನ್ನು ಮಾಡುತ್ತಾ, ವೇದಾಂತಗ್ರಂಥಗಳನ್ನೂ ರಚಿಸುತ್ತಾ ನನ್ನ ಜೀವನವು ಪೂರಾ ವೇದಾಂತಾರ್ಥಾನುಸಂಧಾನದಲ್ಲಿಯೇ ಸಾಗುತ್ತಿರುವುದು ಸದ್ಗುರುಗಳ ಕೃಪಾಶೀರ್ವಾದದ ಫಲವೆಂದೇ ನಾನು ಭಾವಿಸಿರುತ್ತೇನೆ. ಪ್ರಕೃತ, **"ಅದ್ಭುತ ಶಂಕರ"** ಎಂಬೀ **ಒಂದುನೂರನೆಯ ಗ್ರಂಥದಲ್ಲಿ** ಶ್ರೀಶಂಕರರ ಅದ್ಭುತಸಂದೇಶ ಗಳನ್ನು ಸಂಕ್ಷೇಪವಾಗಿ ತಿಳಿಸಿದ್ದೇನೆ. ಶ್ರೀಶಂಕರರ ಭಕ್ತರಿಗೆ ಇದರಿಂದ ಹೆಚ್ಚಿನ ಪ್ರಯೋಜನವು ಉಂಟಾಗುವುದರಲ್ಲಿ ಸಂಶಯವಿಲ್ಲ.

॥ ನಮೋ ನಮಃ ಸದ್ಗುರುಪಾದುಕಾಭ್ಯಾಮ್ ॥

ಶ್ರೀ'ವಿಳಂಬಿ'ಸಂವತ್ಸರದ
ನಿಜಜ್ಯೇಷ್ಠಶುದ್ಧ ಪೂರ್ಣಿಮಾ
28-6-2018, ಗುರುವಾರ

**ಕೆ. ಜಿ. ಸುಬ್ರಾಯಶರ್ಮಾ**
ಸದ್ಗುರುಪಾದರೇಣುಃ
ಉತ್ತರಹಳ್ಳಿ, ಬೆಂಗಳೂರು-61

# "ಅದ್ಭುತ ಶಂಕರ", ಒಂದುನೂರನೆಯ ಗ್ರಂಥರತ್ನವಿದು!

ಪ್ರಿಯ ವಾಚಕರೇ, ಇದೀಗ ನಿಮ್ಮ ಕರಪಲ್ಲವಗಳನ್ನು ಪವಿತ್ರಗೊಳಿಸುತ್ತಾ ಕಣ್ಮನಗಳನ್ನು ಸಂತೋಷಿಸುತ್ತಾ ಕಂಗೊಳಿಸುತ್ತಿರುವ ಈ ಗ್ರಂಥಕ್ಕೆ **"ಅದ್ಭುತ ಶಂಕರ"** ಎಂದು ಹೆಸರು. ಇದು ನನ್ನ ಕೈಗಳಿಂದ, ಸದ್ಗುರುಗಳ ಅನುಗ್ರಹದ ಫಲವಾಗಿ ರಚಿತವಾಗಿರುವ **ಒಂದುನೂರನೆಯ ಕೃತಿರತ್ನ**. ಸದ್ಗುರುಸೇವೆಯಿಂದ, ಸದ್ಗುರು ಕೃಪಾಶೀರ್ವಾದಗಳಿಂದ ಏನೇನು ಫಲಗಳಾಗಬಹುದು? ಎನ್ನುವುದಕ್ಕೆ ಇಲ್ಲಿಯವರೆಗೆ ಒಂದುನೂರು ವೇದಾಂತಗ್ರಂಥರತ್ನಗಳು ನನ್ನಿಂದ ರಚಿತವಾಗಿರುವುದೇ ಜ್ವಲಂತ ಹಾಗೂ ಜೀವಂತ ಉದಾಹರಣೆಯಾಗಿದೆ!

ಶ್ರೀಶಂಕರಭಗವತ್ಪಾದಾಚಾರ್ಯರೇ ಒಬ್ಬ **ಅದ್ಭುತ ಮಹಾತ್ಮರು**. ಅವರ ಜನ್ಮ, ಸಾಧನೆ, ತಪಸ್ಸು, ಅನುಷ್ಠಾನ, ಉಪದೇಶಗಳೆಲ್ಲವೂ **ಅದ್ಭುತವೇ**. **"ಅದ್ಭುತ ಶಂಕರ"** ಎಂಬೀ **ಒಂದುನೂರನೆಯ ಗ್ರಂಥದಲ್ಲಿ** ನನಗೆ ತಿಳಿದಂತೆ, ಹಾಗೂ ನನ್ನ ಸದ್ಗುರುಗಳು ನನಗೆ ತಿಳಿಸಿರುವಂತೆ ಶ್ರೀಶಂಕರರ ಕೆಲವು ಅದ್ಭುತ ಅಸಾಧಾರಣ ವಿಷಯಗಳನ್ನು ಬರೆದಿರುತ್ತೇನೆ. ಸರಳಭಾಷೆಯಲ್ಲಿ , ಒಂದೊಂದೇ ಪುಟದಲ್ಲಿರುವ ಈ **"ಅದ್ಭುತ ಶಂಕರ"**ರ ಅದ್ಭುತ ಸಾಧನೆಗಳನ್ನು ಓದಿದವರಿಗೆ ಶ್ರೀಶಂಕರಾಚಾರ್ಯರ ಅಸಾಧಾರಣ, ಅನಿತರಸಾಧಾರಣ ಅದ್ಭುತ ಮಹಿಮೆಗಳು ಅರ್ಥವಾಗುವುದರಲ್ಲಿ ಸಂಶಯವಿಲ್ಲ.

**"ಅದ್ಭುತ ಶಂಕರ"**ರ ಅನೇಕ ಅದ್ಭುತಗಳಲ್ಲಿ ಅವರು ಬರೆದಿರುವ **ಪ್ರಸ್ಥಾನತ್ರಯಭಾಷ್ಯಗ್ರಂಥಗಳೇ** ಪರಮಾದ್ಭುತವಾಗಿರುತ್ತವೆ. **ಬ್ರಹ್ಮಾತ್ಮಜ್ಞಾನದಿಂದಲೇ ಅವಿದ್ಯೆಯು ಬಾಧಿತವಾಗಿ, ಅದರಿಂದ ಜನ್ಮಮರಣಾದಿ ಸಕಲ ಸಂಸಾರಾನರ್ಥಗಳೂ ನಾಶವಾಗಿ, ಮುಮುಕ್ಷುಗಳು ಈ ಜನ್ಮದಲ್ಲಿಯೇ ಮುಕ್ತರಾಗುತ್ತಾರೆ ಎಂಬೀ ಔಪನಿಷದ ಸಂದೇಶಗಳನ್ನು ಶ್ರೀಶಂಕರರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಶ್ರುತಿ ಯುಕ್ತಿ ಅನುಭವಗಳಿಂದ, ಪದವಾಕ್ಯ ಪ್ರಮಾಣಗಳಿಂದ ಅತ್ಯಂತ ಸುಂದರವಾಗಿ ಪ್ರತಿಪಾದಿಸಿರುತ್ತಾರೆ.** ಈ ವಿಷಯಗಳನ್ನೆಲ್ಲ ತತ್ತ್ವಜಿಜ್ಞಾಸುಗಳು ಶ್ರೀಶಂಕರರ ಭಾಷ್ಯಗ್ರಂಥಗಳನ್ನು ಅಧ್ಯಯನ ಮಾಡಿಯೇ ತಿಳಿದುಕೊಳ್ಳಬೇಕು. ಆದರೆ ಈ **"ಅದ್ಭುತ ಶಂಕರ"** ಗ್ರಂಥದಲ್ಲಿ ಶ್ರೀಶಂಕರರ ಕೆಲವು ಅದ್ಭುತವಿಷಯಗಳನ್ನು ತಿಳಿಸಿದೆ. ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಶ್ರೀ ನಟರಾಜ್‌ರವರಿಗೆ ನನ್ನ ಪ್ರೀತಿಯ ವಂದನೆಗಳು.

ಶ್ರೀ'**ವಿಳಂಬಿ**'ಸಂವತ್ಸರದ
ನಿಜ ಜ್ಯೇಷ್ಠ ಪಂಚಮೀ
18-6-2018, ಸೋಮವಾರ

ಮಹಾಮಹೋಪಾಧ್ಯಾಯ ವಿದ್ವಾನ್
**ಡಾ|| ಕೆ. ಜಿ. ಸುಬ್ರಾಯಶರ್ಮಾ**
☎ 080-2639 6786, 98862 81622

# ದ್ವಿತೀಯ ಮುದ್ರಣಕ್ಕೆ ಎರಡು ಸಿಹಿಮಾತುಗಳು

**“ಅದ್ಭುತ ಶಂಕರ”**: ಇದು ನನ್ನ **ಒಂದುನೂರನೆಯ ವೇದಾಂತ ಕೃತಿರತ್ನ**. ಇದರಲ್ಲಿ ಶ್ರೀಶಂಕರರ ನಲವತ್ತು ಅದ್ಭುತಸಂದೇಶಗಳನ್ನು ತಿಳಿಸಿದೆ. ಅದೂ ಶಾಂಕರಭಾಷ್ಯವಾಕ್ಯಗಳ ಪ್ರಮಾಣೋದಾಹರಣೆಯಿಂದಲೇ ಇದನ್ನೆಲ್ಲ ತಿಳಿಸಿದೆ.

**ಶಂಕರ** ಎಂದ ಕೂಡಲೇ ನನ್ನೊಳಗೆ ಒಂದು ಅದ್ಭುತ ವಿದ್ಯುತ್ ಸಂಚಾರ ವಾಗುತ್ತದೆ, ರೋಮಾಂಚನವೂ ಆಗಿಬಿಡುತ್ತದೆ. ಇದಕ್ಕೆ ಕಾರಣ: ೧೯೫೯ ರಿಂದ ಇಂದಿನವರೆಗೂ, ಅಂದರೆ **ಸುಮಾರು ೫೯ ವರ್ಷಗಳಿಂದಲೂ ನಾನು ಶಾಂಕರ ಪ್ರಸ್ಥಾನತ್ರಯಭಾಷ್ಯಾಮೃತಸಾಗರದಲ್ಲಿಯೇ ಮುಳುಗಿರುತ್ತೇನೆ.** ಇದೆಲ್ಲವೂ ನನ್ನ ಸದ್ಗುರುಗಳ ಕೃಪಾಶೀರ್ವಾದದ ಫಲ!

**“ಅದ್ಭುತ ಶಂಕರ”** ಗ್ರಂಥದ ಲೋಕಾರ್ಪಣ ಸಮಾರಂಭವೂ **೨೧-೧೦-೨೦೧೮ ಭಾನುವಾರದಂದು** ಅದ್ಭುತ ಗಣ್ಯರ, ಅತಿಥಿಗಳ ಹಾಗೂ ಶಂಕರಾಭಿಮಾನಿಗಳ ಸಂನಿಧಾನದಲ್ಲಿ ಅದ್ಭುತವಾಗಿ ನಡೆಯಿತು. **ಅಧ್ಯಾತ್ಮ ಮಂದಿರ ಪ್ರವಚನ ಮಂದಿರವು** ಶ್ರೋತೃಗಳಿಂದ ಭರ್ತಿಯಾಗಿತ್ತು. **ಮುದ್ರಣಗೊಂಡಿದ್ದ ಒಂದು ಸಾವಿರ ಪ್ರತಿಗಳೂ ಹತ್ತೇ ನಿಮಿಷಗಳಲ್ಲಿ ಪೂರ್ಣ ಖಾಲಿಯಾಗಿಬಿಟ್ಟವು**. ಇದೂ ಒಂದು ಅದ್ಭುತವೇ! ನೂರಾರು ಅಭಿಮಾನಿಗಳ ಬಾಯಿಗಳಿಂದ **ಅದ್ಭುತ ಶಂಕರ** ಗ್ರಂಥದ ಬಗ್ಗೆ ಅದ್ಭುತ ಪ್ರಶಂಸೆಗಳೇ ಅಭಿವ್ಯಕ್ತಗೊಳ್ಳುತ್ತಿದ್ದವು.

ಪುನಃ ಗ್ರಂಥದ ಬೇಡಿಕೆಗಳು ಅಭಿಮಾನಿಗಳಿಂದ ಬರುತ್ತಿರುವುದನ್ನು ಗಮನಿಸಿ ಇದೀಗ **“ಅದ್ಭುತ ಶಂಕರ”** ಗ್ರಂಥದ ಎರಡನೆಯ ಆವೃತ್ತಿಯನ್ನು ಮಾಡಿಸಿರುತ್ತದೆ.

**ಅದ್ಭುತ ಭಾರತಮಾತೆಯ ಅದ್ಭುತ ಸುಪುತ್ರರಾದ, ಅದ್ಭುತ ಅದ್ವೈತಾಚಾರ್ಯರೂ ಆಗಿರುವ ಅದ್ಭುತ ಶಂಕರರ ಅದ್ಭುತ ಸಂದೇಶ ಗಳನ್ನು ಅಧ್ಯಯನಮಾಡಿ ನಾವೆಲ್ಲರೂ ಅದ್ಭುತ ಹಾಗೂ ಅದೃಷ್ಟ ಮಾನವ ರಾಗೋಣವೇ?**

ಶ್ರೀ‘ವಿಳಂಬಿ’ನಾಮ ಸಂವತ್ಸರದ
ಆಶ್ವಯುಜ ಶುದ್ಧ ಪೂರ್ಣಿಮಾ
24-10-2018, ಬುಧವಾರ

**ಲೇಖಕ, ಕೆ. ಜಿ. ಸುಬ್ರಾಯಶರ್ಮಾ**
ಉತ್ತರಹಳ್ಳಿ, ಬೆಂಗಳೂರು-61
080-2639 6786; 98862 81622

॥ ಓಮ್ ಅದ್ಭುತಶಂಕರಾಯ ನಮೋ ನಮಃ ॥

# ಪರಮಾರ್ಥ ವಿಚಾರ ಸಂಘ ಟ್ರಸ್ಟ್ (ರಿ.)

**ಅಧ್ಯಾತ್ಮ ಮಂದಿರ, ವಿಶ್ವೇಶ್ವರಪುರಂ, ಬೆಂಗಳೂರು–೫೬೦೦೦೪**

## ಗ್ರಂಥಲೋಕಾರ್ಪಣ ಸಮಾರಂಭಾಹ್ವಾನಪತ್ರಿಕಾ

**ವೇದಾಂತಚಕ್ರವರ್ತಿ, ಮಹಾಮಹೋಪಾಧ್ಯಾಯ**

**ವಿದ್ವಾನ್ ಡಾ॥ ಕೆ. ಜಿ. ಸುಬ್ರಾಯಶರ್ಮಾರವರ**

# "ಅದ್ಭುತ ಶಂಕರ"

**ಆನಂದ ಗ್ರಂಥಮಾಲಾ 100ನೇ ಕುಸುಮ**

**ಗ್ರಂಥದ ಲೋಕಾರ್ಪಣ ಸಮಾರಂಭವನ್ನು ಏರ್ಪಡಿಸಿದೆ.**

**ತಾ॥ 21-10-2018, ಭಾನುವಾರ ಬೆಳಗ್ಗೆ 8 ರಿಂದ 10**

**ಸ್ಥಳ: "ಅಧ್ಯಾತ್ಮ ಮಂದಿರ", ವಿಶ್ವೇಶ್ವರಪುರಂ, ಬೆಂಗಳೂರು-4**

| | | |
|---|---|---|
| ಗ್ರಂಥಲೋಕಾರ್ಪಣೆ | : | **ಪೂಜ್ಯ ಶ್ರೀ ಶ್ರೀ ಸದಾನಂದಗಿರಿ ಸ್ವಾಮೀಜಿ** |
| ಅತಿಥಿಗಳು | : | **ಡಾ॥ ಪ್ರೊ. ವೈ. ರಾಜಾರಾಂ**<br>ರಾಮಯ್ಯ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್<br>**ಡಾ॥ ಪ್ರೊ. ಎಸ್. ಎನ್. ಓಂಕಾರ್**, ಯೋಗಾಚಾರ್ಯ<br>ದಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್<br>**ಡಾ॥ ಪ್ರೊ. ವೈ. ನರಹರಿ**<br>ದಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ |
| ಅಧ್ಯಕ್ಷತೆ | : | **ಶ್ರೀ ಬಿ. ಎ. ಮಂಜುನಾಥ್**, ಚಾರ್ಟರ್ಡ್ ಅಕೌಂಟೆಂಟ್<br>ಅಧ್ಯಕ್ಷರು, ಪರಮಾರ್ಥ ವಿಚಾರ ಸಂಘ ಟ್ರಸ್ಟ್ (ರಿ.) |
| ಉಪಸ್ಥಿತಿ | : | **ಡಾ॥ ಕೆ. ಜಿ. ಸುಬ್ರಾಯಶರ್ಮಾ ದಂಪತಿಗಳು** |
| ಗ್ರಂಥ ಪರಿಚಯ | : | **ಡಾ॥ ಪ್ರೊ. ಆರ್. ಎನ್. ನಾಗರಾಜ್**<br>ದಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ |

*ಸರ್ವರಿಗೂ ಸುಸ್ವಾಗತ*

ಪರಮಾರ್ಥ ವಿಚಾರ ಸಂಘ ಟ್ರಸ್ಟ್ (ರಿ).
ಅಧ್ಯಕ್ಷರು ಮತ್ತು ಟ್ರಸ್ಟಿಗಳು

# “ಅದ್ಭುತ ಶಂಕರ”ಗ್ರಂಥದ ಅಂತರಂಗ


| | | |
|---|---|---|
| | ನಮೋ ನಮಃ ಸದ್ಗುರುಪಾದುಕಾಭ್ಯಾಮ್ | iii |
| | “ಅದ್ಭುತ ಶಂಕರ” ಒಂದುನೂರನೆಯ ಗ್ರಂಥರತ್ನವಿದು! | iv |
| | ದ್ವಿತೀಯ ಮುದ್ರಣಕ್ಕೆ ಎರಡು ಸಿಹಿಮಾತುಗಳು | v |
| | “ಅದ್ಭುತ ಶಂಕರ” ಗ್ರಂಥಲೋಕಾರ್ಪಣ ಆಹ್ವಾನ ಪತ್ರಿಕಾ | vi |
| 1. | ಅದ್ಭುತ ಸ್ವನಾಮಧನ್ಯರಾಗಿ | 1 |
| 2. | ಅದ್ಭುತ ಬ್ರಹ್ಮಚಾರಿಗಳಾಗಿ | 2 |
| 3. | ಅದ್ಭುತ ಮಾತೃಭಕ್ತರಾಗಿ | 3 |
| 4. | ಅದ್ಭುತ ಸಂನ್ಯಾಸಿಗಳಾಗಿ | 4 |
| 5. | ಅದ್ಭುತ ಸಿದ್ಧಿಪುರುಷರಾಗಿ | 5 |
| 6. | ಅದ್ಭುತ ಬ್ರಹ್ಮಾನುಭವಿಗಳಾಗಿ | 6 |
| 7. | ಅದ್ಭುತ ಆತ್ಮತತ್ತ್ವವಿದರಾಗಿ | 7 |
| 8. | ಅದ್ಭುತ ಮಾಯಾಸತತ್ತ್ವವಿದರಾಗಿ | 8 |
| 9. | ಅದ್ಭುತ ಮುನಿಪುಂಗವರಾಗಿ | 9 |
| 10. | ಅದ್ಭುತ ಆಗಮಾಭಿಜ್ಞರಾಗಿ | 10 |
| 11. | ಅದ್ಭುತ ವೇದಾಂತಿಗಳಾಗಿ | 11 |
| 12. | ಅದ್ಭುತ ಪರಮಾರ್ಥದರ್ಶಿಗಳಾಗಿ | 12 |
| 13. | ಅದ್ಭುತ ಶಾಸ್ತ್ರತಾತ್ಪರ್ಯವಿದರಾಗಿ | 13 |
| 14. | ಅದ್ಭುತ ಸಂಪ್ರದಾಯವಿದರಾಗಿ | 14 |
| 15. | ಅದ್ಭುತ ವೈರಾಗ್ಯಚಕ್ರವರ್ತಿಗಳಾಗಿ | 15 |
| 16. | ಅದ್ಭುತ ಅನುಕಂಪಿಗಳಾಗಿ | 16 |
| 17. | ಅದ್ಭುತ ವೈಯ್ಯಾಕರಣರಾಗಿ | 17 |
| 18. | ಅದ್ಭುತ ಹಿತೈಷಿಗಳಾಗಿ | 18 |
| 19. | ಅದ್ಭುತ ಆಲಂಕಾರಿಕರಾಗಿ | 19 |
| 20. | ಅದ್ಭುತ ಕವಿಗಳಾಗಿ | 20 |
| 21. | ಅದ್ಭುತ ಬ್ರಹ್ಮಜ್ಞಾನಿಗಳಾಗಿ | 21 |

22. ಅದ್ಭುತ ಗುರುಭಕ್ತರಾಗಿ 22
23. ಅದ್ಭುತ ಭಕ್ತಿಸ್ತೋತ್ರಕರ್ತೃಗಳಾಗಿ 23
24. ಅದ್ಭುತ ಹಿತೋಪದೇಶಕರಾಗಿ 24
25. ಅದ್ಭುತ ಆಚಾರ್ಯರಾಗಿ 25
26. ಅದ್ಭುತ ಜಗದ್ಗುರುಗಳಾಗಿ 26
27. ಅದ್ಭುತಶಂಕರಾಷ್ಟಕಮ್ 27
28. ಅದ್ಭುತ ಏಕತಾಸಮತಾವಾದಿಗಳಾಗಿ 28
29. ಅದ್ಭುತ ಅಸಂಸಾರಿಗಳಾಗಿ 29
30. ಅದ್ಭುತ ಅಲಂಕಾರಪ್ರಿಯರಾಗಿ 30
31. ಅದ್ಭುತ ಪದವಾಕ್ಯಪ್ರಮಾಣಜ್ಞರಾಗಿ 31
32. ಅದ್ಭುತ ಸಂಶೋಧಕರಾಗಿ 32
33. ಅದ್ಭುತ ಸೂತ್ರಭಾಷ್ಯಕಾರರಾಗಿ 33
34. ಅದ್ಭುತ ವಾದಿರಾಜರಾಗಿ 34
35. ಅದ್ಭುತ ಗೀತಾಭಾಷ್ಯಕಾರರಾಗಿ 35
36. ಅದ್ಭುತ ಪ್ರಕರಣಗ್ರಂಥಕಾರರಾಗಿ 36
37. ಅದ್ಭುತ ಪರಿವ್ರಾಜಕರಾಗಿ 37
38. ಅದ್ಭುತ ಸದ್ಗುರುಭಕ್ತರಾಗಿ 38
39. ಅದ್ಭುತ ಬ್ರಹ್ಮನಿಷ್ಠರಾಗಿ 39
40. ಅದ್ಭುತ ಜೀವನ್ಮುಕ್ತರಾಗಿ 40
41. ಅದ್ಭುತ ಪ್ರಿಯಗುರುಗಳಾಗಿ 41
42. 'ಅದ್ಭುತ ಶಂಕರ"–೧೦೦ನೇ ಕೃತಿಯ ಲೋಕಾರ್ಪಣೆ 42
43. "ಗೌರವ ಪ್ರಶಸ್ತಿಪ್ರದಾನ ಪತ್ರ"—"ಅದ್ಭುತ ಶಾಂಕರರತ್ನ" 43
44. "ಅಭಿನಂದನಾ ಪತ್ರ"—"ವಿಪ್ರರತ್ನಶಿರೋಮಣಿ" 44
45. ಅದ್ಭುತ ಶೋಕಮೋಹಾತೀತರಾಗಿ 45
46. ಶ್ರೀಶರ್ಮರು, ಅದ್ಭುತ ವೇದಾಂತಿಗಳಾಗಿ! 46
47. ಗ್ರಂಥಗಳ ಪಟ್ಟಿ ಮತ್ತು ಸಿ.ಡಿ. M.P. 3 47

# 1. ಅದ್ಭುತ ಸ್ವನಾಮಧನ್ಯರಾಗಿ

**ಶಂಕರ** ಎಂಬ ಹೆಸರೇ ಅದ್ಭುತ! ಶಂಕರರ ಅವತಾರವೇ ಅದ್ಭುತ! ಶಂಕರರ ಜೀವನವೇ ಅದ್ಭುತ! ಶಂಕರರ ಸಾಧನೆಗಳೇ ಅದ್ಭುತ! ಶಂಕರರ ಉಪದೇಶಗಳೇ ಅದ್ಭುತ! ಶಂಕರರ ಭಾಷೆಯೇ ಅದ್ಭುತ! ಶಂಕರರ ಗ್ರಂಥಗಳೇ ಅದ್ಭುತ! ಶಂಕರರ ಮಾತುಗಳೇ ಅದ್ಭುತ! ಶಂಕರರ ವಿಚಾರಧಾರೆಯೇ ಅದ್ಭುತ! ಶಂಕರರ ವಾದಸರಣಿಯೇ ಅದ್ಭುತ! ಶಂಕರರ ಚರಿತ್ರೆಯೇ ಅದ್ಭುತ! ಶಂಕರರ ತಪಸ್ಸೇ ಅದ್ಭುತ! ಶಂಕರರ ಮಾತೃಭಕ್ತಿಯೇ ಅದ್ಭುತ! ಶಂಕರರ ಗುರುಭಕ್ತಿಯೇ ಅದ್ಭುತ! ಶಂಕರರ ಪಾಂಡಿತ್ಯವೇ ಅದ್ಭುತ! ಶಂಕರರ ಬ್ರಹ್ಮಜ್ಞಾನವೇ ಅದ್ಭುತ! ಶಂಕರರ ವಾಕ್ಯಶ್ರವಣವೇ ಅದ್ಭುತ! ಶಂಕರರ ಸ್ಮರಣೆಯೇ ಅದ್ಭುತ! ಶಂಕರರ ಕರುಣೆಯೇ ಅದ್ಭುತ! **ಹೀಗಾಗಿ ಶಂಕರರೇ ಅದ್ಭುತ**!

ಬಾಲಕನಿಗೆ **ಶಂ ಕ ರ** ಎಂದು ಮಾತಾಪಿತೃಗಳು ನಾಮಕರಣಮಾಡಿದರು. ಈ ಮೂರೂ ಅಕ್ಷರಗಳೇ ಅದ್ಭುತ! **ಶ** ಕಾರವು ಅವರ್ಗೀಯ ವ್ಯಂಜನಗಳ ಪೈಕಿ ಐದನೆಯದು; **ಕ** ಕಾರವು ಕವರ್ಗದಲ್ಲಿ ಮೊದಲನೆಯದು; **ರ** ಕಾರವು ಅವರ್ಗೀಯ ವ್ಯಂಜನಗಳಲ್ಲಿ ಎರಡನೆಯದು. ಹೀಗಾಗಿ ಐದು, ಒಂದು, ಎರಡು ಬರುತ್ತವೆ. ಈ ೫, ೧, ೨—ಈ ಮೂರೂ ಸಂಖ್ಯೆಗಳನ್ನು ಹಿಂದಿನಿಂದ ಲೆಕ್ಕಮಾಡಿದರೆ (ಅಂಕಾನಾಂ ವಾಮತೋ ಗತಿಃ), ಎರಡು, ಒಂದು, ಐದು— ೨, ೧, ೫ ಎಂದಾಗುತ್ತವೆ. ಎರಡು ಎಂದರೆ: ಎರಡನೆಯ ಮಾಸ: ಅಂದರೆ **ವೈಶಾಖಮಾಸ**; **ಒಂದು** ಎಂದರೆ ಮೊದಲನೆಯ ಪಕ್ಷ: ಎಂದರೆ **ಶುಕ್ಲಪಕ್ಷ**; **ಐದು** ಎಂದರೆ **ಪಂಚಮೀತಿಥಿ**; ಹೀಗೆ **ವೈಶಾಖಮಾಸದ ಶುಕ್ಲಪಕ್ಷದ ಪಂಚಮೀ ತಿಥಿಯಲ್ಲಿ ಹುಟ್ಟಿದವನೇ ಶಂಕರ**ನೆಂಬ ಅದ್ಭುತ ಬಾಲಕ.

ಇನ್ನು, **ಶಂಕರ** ಎಂದರೆ **ಶಂ ಕರೋತಿ ಇತಿ ಶಂಕರಃ, ಶಂ ಶಮಂ ಕರೋತಿ, ಶಂ ಸುಖಂ ಕರೋತಿ, ಶಂ ಶಾಂತಿಂ ಕರೋತಿ, ಶಂ ಶುಭಂ ಕರೋತಿ, ಶಂ ತೃಪ್ತಿಂ ಕರೋತಿ, ಶಮ್ ಆನಂದಂ ಕರೋತಿ, ಶಂ ಮೋಕ್ಷಂ ಕರೋತಿ, ಶಂ ಬ್ರಹ್ಮಜ್ಞಾನಂ ಕರೋತಿ, ಶಂ ಬ್ರಹ್ಮಾನಂದಂ ಕರೋತಿ ಇತಿ ಶಂಕರಃ**—ಎಂದೆಲ್ಲಾ ಅರ್ಥಮಾಡಬಹುದು. ಶ್ರೀಶಂಕರರು ಬ್ರಹ್ಮಾತ್ಮೈಕತ್ವ ಜ್ಞಾನೋಪದೇಶದ ಮೂಲಕ ಪರಮಶಾಂತಿಯನ್ನು ಉಪದೇಶಿಸುತ್ತಾರೆ.

ಹೀಗಾಗಿ ಶ್ರೀಶಂಕರರು **ಶಂ ಕರರಾಗಿ** ಸ್ವನಾಮಧನ್ಯರಾಗಿರುತ್ತಾರೆ. ಅಲ್ಲಾ, **ಅದ್ಭುತ ಸ್ವನಾಮಧನ್ಯರೇ** ಆಗಿರುತ್ತಾರೆ. ಆದ್ದರಿಂದಲೇ ಈ ಗ್ರಂಥಕ್ಕೆ **ಅದ್ಭುತ ಶಂಕರ** ಎಂದೇ ನಾಮಕರಣವನ್ನು ಮಾಡಿರುತ್ತದೆ. **ಅದ್ಭುತ ಶಂಕರರ ಅದ್ಭುತ ಸಂದೇಶ, ಅದ್ಭುತ ಸಾಧನೆಗಳ ಅದ್ಭುತ ಕೃತಿಯಿದು.**

# 2. ಅದ್ಭುತ ಬ್ರಹ್ಮಚಾರಿಗಳಾಗಿ

ಮೂರನೆಯ ವರ್ಷದಲ್ಲೇ ತಂದೆಯನ್ನು ಕಳೆದುಕೊಂಡ ಶಂಕರನಿಗೆ, ಅವರ ತಾಯಿ ಆರ್ಯಾಂಬೆಯು ಬ್ರಾಹ್ಮಣರ ಸಹಕಾರದಿಂದ ಐದನೆಯ ವರ್ಷದಲ್ಲಿಯೇ **ಉಪನಯನ**ವನ್ನು ಮಾಡಿದಳು. ಎಂಟನೆಯ ವಯಸ್ಸಿಗೇ ಶ್ರೀಶಂಕರನು ನಾಲ್ಕೂ ವೇದಗಳನ್ನು ಅಧ್ಯಯನಮಾಡಿ ಮೇಧಾವಿಯೂ, ತೇಜಸ್ವಿಯೂ, ವರ್ಚಸ್ವಿಯೂ, ಬ್ರಹ್ಮವರ್ಚಸ್ವಿಯೂ ಆಗಿ ಅದ್ಭುತ ಬ್ರಹ್ಮಚಾರಿಯಾಗಿ ಸೂರ್ಯನಂತೆ ಮೆರೆಯುತ್ತಿದ್ದನು. ಭಿಕ್ಷಾನ್ನದಿಂದಲೇ ಜೀವನವನ್ನು ಸಾಗಿಸುತ್ತಿದ್ದ ಶಂಕರನಿಗೆ ಅದ್ಭುತವಾದ ತಪಃಶಕ್ತಿಯೂ ವಾಕ್‌ಸಿದ್ಧಿಯೂ ಉಪಾಸನಾಸಿದ್ಧಿಯೂ ಸ್ವಾಧೀನವಾಗಿದ್ದವು. ಸತ್ಯವಂತರೂ, ಆರ್ಜವಗುಣ ಸಂಪನ್ನರೂ ಅನುಷ್ಠಾನತತ್ಪರರೂ ಆಚಾರವಂತರೂ ಆದ ವೇದಪುರುಷರಿಗೆ ಯಾವ ಸಿದ್ಧಿಗಳೂ ದುರ್ಲಭವಲ್ಲ; ಇದಕ್ಕೆ ಶ್ರೀಶಂಕರರೇ ಜ್ವಲಂತ ಉದಾಹರಣೆ!

ಒಂದು ದಿನ ಶಂಕರರು ಭಿಕ್ಷಾನ್ನಕ್ಕಾಗಿ ಸಂಚರಿಸುತ್ತಾ, ಒಬ್ಬ ದರಿದ್ರಳಾದ ವೃದ್ಧಳ ಮನೆಯ ಮುಂದೆ ನಿಂತು **ಭವತಿ ಭಿಕ್ಷಾಂ ದೇಹಿ** ಎಂದು ಮೂರು ಸಲ ಹೇಳಿದರಂತೆ. ಅತ್ಯಂತ ಸಂನ್ಯಾಸಿಪ್ರಿಯಳೂ, ಉದಾರಿಯೂ, ಆದರೆ ಕಡು ಬಡವಿಯೂ ಆದ ಆ ವೃದ್ಧೆಯು ಶ್ರೀಶಂಕರರ ಜೋಳಿಗೆಗೆ ಒಣಗಿದ ಒಂದು **ನೆಲ್ಲೀಕಾಯನ್ನು** ಹಾಕಿದಳಂತೆ. ಆ ಸಂನ್ಯಾಸಿಗೆ ಭಿಕ್ಷೆಯನ್ನು ಕೊಡುವುದಕ್ಕೆ ಆ ನೆಲ್ಲಿಕಾಯನ್ನು ಬಿಟ್ಟು, ಆ ಸಮಯದಲ್ಲಿ ಅವಳಲ್ಲಿ ಇನ್ನೇನೂ ಇರಲಿಲ್ಲವಂತೆ. ಆದ್ದರಿಂದ ಆ ಒಣಗಿದ ನೆಲ್ಲಿಕಾಯನ್ನು ಭಕ್ತಿಯಿಂದ ಪ್ರೀತಿಯಿಂದ ಶಂಕರರಿಗೆ ಸಮರ್ಪಿಸಿಬಿಟ್ಟಳಂತೆ. ಅದನ್ನೇ ಬ್ರಹ್ಮಚಾರಿಗಳಾದ ಶ್ರೀಶಂಕರರು ಪ್ರೀತಿಯಿಂದ ಸಂತೋಷದಿಂದ ಸ್ವೀಕರಿಸಿಬಿಟ್ಟರಂತೆ.

ಆದರೆ, ಈ ಕಷ್ಟ ಪರಿಸ್ಥಿತಿಯನ್ನು ಸ್ವತಃ ಕಂಡು ಶ್ರೀಶಂಕರರ ಹೃದಯವು ಕರಗಿಹೋಯಿತು. ಸಂನ್ಯಾಸಿಗೆ ಭಿಕ್ಷೆಹಾಕಬೇಕೆಂಬ ಹೆಬ್ಬಯಕೆಯು ಈ ವೃದ್ಧೆಗೆ ಇದೆ, ಆದರೆ ಭಿಕ್ಷೆಹಾಕಲು ಮನೆಯೊಳಗೆ ಏನೂ ಇಲ್ಲವಲ್ಲ! ಅಯ್ಯೋ ಪ್ರಾರಬ್ಧವೇ? ಎಂಥ ಸಂಕಟಸ್ಥಿತಿ! ಎಂದು ಮನದಲ್ಲಿ ನೊಂದು ಶ್ರೀಶಂಕರರು ಆ ಕೂಡಲೇ ಅಲ್ಲಿಂದಲೇ **ಕನಕಧಾರಾಸ್ತೋತ್ರ**ವನ್ನು ರಚಿಸಿ ಲಕ್ಷ್ಮೀದೇವಿಯನ್ನು ಪ್ರಾರ್ಥಿಸುತ್ತಾರೆ. ಶ್ರೀಶಂಕರರ ಭಕ್ತಿಪೂರ್ಣವಾದ ಈ ಸ್ತೋತ್ರದಿಂದ ಸಂತುಷ್ಟಳಾದ ಮಹಾಲಕ್ಷ್ಮಿಯು ಆ ವೃದ್ಧೆಯ ಮನೆಯ ಅಂಗಳದಲ್ಲಿ **ಕನಕವೃಷ್ಟಿಯನ್ನೇ** ಅಂದರೆ **ಬಂಗಾರದ ನಾಣ್ಯಗಳ ಮಳೆಯನ್ನೇ** ಸುರಿಸಿದಳೆಂದು ಕಥೆಯಿದೆ! ಇದರಿಂದ ಶ್ರೀಶಂಕರರು **ಅದ್ಭುತ ಬ್ರಹ್ಮಚಾರಿ**ಗಳೆಂದು ನಮಗೆ ತಿಳಿಯುತ್ತದೆ. **ಶ್ರೀಶಂಕರರ ಅದ್ಭುತ ಬ್ರಹ್ಮಚರ್ಯನಿಷ್ಠೆಗೆ ನಮ್ಮ ಅದ್ಭುತ ಶಂಕರರೇ ಸಾಟಿ!**

# 3. ಅದ್ಭುತ ಮಾತೃಭಕ್ತರಾಗಿ

ಶ್ರೀಶಂಕರರು ಸರ್ವಸಂಗಪರಿತ್ಯಾಗಿಗಳಾದ ಅದ್ಭುತ ಸಂನ್ಯಾಸಿಪುಂಗವರು. ಶ್ರೀಶಂಕರರಿಗೆ ಇವರು ನಮ್ಮ ಅಮ್ಮ, ನಾನು ಇವರ ಮಗ, ನಮ್ಮ ತಾಯಿಗೆ ಏಕೈಕ ಪುತ್ರ ನಾನು—ಎಂಬ ಗೌಣಾತ್ಮಜ್ಞಾನವು ಇರಲಿಲ್ಲ. ಗೌಣಾತ್ಮಮಿಥ್ಯಾತ್ಮ ಜ್ಞಾನಗಳೆರಡನ್ನೂ ಕಿತ್ತೊಗೆದು, **ಅಹಂ ಬ್ರಹ್ಮಾಸ್ಮಿ, ಚಿದಾನಂದರೂಪಃ ಶಿವೋऽಹಂ ಶಿವೋऽಹಂ** ಎಂಬ ಅದ್ವೈತಾತ್ಮಜ್ಞಾನನಿಷ್ಠೆಯಿಂದ ಬ್ರಹ್ಮನಿಷ್ಠ ರಾಗಿದ್ದ ಯತಿಪುಂಗವರು ಶ್ರೀಶಂಕರರು. ಇದು ಶಂಕರರ ನಿಜವಾದ ನಿಲುಮೆ! ಇದಿಷ್ಟೂ ಶ್ರೀಶಂಕರರ ನಿಶ್ಚಯಜ್ಞಾನ. ಇದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ.

ಆ ದ ರೆ, ಶ್ರೀಶಂಕರರಿಗೆ ಅದ್ಭುತವಾದ ಮಾತೃಭಕ್ತಿಯಿತ್ತು. ತಾಯಿಗೆ ಕೊಟ್ಟ ಮಾತಿನಂತೆ, ಶ್ರೀಶಂಕರರು ಅವರ ತಾಯಿಯ ಅಂತ್ಯಕಾಲದಲ್ಲಿ ಅಮ್ಮನ ಜೊತೆಯೇ ಇದ್ದರು. ಕಾಲಟಿಯಿಂದ ಸಹಸ್ರಾರು ಮೈಲಿಗಳ ದೂರದ ಕಾಶಿಯಲ್ಲೋ, ಬದರಿಯಲ್ಲೋ ಇದ್ದ ಶಂಕರರಿಗೆ "ಓ ಶಂಕರಾ, ಬಾರಪ್ಪಾ, ನನಗೆ ಅಂತ್ಯಕಾಲ ಬರುತ್ತಿದೆ" ಎಂಬ ಅಮ್ಮನ ಮಾತು ಕಿವಿಗೆ ಬಿದ್ದಕೂಡಲೇ ಶಂಕರರು ಪಾದುಕಾಸಿದ್ಧಿಯಿಂದ ಕ್ಷಣಮಾತ್ರದಲ್ಲಿ ಕಾಲಡಿಗೆ ಬಂದು ಅಮ್ಮನಿಗೆ ಪ್ರತ್ಯಕ್ಷರಾಗುತ್ತಾರೆ, ಎಂದರೆ, ಇದರಿಂದ ಶ್ರೀಶಂಕರರಿಗೆ ಇದ್ದ ಮಾತೃಭಕ್ತಿಯು ನಮಗೆ ತಿಳಿಯುತ್ತದೆಯಲ್ಲವೇ? ತನ್ನ ಏಕೈಕ ಪುತ್ರನಾದ ಆ ಬಾಲಶಂಕರನನ್ನು ನೋಡಿ ಅಮ್ಮನಿಗೆ ತುಂಬಾ ಸಂಕಟವೂ ಸಂತೋಷವೂ ಉಂಟಾಯಿತು.

ಮಗನನ್ನು ನೋಡುನೋಡುತ್ತಲೇ ಆರ್ಯಾಂಬಾತಾಯಿಯು ಪರಂಧಾಮ ವನ್ನು ಹೊಂದಿದಳಂತೆ. ಶಂಕರರ ಕಣ್ಣುಮುಂದೆಯೇ ತನ್ನ ತಾಯಿಯು ಮೃತಳಾದುದನ್ನು ಕಂಡು ಮಾತೃಭಕ್ತ ಸಂನ್ಯಾಸಿಗಳಾದ ಶ್ರೀಶಂಕರರಿಗೆ ಕಣ್ಣೀರು ಧಾರಾಕಾರವಾಗಿ ಹರಿಯಿತು. ಸಂನ್ಯಾಸಿಗಳೇ ಆದರೂ, ಬ್ರಹ್ಮನಿಷ್ಠರೇ ಆದರೂ ಅದ್ವೈತಾತ್ಮಜ್ಞಾನಸಂಪನ್ನರೇ ಆದರೂ ಶಂಕರರು ವ್ಯಾವಹಾರಿಕದೃಷ್ಟಿಯಿಂದ ಅಮ್ಮನಿಗೆ ಮಗನೇ ಅಲ್ಲವೇ? ಆರ್ಯಾಂಬೆಯು ಶ್ರೀಶಂಕರರಿಗೆ ಅಮ್ಮನೇ ಅಲ್ಲವೇ? ಇದು ಅವಿದ್ಯಾಅವಸ್ಥೆಯ ಮಾತು, ವ್ಯವಹಾರದೃಷ್ಟಿಯ ಮಾತಷ್ಟೇ?

ಸರಿ, ಇನ್ನು ಮುಂದಿನ ಕಾರ್ಯ! ತಮ್ಮ ಮಾತೃವಿನ ಔರ್ಧ್ವದೈಹಿಕ ಕಾರ್ಯಗಳನ್ನು ಮಾಡಲು ಆ ಊರಿನ ಯಾವ ಪುರೋಹಿತರೂ ಮುಂದಕ್ಕೆ ಬರಲಿಲ್ಲ. ಆಗ ಶ್ರೀಶಂಕರರೇ ಸ್ವತಃ ಸಂನ್ಯಾಸಿಗಳೇ ಆಗಿದ್ದರೂ, ತಮ್ಮ ಮಾತೃದೇಹಕ್ಕೆ ಸಂಸ್ಕಾರಗಳನ್ನೆಲ್ಲ ಮಾಡಿ ಅದನ್ನು ಅಗ್ನಿಯಲ್ಲಿ ಮಂತ್ರಪೂರ್ವಕ ವಾಗಿ ಸಮರ್ಪಿಸಿ ತಮ್ಮ ಅದ್ಭುತಮಾತೃಭಕ್ತಿಯನ್ನು ಜಗತ್ತಿಗೆ ತೋರಿಸಿದ್ದಾರೆ. ಶ್ರೀಶಂಕರಾಚಾರ್ಯರವರ **"ಮಾತೃಪಂಚಕ"**ದಲ್ಲಿ ನಾವಿದನ್ನು ಕಾಣಬಹುದು.

# 4. ಅದ್ಭುತ ಸಂನ್ಯಾಸಿಗಳಾಗಿ

ಶ್ರೀಶಂಕರರು ತಮ್ಮ ಏಳನೆಯ ವಯಸ್ಸಿನಲ್ಲಿಯೇ ಸಂನ್ಯಾಸಾಶ್ರಮವನ್ನು ಪ್ರವೇಶಿಸಿ ಅಪ್ಪಟ ಹಾಗೂ ಅದ್ಭುತಸಂನ್ಯಾಸಿಗಳಾಗಿಬಿಟ್ಟರು! ಸಂನ್ಯಾಸಿಗಳೆಂದರೆ ಅಹಂಕಾರಮಮಕಾರಗಳನ್ನೂ ರಾಗದ್ವೇಷಾದಿದೋಷಗಳನ್ನೂ ಶಿಖಾಯಜ್ಞೋಪವೀತಗಳನ್ನೂ ವಿಸರ್ಜನೆಮಾಡಿ, ವಿಧಿಪೂರ್ವಕವಾಗಿ ಶಾಸ್ತ್ರೋಕ್ತ ಕರ್ಮಗಳನ್ನೆಲ್ಲ ತ್ಯಾಗಮಾಡಿದ ಧೀರರು ಶಂಕರರು! ಕಾಷಾಯವಸ್ತ್ರವನ್ನು ಧರಿಸಿದ ಮಾತ್ರಕ್ಕೆ ಅವರು ಸಂನ್ಯಾಸಿಗಳಾಗುವುದಿಲ್ಲ. ಪುತ್ರೈಷಣ, ವಿತ್ತೈಷಣ ಮತ್ತು ಲೋಕೈಷಣಗಳೆಂಬ ಏಷಣಾತ್ರಯಗಳನ್ನು ಬಿಟ್ಟು ಸದಾ ಸರ್ವದಾ ವೇದಾಂತಚಿಂತನಪರರಾಗಿ, ವೇದಾಂತವಿಜ್ಞಾನಸುನಿಶ್ಚಿತಾರ್ಥರಾದ ಮಹಾತ್ಮರೇ ಸಂನ್ಯಾಸಿಗಳು. ಸಂನ್ಯಾಸಿಗಳ ಈ ಎಲ್ಲಾ ಲಕ್ಷಣಗಳೂ ಶ್ರೀಶಂಕರರಲ್ಲಿ ಸಂಪೂರ್ಣವಾಗಿದ್ದವು.

**ವೇದಾಂತವಾಕ್ಯೇಷು ಸದಾ ರಮಂತಃ**
**ಭಿಕ್ಷಾನ್ನಮಾತ್ರೇಣ ಚ ತುಷ್ಟಿಮಂತಃ ।**
**ವಿಶೋಕಮಂತಃಕರಣೇ ರಮಂತಃ**
**ಕೌಪೀನವಂತಃ ಖಲು ಭಾಗ್ಯವಂತಃ ॥**

ಎಂಬೀ ಶಂಕರರ ಶ್ಲೋಕಕ್ಕೆ ಶ್ರೀಶಂಕರರೇ ಜ್ವಲಂತ ಉದಾಹರಣೆಯಾಗಿದ್ದಾರೆ. ಯಾವಾಗಲೂ ವೇದಾಂತವಾಕ್ಯಗಳಲ್ಲಿಯೇ ರಮಿಸುವವರಾಗಿ, ಭಿಕ್ಷಾನ್ನದಿಂದ ಸಂತೃಪ್ತರಾಗಿ, ಅಂತಃಕರಣದಲ್ಲಿ ಶೋಕಮೋಹರಹಿತರಾಗಿ, ಸದಾ ಬ್ರಹ್ಮಾನಂದದಲ್ಲಿಯೇ ರಮಿಸುತ್ತಿರುವ ಕೌಪೀನಧಾರಿಗಳಾದ ಸಂನ್ಯಾಸಿಗಳೇ ನಿಜವಾಗಿಯೂ ಭಾಗ್ಯವಂತರಲ್ಲವೇ?

ಈ ಎಲ್ಲಾ ಲಕ್ಷಣಗಳೂ ಶ್ರೀಶಂಕರರಿಗೆ ಸಂಪೂರ್ಣವಾಗಿ ಅನ್ವಯವಾಗುತ್ತವೆ. ಶ್ರೀಶಂಕರರಿಗೆ ನಾನು ಸಂನ್ಯಾಸಿ, ನಾನು ಪಂಡಿತೋತ್ತಮ, ನಾನು ಬ್ರಾಹ್ಮಣ, ನಾನು ನೈಷ್ಠಿಕಬ್ರಹ್ಮಚಾರಿ, ನಾನು ವೇದಾಂತಭಾಷ್ಯಕಾರ, ನಾನು ಸಕಲಶಾಸ್ತ್ರಪಾರಂಗತ—ಎಂಬೀ **ಅಹಂಭಾವನೆಯು** ಸೊಲ್ಲೂ ಇರಲಿಲ್ಲ. ಇದು ನನ್ನದು, ಇವರೆಲ್ಲರೂ ನಮ್ಮವರು, ಇವಳು ನನ್ನ ಅಮ್ಮ, ಇವರು ನನ್ನ ಶತ್ರುಮಿತ್ರರು, ಇದು ನನ್ನ ಜಪಮಾಲೆ, ಇದು ನನ್ನ ದಂಡ, ಇದು ನನ್ನ ಕಮಂಡಲು ಇತ್ಯಾದಿ ಮಮಕಾರಗಳು ಶ್ರೀಶಂಕರರಿಗೆ ಸ್ವಲ್ಪವೂ ಇರಲಿಲ್ಲ.

ಕೇವಲ ನಿವೃತ್ತಿಮಾರ್ಗದಲ್ಲಿ ನಿಷ್ಠರಾಗಿ, ಶಮದಮಾದಿ ಸಾಧನಸಂಪನ್ನರಾಗಿ, ಸರ್ವದಾ ವೇದಾಂತಾರ್ಥಚಿಂತನಪರರಾಗಿ, ಆನಂದಸ್ವರೂಪಿಗಳಾಗಿದ್ದ ಶ್ರೀಶಂಕರರನ್ನು ನಾವುಗಳು **ಅದ್ಭುತ ಸಂನ್ಯಾಸಿಗಳೆಂದು** ಕರೆಯಬಹುದಲ್ಲವೇ?

# 5. ಅದ್ಭುತ ಸಿದ್ಧಿಪುರುಷರಾಗಿ

ಶ್ರೀಶಂಕರರು ಸ್ವತಃ ಬ್ರಹ್ಮಜ್ಞಾನಿಗಳಾದ ಜೀವನ್ಮುಕ್ತರೇ ಆಗಿದ್ದರು. ಆದರೂ ಅವರು ಅದ್ಭುತ ಪವಾಡಪುರುಷರೂ ಅದ್ಭುತ ಸಿದ್ಧಿಪುರುಷರೂ ಆಗಿ ಅನೇಕ ಪವಾಡಗಳನ್ನು ತೋರಿಸಿರುತ್ತಾರೆ. ನೈಷ್ಠಿಕಬ್ರಹ್ಮಚಾರಿಗಳಾಗಿ ಸತ್ಯವ್ರತನಿಷ್ಠರೂ ಬ್ರಹ್ಮಜ್ಞಾನಿಗಳೂ ಆಗಿದ್ದ ಶಂಕರರಿಗೆ ಯಾವುದೂ ಅಸಾಧಾರಣವಾದದ್ದಾಗಿರಲಿಲ್ಲ. ಆಯಾ ಸಂದರ್ಭಕ್ಕೆ ತಕ್ಕಂತೆ ಆಯಾ ಸಿದ್ಧಿಗಳೂ ಶಕ್ತಿಗಳೂ ಶ್ರೀಶಂಕರರಿಗೆ ಸಹಜವಾಗಿ ಬರುತ್ತಿದ್ದವು. ಶ್ರೀಶಂಕರರ ಮೂವತ್ತೆರಡು ವರ್ಷಗಳ ಜೀವಿತಕಾಲದಲ್ಲಿ ಶ್ರೀಶಂಕರರಿಂದ ನೂರಾರು ಅದ್ಭುತ ಪವಾಡಗಳು ನಡೆದುಹೋಗಿರುತ್ತವೆ. ಅವುಗಳಲ್ಲಿ ಒಂದೆರಡನ್ನು ನಾನಿಲ್ಲಿ ಹೇಳಲು ಪ್ರಯತ್ನಿಸುತ್ತೇನೆ.

**ಪೂರ್ಣಾನದಿಯನ್ನು ಹತ್ತಿರದಲ್ಲಿ ಹರಿಯುವಂತೆ ಮಾಡಿದ್ದು**

ಶ್ರೀಶಂಕರರ ಜನ್ಮಸ್ಥಳ ಕೇರಳದ ಕಾಲಡಿ ಎಂಬ ಗ್ರಾಮ. ಅಲ್ಲಿ ಹರಿಯುವ ನದಿ ಪೂರ್ಣಾನದಿ. ಶ್ರೀಶಂಕರರ ತಾಯಿ ಆರ್ಯಾಂಬೆಯು ಪ್ರತಿದಿನವೂ ನದೀಸ್ನಾನವನ್ನು ಮಾಡುತ್ತಿದ್ದರು. ಒಂದು ಸಂಕ್ರಮಣ ಅಥವಾ ಗ್ರಹಣದ ದಿನದಂದು ನದೀಸ್ನಾನವನ್ನು ಮಾಡಿಕೊಂಡು ಮನೆಗೆ ಬರುತ್ತಿದ್ದಾಗ ಆ ಬಿಸಿಲಿನ ತಾಪದಿಂದ ಆರ್ಯಾಂಬೆಯು ಆಯಾಸಗೊಂಡು ತಲೆತಿರುಗಿ ಬಿದ್ದುಬಿಟ್ಟರಂತೆ. ಮನೆಯಿಂದ ಒಂದೆರಡು ಮೈಲಿ ದೂರವಿದ್ದ ಆ ನದಿಗೆ ಸ್ನಾನಮಾಡಲು ಅಮ್ಮನು ಪ್ರತಿದಿನವೂ ಹೋಗಿಬರುತ್ತಿದ್ದರು. ಪ್ರಜ್ಞೆತಪ್ಪಿ ರಸ್ತೆಯಮೇಲೆ ತಮ್ಮ ತಾಯಿಯು ಬಿದ್ದದ್ದನ್ನು ಕಂಡು ಕಾರುಣ್ಯದಿಂದ ಶ್ರೀಶಂಕರರು ಆ ಪೂರ್ಣಾನದಿಯು ತಮ್ಮ ಮನೆಯ ಹತ್ತಿರದಲ್ಲಿಯೇ ಹರಿಯುವಂತೆ ಸಂಕಲ್ಪಮಾಡಿದರಂತೆ. ಅದರಂತೆ ಮಾರನೆಯ ದಿನ ಜೋರಾಗಿ ಮಳೆಯು ಬಂದು ಪೂರ್ಣಾನದಿಯು ಆರ್ಯಾಂಬೆವಾಸವಾಗಿದ್ದ ಆ ಮನೆಯ ಸಮೀಪದಲ್ಲಿಯೇ ಹರಿಯಲು ಪ್ರಾರಂಭವಾಯಿತಂತೆ.

**ನರ್ಮದಾನದಿನೀರನ್ನು ತಮ್ಮ ಕಮಂಡಲುವಿನಲ್ಲಿ ಅಡಗಿಸಿಬಿಟ್ಟರಂತೆ.**

ಶ್ರೀಶಂಕರರು ದಕ್ಷಿಣದ ಕಾಲಡಿಯಲ್ಲಿ ಪೂರ್ಣಾನದಿಯಲ್ಲಿ ಆತುರಸಂನ್ಯಾಸವನ್ನು ಸ್ವೀಕರಿಸಿ, ಕ್ರಮಸಂನ್ಯಾಸದೀಕ್ಷೆಗಾಗಿ ಉತ್ತರದಿಕ್ಕಿನ ನರ್ಮದಾತೀರದ ಸದ್ಗುರುಗಳ ಹತ್ತಿರಕ್ಕೆ ಹೋದರು. ಅಲ್ಲಿ ಗೋವಿಂದಭಗವತ್ಪಾದಾಚಾರ್ಯರಿಂದ ಶ್ರೀಶಂಕರರಿಗೆ ಸಂನ್ಯಾಸದ ವಿಧಿವತ್ತಾದ ದೀಕ್ಷೆಯು ಉಂಟಾಯಿತು. ನರ್ಮದಾತೀರದ ಆಶ್ರಮದಲ್ಲಿದ್ದಾಗ ಒಮ್ಮೆ ನರ್ಮದಾನದಿಯು ತುಂಬಿ ಪೂರ್ಣಪ್ರವಾಹದಿಂದ ಹರಿಯುವುದನ್ನು ಕಂಡ ಶಂಕರರು ತಮ್ಮ ಕಮಂಡಲುವಿನಲ್ಲಿ ಆ ಪೂರ್ಣಪ್ರವಾಹವನ್ನೆಲ್ಲ ಅಡಗಿಸಿಬಿಟ್ಟರಂತೆ. ಶ್ರೀಶಂಕರರ ಈ ಪವಾಡ ಕಂಡು ಗುರುಗಳಿಗೆ ಆಶ್ಚರ್ಯವಾಯಿತಂತೆ. ಹೀಗೆ ಶ್ರೀಶಂಕರರು **ಅದ್ಭುತ ಸಿದ್ಧಿಪುರುಷ**ರಾಗಿದ್ದರು.

# 6. ಅದ್ಭುತ ಬ್ರಹ್ಮಾನುಭವಿಗಳಾಗಿ

ಶ್ರೀಶಂಕರರು ಕೇವಲ ಒಣಪಂಡಿತರಲ್ಲ, ಕೇವಲ ಸಂಶೋಧಕರೂ ಅಲ್ಲ, ಕೇವಲ ವಿಮರ್ಶಕರೂ ಅಲ್ಲ, ಕೇವಲ ಭಾಷ್ಯಕಾರರೂ ಅಲ್ಲ; ಮತ್ತೇನೆಂದರೆ ಅವರು ನಿಶ್ಚಿತ ಹಾಗೂ ಅದ್ಭುತಬ್ರಹ್ಮಾನುಭವಿಗಳೂ ಹೌದು. ಉದಾಹರಣೆಗೆ:

**ಅವಗತಿಪರ್ಯಂತಂ ಜ್ಞಾನಂ; ಬ್ರಹ್ಮಾವಗತಿರ್ಹಿ ಪುರುಷಾರ್ಥಃ, ನಿಶ್ಶ್ರೇಷಸಂಸಾರಬೀಜಅವಿದ್ಯಾದ್ಯನರ್ಥನಿಬರ್ಹಣಾತ್।** ಬ್ರ. ಸೂ. ಭಾ. ೧.೧.೧

ಇಲ್ಲಿ 'ಜ್ಞಾನ' ಎಂದರೆ ಅನುಭವಪರ್ಯಂತವಾದದ್ದು, ಬ್ರಹ್ಮಾನುಭವವೇ ಪುರುಷಾರ್ಥವು. ಏಕೆಂದರೆ ಸಂಸಾರಕ್ಕೆ ಹೇತುವಾದ ಅವಿದ್ಯೆಯೇ ಮುಂತಾದ ಎಲ್ಲಾ ಅನರ್ಥಗಳನ್ನೂ ಸಂಪೂರ್ಣವಾಗಿ ಬ್ರಹ್ಮಜ್ಞಾನವು ನಾಶಮಾಡಿಬಿಡುತ್ತದೆ.

**ಅನುಭವಾವಸಾನತ್ವಾತ್ ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ।**

ಬ್ರ. ಸೂ. ಭಾ. ೧.೧.೨

ಬ್ರಹ್ಮಜ್ಞಾನವು ಸ್ವತಸ್ಸಿದ್ಧಬ್ರಹ್ಮದ ವಿಷಯವಾಗಿರುವುದರಿಂದಲೂ ಮತ್ತು ಅನುಭವದಲ್ಲಿ ಇಲ್ಲಿಯೇ ಈಗಲೇ ನೆಲೆಗೊಳ್ಳುವುದರಿಂದಲೂ.

**ಅನುಭವಾವಸಾನಂ ಚ ಬ್ರಹ್ಮವಿಜ್ಞಾನಮ್, ಅವಿದ್ಯಾಯಾಃ ನಿವರ್ತಕಂ ಮೋಕ್ಷಸಾಧನಂ ಚ ದೃಷ್ಟಫಲತಯಾ ಇಷ್ಯತೇ।** ಬ್ರ. ಸೂ. ಭಾ. ೨.೧.೪

ಬ್ರಹ್ಮಜ್ಞಾನವು ಅನುಭವದಲ್ಲಿ ಕೊನೆಗೊಂಡು ಅವಿದ್ಯೆಯನ್ನು ನಾಶ ಮಾಡುವ ಮೂಲಕ ಮೋಕ್ಷಕ್ಕೆ ಸಾಧನವಾಗಿರುತ್ತದೆ. ಆದ್ದರಿಂದ ಮೋಕ್ಷವು ದೃಷ್ಟಫಲವೇ ಹೊರತು ಜನ್ಮಾಂತರದ ಫಲವಲ್ಲ.

ಶ್ರೀಶಂಕರರು, ಹೀಗೆ ಆತ್ಮಜ್ಞಾನವು ಉತ್ತಮಾಧಿಕಾರಿಗಳಾದ ಮುಮುಕ್ಷುಗಳಿಗೆ ಈಗಲೇ, ಈ ಜನ್ಮದಲ್ಲಿಯೇ ಉಂಟಾಗುತ್ತದೆಯೆಂದೂ ಅದರ ಫಲವಾದ ಮೋಕ್ಷವೂ ಅನುಭವಕ್ಕೆ ಬರುತ್ತದೆಯೆಂದೂ ಹೇಳಿದ್ದಾರೆ. ಕರ್ಮೋಪಾಸನೆಗಳ ಫಲಗಳು ಜನ್ಮಾಂತರಲೋಕಾಂತರಗಳಲ್ಲಿ ಪ್ರಾಪ್ಯವಾಗುತ್ತವೆ. ಏಕೆಂದರೆ ಅವುಗಳಿಗೆಲ್ಲ ಶ್ರುತಿಸ್ಮೃತಿಗಳೇ ಪ್ರಮಾಣವು. ಆದರೆ ಬ್ರಹ್ಮಜ್ಞಾನಕ್ಕೆ ಮಾತ್ರ ಅನುಭವವೇ ಪ್ರಮಾಣ. ಬ್ರಹ್ಮಜ್ಞಾನವನ್ನು ಪಡೆದುಕೊಂಡು ಯಾರು ಬೇಕಾದರೂ ಮೋಕ್ಷವನ್ನು ಈ ಜನ್ಮದಲ್ಲಿಯೇ ಹೊಂದಬಹುದು ಎಂದು ನೂರಾರು ವಾಕ್ಯಗಳಲ್ಲಿ ಶ್ರೀಶಂಕರರು ಸಾರಿಸಾರಿ ಹೇಳಿದ್ದಾರೆ. ಹೀಗಾಗಿ ಶ್ರೀಶಂಕರರು ನಿಜವಾಗಿಯೂ **ಅದ್ಭುತ ಬ್ರಹ್ಮಾನುಭವಿಗಳು** ಎಂಬುದರಲ್ಲಿ ಸಂಶಯವಿಲ್ಲ.

# 7. ಅದ್ಭುತ ಆತ್ಮತತ್ತ್ವವಿದರಾಗಿ

ಆತ್ಮಜ್ಞಾನ, ಆತ್ಮತತ್ತ್ವ, ಆತ್ಮಸ್ವರೂಪ, ಆತ್ಮಶಕ್ತಿ, ಆತ್ಮನಿಷ್ಠ—ಹೀಗೆಲ್ಲ ಶಬ್ದಗಳನ್ನು ಕೇಳಿದ್ದೇವೆ. ಉಪನಿಷತ್ತುಗಳಲ್ಲಿ **ಆತ್ಮ**ಶಬ್ದವು ಮತ್ತೆ ಮತ್ತೆ ಬರುತ್ತಲೇ ಇರುತ್ತದೆ. **ಐತರೇಯೋಪನಿಷತ್ತಿನ** ಮೊಟ್ಟಮೊದಲನೆಯ ಮಂತ್ರದಲ್ಲಿ **"ಆತ್ಮಾ ವಾ ಇದಮೇಕ ಏವಾಗ್ರ ಆಸೀತ್"** ಎಂದು ಹೇಳಿರುತ್ತದೆ. ಇದೆಲ್ಲವೂ ಮೊದಲಿಗೆ ಆತ್ಮನೊಬ್ಬನೇ ಆಗಿತ್ತು ಎಂದು ಇದರ ಅರ್ಥ. ಇಲ್ಲಿರುವ **ಆತ್ಮ**ಶಬ್ದಕ್ಕೆ ಶ್ರೀಶಂಕರರು ಹೀಗೆ ಭಾಷ್ಯವನ್ನು ಬರೆದಿದ್ದಾರೆ:

**ಆತ್ಮಾ ಇತಿ; ಆಪ್ನೋತೇಃ ಅತ್ತೇಃ ಅತತೇರ್ವಾ ಪರಃ ಸರ್ವಜ್ಞಃ ಸರ್ವಶಕ್ತಿಃ ನಿತ್ಯಶುದ್ಧಬುದ್ಧಮುಕ್ತಸ್ವಭಾವಃ ಅಜಃ ಅಜರಃ ಅಮರಃ ಅಮೃತಃ ಅಭಯಃ ಅದ್ವಯಃ ಆತ್ಮಾ।** ಐತರೋಪನಿಷದ್ಭಾಷ್ಯ ೧.೧.೧

ಈ ವಾಕ್ಯದಲ್ಲಿ ಶ್ರೀಶಂಕರರು ಎಷ್ಟು ಸುಂದರವಾಗಿ, ಸುಲಭವಾಗಿ ಹಾಗೂ ಸರಳವಾಗಿ **ಆತ್ಮ**ಶಬ್ದದ ಸ್ವಾರಸ್ಯವನ್ನು ತಿಳಿಸಿದ್ದಾರೆ! ಆತ್ಮನೆಂದರೆ: **ಆಪ್ನೋತಿ ಇತಿ ಆತ್ಮಾ**, ಎಲ್ಲವನ್ನೂ ತುಂಬಿಕೊಂಡಿರುವ ಪೂರ್ಣತತ್ತ್ವ; ಆತ್ಮನೆಂದರೆ, **ಅತ್ತಿ ಇತಿ ಆತ್ಮಾ:** ಜೀವರೂಪದಿಂದ ಶಬ್ದಾದಿವಿಷಯಗಳನ್ನು ಅನುಭವಿಸುತ್ತಿರುವ ಪ್ರತ್ಯಗಾತ್ಮತತ್ತ್ವ; **ಅತತೀತ್ಯಾತ್ಮಾ**, ನಮ್ಮ ಹತ್ತಿರದಲ್ಲೇ ಇರುವ, ನಮ್ಮೊಳಗೇ ಇರುವ ಅಂತಸ್ತತ್ತ್ವವೇ ಆತ್ಮಾ; ಆತ್ಮನೆಂದರೆ ನಮಗಿಂತ ಭಿನ್ನವಾಗಿ ದೂರ ದಲ್ಲಿರುವ ಯಾವುದೋ ಒಂದು ಪರೋಕ್ಷತತ್ತ್ವವಲ್ಲ ಎಂಬುದನ್ನು ಶ್ರೀಶಂಕರರು ಇಲ್ಲಿ ಸುಂದರವಾಗಿ ತಿಳಿಸಿದ್ದಾರೆ.

ಈ ಆತ್ಮನಿಗೆ ಶ್ರೀಶಂಕರರು ಇಲ್ಲಿ ಹತ್ತು ವಿಶೇಷಣಗಳನ್ನು ಕೊಟ್ಟಿರುತ್ತಾರೆ. ಅವುಗಳಾವುವೆಂದರೆ: ಪರಃ ಆತ್ಮಾ, ಸರ್ವಜ್ಞಃ ಆತ್ಮಾ, ಸರ್ವಶಕ್ತಿಃ ಆತ್ಮಾ, ನಿತ್ಯಶುದ್ಧಬುದ್ಧಮುಕ್ತಸ್ವಭಾವಃ ಆತ್ಮಾ, ಅಜಃ ಆತ್ಮಾ, ಅಜರಃ ಆತ್ಮಾ, ಅಮರಃ ಆತ್ಮಾ, ಅಮೃತಃ ಆತ್ಮಾ, ಅಭಯಃ ಆತ್ಮಾ, ಅದ್ವಯಃ ಆತ್ಮಾ. ಈ ಆತ್ಮನಿಗೇ ಪ್ರತ್ಯಗಾತ್ಮಾ ಎಂದೂ ಹೆಸರು. ಇವನಿಗೇ ವೇದಾಂತದಲ್ಲಿ ಬ್ರಹ್ಮ, ಅಕ್ಷರ, ಪುರುಷ, ಸತ್ಯ, ದೇವ, ಈಶ್ವರ, ಭಗವಾನ್, ಪರಮಾತ್ಮಾ ಎಂದೆಲ್ಲಾ ಹೆಸರುಗಳು. ಈ ಪರಬ್ರಹ್ಮವೇ ತಾನೆಂದೂ, ತಾನೇ ಪರಬ್ರಹ್ಮವೆಂದೂ, ತಾನು ಪರಬ್ರಹ್ಮವೇ ಎಂದೂ ನಿಶ್ಚಿತವಾಗಿ ತಿಳಿದವನನ್ನೇ ಆತ್ಮತತ್ತ್ವವಿದನು ಎಂದು ಕರೆಯಲಾಗುತ್ತದೆ. ಹೀಗಾಗಿ ಆತ್ಮಜ್ಞಾನವು ಅತ್ಯಂತ ಸುಲಭವೂ ಆಗಿರುತ್ತದೆ. ಹೀಗೆ ಆತ್ಮನ ಸ್ವರೂಪವನ್ನು ಸ್ವಾನುಭವದಿಂದ ಕಂಡುಕೊಂಡು ಮುಮುಕ್ಷು ಗಳಿಗೂ ಸುಲಭವಾಗಿ ತಿಳಿಸಿರುವ ಶಂಕರರು **ಅದ್ಭುತ ಆತ್ಮತತ್ತ್ವವಿದರಲ್ಲವೇ**?

# 8. ಅದ್ಭುತ ಮಾಯಾಸತತ್ತ್ವವಿದರಾಗಿ

ಕಾಠಕೋಪನಿಷತ್ತಿನಲ್ಲಿ (೩-೧೨) ಮೃತ್ಯುದೇವನು ಹೀಗೆ ಹೇಳಿದ್ದಾನೆ:

**ಏಷ ಸರ್ವೇಷು ಭೂತೇಷು ಗೂಢೋಽಽತ್ಮಾ ನ ಪ್ರಕಾಶತೇ।**
**ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ॥**

*ಈ ಆತ್ಮನು ಸಕಲ ಭೂತಗಳೊಳಗೆ ಅಡಕವಾಗಿದ್ದರೂ ಎಲ್ಲರಿಗೂ ಗೋಚರನಲ್ಲ; ಆದರೆ ಸೂಕ್ಷ್ಮದರ್ಶಿಗಳು ಸೂಕ್ಷ್ಮವಾದ ಅಗ್ರ್ಯಬುದ್ಧಿಯಿಂದ ಇವನನ್ನು ಸುಲಭವಾಗಿ ಕಾಣುತ್ತಾರೆ.*

ಈ ಮಂತ್ರಕ್ಕೆ ಶ್ರೀಶಂಕರರು ಭಾಷ್ಯವನ್ನು ಬರೆಯುತ್ತಾ ಹೀಗೆ ಬರೆದಿದ್ದಾರೆ:

**ಅಹೋ, ಅತಿಗಂಭೀರಾ! ದುರವಗಾಹ್ಯಾ ವಿಚಿತ್ರಾ ಚೇಯಂ ಮಾಯಾ! ಯದಯಂ ಸರ್ವೋ ಜಂತುಃ ಪರಮಾರ್ಥತಃ ಪರಮಾರ್ಥಸತತ್ತ್ವೋಽಪಿ ಏವಂ ಬೋಧ್ಯಮಾನೋಽಪಿ 'ಅಹಂ ಪರಮಾತ್ಮಾ' ಇತಿ ನ ಗೃಹ್ಣಾತಿ; ಅನಾತ್ಮಾನಂ ದೇಹೇಂದ್ರಿಯಾದಿಸಂಘಾತಮ್ ಆತ್ಮತ್ವೇನ ಗೃಹ್ಣಾತಿ।**

*ಅಬ್ಬಾ! ಇದೇನು ಆಶ್ಚರ್ಯ! ಈ ಮಾಯೆಯು ಅರ್ಥವಾಗುತ್ತಿಲ್ಲವಲ್ಲ! ಈ ಮಾಯೆಯು ಎಷ್ಟೊಂದು ವಿಚಿತ್ರವಾಗಿ ಅದ್ಭುತವಾಗಿದೆ! ಏಕೆಂದರೆ ಪ್ರತಿಯೊಬ್ಬ ಮಾನವನೂ ನಿಜವಾಗಿಯೂ ಬ್ರಹ್ಮಸ್ವರೂಪನೇ ಆಗಿದ್ದರೂ, ಹಾಗೆಂದು ಉಪದೇಶಿಸಿದರೂ ಯಾವನೂ 'ನಾನೇ ಪರಮಾತ್ಮ' ಎಂದು ತಿಳಿಯುತ್ತಿಲ್ಲವಲ್ಲ! ಆದರೆ ಘಟಾದಿಗಳಂತೆ ದೃಶ್ಯವಾಗಿದ್ದು ಅನಾತ್ಮವಾಗಿರುವ ದೇಹೇಂದ್ರಿಯಾದಿಸಂಘಾತವನ್ನು ಯಾರೂ ಉಪದೇಶಿಸದೇ ಹೋದರೂ ಪ್ರತಿಯೊಬ್ಬನೂ 'ದೇಹವೇ ನಾನು' ಎಂದು ಸಹಜವಾಗಿ ತಿಳಿದುಕೊಂಡಿರುತ್ತಾನಲ್ಲ! ಅಬ್ಬಾ, ಇದಲ್ಲವೇ ಮಾಯಾವಿಲಾಸ?*

ಈ ಶ್ರೀಶಂಕರರ ಮಾತು ಎಷ್ಟು ಸತ್ಯವಾಗಿದೆ! ಪ್ರತಿಯೊಬ್ಬ ಮನುಷ್ಯನೂ ನಿಜವಾಗಿ ಅಸಂಸಾರಿಯಾದ ನಿತ್ಯಶುದ್ಧ ನಿತ್ಯಬುದ್ಧ ನಿತ್ಯಮುಕ್ತನಾದ ಆತ್ಮನೇ ಆಗಿರುತ್ತಾನೆ. ಹೀಗೆಂದು ಶ್ರುತಿ ಸ್ಮೃತಿಗಳೂ ಬ್ರಹ್ಮಜ್ಞಾನಿಗಳೂ ಮತ್ತೆ ಮತ್ತೆ ತಾತ್ಪರ್ಯದಿಂದ ಉಪದೇಶಿಸುತ್ತಲೇ ಇದ್ದಾರೆ; ಇಷ್ಟಾದರೂ ಜನಗಳು ಮಾತ್ರ **'ಅಹಂ ಬ್ರಹ್ಮಾಸ್ಮಿ'** ಎಂದು ತಿಳಿಯುತ್ತಿಲ್ಲವಲ್ಲ! ಇದಕ್ಕೆ ಕಾರಣ ಅವಿದ್ಯಾ, ಮಾಯೆ. ಹೀಗೆಯೇ ಅನಾತ್ಮವಾದ ದೇಹಾದಿಗಳನ್ನು ನಾನೆಂದೇ ಪ್ರತಿಯೊಬ್ಬನೂ ಸಹಜವಾಗಿ ತಿಳಿದುಕೊಂಡಿರುತ್ತಾನೆ. ಯಾರೂ ಇವನಿಗೆ **'ನೀನು ಈ ಶರೀರ'** ಎಂದು ಹೇಳುತ್ತಿಲ್ಲ; ಏಕೆ ಗೊತ್ತೇ? ಎಂದರೆ, ಮಾಯೆಯಿಂದ. ಹೀಗೆ ಉಪದೇಶಿಸಿರುವ ಶ್ರೀಶಂಕರರು **ಅದ್ಭುತ ಮಾಯಾಸತತ್ತ್ವವಿದರಲ್ಲವೇ?**

# 9. ಅದ್ಭುತ ಮುನಿಪುಂಗವರಾಗಿ

ಮುನಿಗಳೆಂದರೆ ಕೇವಲ ಗಡ್ಡವನ್ನು ಬಿಟ್ಟವರಲ್ಲ, ಬರೀ ಉಪವಾಸ ವನವಾಸಗಳನ್ನು ಮಾಡುವವರೂ ಅಲ್ಲ; ಮತ್ತೇನೆಂದರೆ ಔಪನಿಷದ ಆತ್ಮನನ್ನು ಅರಿತವರೇ ನಿಜವಾದ ಮುನಿಗಳು. ಇವರೇ ಸಮ್ಯಗ್ದರ್ಶಿಗಳೂ ಕೂಡ. ಶ್ರೀಗೌಡಪಾದಾಚಾರ್ಯರು ಮುನಿಗಳನ್ನು ಹೀಗೆ ವರ್ಣಿಸಿದ್ದಾರೆ:

**ವೀತರಾಗಭಯಕ್ರೋಧೈಃ ಮುನಿಭಿರ್ವೇದಪಾರಗೈಃ।**
**ನಿರ್ವಿಕಲ್ಪೋ ಹ್ಯಯಂ ದೃಷ್ಟಃ ಪ್ರಪಂಚೋಪಶಮೋಽದ್ವಯಃ॥**

ಗೌಡಪಾದೀಯಕಾರಿಕಾ ೨-೩೫

*ರಾಗಭಯಕ್ರೋಧಗಳನ್ನು ಬಿಟ್ಟಿರುವ, ವೇದಪಾರಗರಾದ* ***ಮುನಿಗಳು*** *ಆತ್ಮನನ್ನು ನಿರ್ವಿಕಲ್ಪನೆಂದೂ ಪ್ರಪಂಚೋಪಶಮನೆಂದೂ ಸ್ವಾನುಭವದಿಂದ ಸುಲಭವಾಗಿ ಕಾಣುತ್ತಾರೆ.* **ವೇದಾಂತಾರ್ಥತತ್ಪರೈಃ ಮುನಿಭಿಃ ಸಂನ್ಯಾಸಿಭಿಃ ಆಯಮಾತ್ಮಾ ದ್ರಷ್ಟುಂ ಶಕ್ಯಃ, ನಾನ್ಯೈಃ॥** ಎಂದು ಶ್ರೀಶಂಕರರು ಭಾಷ್ಯದಲ್ಲಿ ಬರೆದಿದ್ದಾರೆ.

**ಭಗವಾನ್ ಆಭಿರಸ್ಪೃಷ್ಟಃ ಯೇನ ದೃಷ್ಟಃ ಸ ಸರ್ವದೃಕ್।**

ಗೌಡಪಾದೀಯಕಾರಿಕಾ ೪-೮೪

ಎಂಬ ಕಾರಿಕೆಗೆ ಶ್ರೀಶಂಕರರು ಹೀಗೆ ಭಾಷ್ಯವನ್ನು ಬರೆದಿದ್ದಾರೆ:

**ಆಸ್ತ್ಯಾದಿವಿಕಲ್ಪನಾವರ್ಜಿತಃ ಸರ್ವವಿಕಲ್ಪಶೂನ್ಯಃ ಆತ್ಮಾ ಯೇನ ಮುನಿನಾ ದೃಷ್ಟಃ ವೇದಾಂತೇಷು ಔಪನಿಷದಃ ಪುರುಷಃ ಸ ಸರ್ವದೃಕ್, ಸರ್ವಜ್ಞಃ, ಪರಮಾರ್ಥಪಂಡಿತಃ ಇತ್ಯರ್ಥಃ।**

ಅಸ್ತಿ, ನಾಸ್ತಿ, ಅಸ್ತಿ ನಾಸ್ತಿ, ನಾಸ್ತಿ ನಾಸ್ತಿ ಎಂಬೀ ಸಕಲವಿಕಲ್ಪಗಳಿಂದ ಶೂನ್ಯನಾದ ಆತ್ಮನನ್ನು ಯಾವ ಪರಮಾರ್ಥಪಂಡಿತನು ತಿಳಿದಿದ್ದಾನೆಯೋ ಅವನೇ **ನಿಜವಾದ ಮುನಿಯು**. ಆತ್ಮನನ್ನು ಉಪನಿಷತ್ತುಗಳಲ್ಲಿ, ವೇದಾಂತಗಳಲ್ಲಿ ತಿಳಿಸಿರುವಂತೆಯೇ ತಿಳಿದವನೇ **ಮುನಿ** ಎನಿಸುತ್ತಾನೆ. ಇಲ್ಲಿ ಮುನಿ ಎಂದರೆ ಸಂನ್ಯಾಸಿ, ಯತಿ, ಪಂಡಿತ, ಪರಮಾರ್ಥದರ್ಶೀ, ತತ್ತ್ವವಿತ್, ಪ್ರಾಜ್ಞ, ಪಂಡಿತ—ಎಂದೆಲ್ಲಾ ಕರೆದಿರುತ್ತಾರೆ. ಇವನು ಮುಖ್ಯವಾಗಿ ಔಪನಿಷದ ಆತ್ಮನನ್ನು ತಿಳಿದವನಾಗಿರಬೇಕು. ಹೀಗಾಗಿ ಇವನೇ ಬ್ರಹ್ಮವಿದನೂ, ಆತ್ಮವಿದನೂ, ಸ್ವರೂಪನಿಷ್ಠನೂ ಆಗಿರುತ್ತಾನೆ. ಈ ಅರ್ಥದಲ್ಲಿ ಶ್ರೀಶಂಕರ ಭಗವತ್ಪಾದರು **ಅದ್ಭುತ ಮುನಿಪುಂಗವ**ರಾಗಿರುತ್ತಾರೆ.

# 10. ಅದ್ಭುತ ಆಗಮಾಭಿಜ್ಞರಾಗಿ

ಜಿಜ್ಞಾಸುಗಳಿಗೆ ಬ್ರಹ್ಮಜ್ಞಾನಪ್ರಾಪ್ತಿಯು ಸುಲಭವೇ? ಅಥವಾ ಕಷ್ಟಸಾಧ್ಯವೇ? ಎನ್ನುವ ಪ್ರಶ್ನೆಗೆ, ಕಾಠಕೋಪನಿಷತ್ತು ಸುಲಭವೂ ಹೌದು ಕಷ್ಟವೂ ಹೌದು ಎಂದು ಉತ್ತರವನ್ನು ಕೊಡುತ್ತಿದೆ. ಕಾಠಕೋಪನಿಷತ್ತಿನ ಆ ಮಂತ್ರವನ್ನು ನಾವಿಲ್ಲಿ ನೋಡೋಣ:

**ನೈಷಾ ತರ್ಕೇಣ ಮತಿರಾಪನೇಯಾ, ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ**

**ಕಾಠಕೋಪನಿಷತ್ ೨-೯**

*ಈ ಬ್ರಹ್ಮಾತ್ಮಜ್ಞಾನವನ್ನು ಬರೀ ತರ್ಕದಿಂದ ಹೊಂದಲು ಸಾಧ್ಯವಿಲ್ಲ; ಆದರೆ ಬ್ರಹ್ಮಾನನ್ಯನಾದ ಸದ್ಗುರುವು ತಿಳಿಸಿದರೆ ಈ ಆತ್ಮನನ್ನು ಸುಲಭವಾಗಿ ತಿಳಿಯಬಹುದು.*

ಗುರೂಪದೇಶವಿಲ್ಲದೇ, ಶಾಸ್ತ್ರೋಪದೇಶಗಳೂ ಇಲ್ಲದೇ, ಬರೀ ತರ್ಕದ ಬಲದಿಂದ, ತನ್ನ ಮೇಧಾಸಾಮರ್ಥ್ಯದಿಂದ ಯಾವನೊಬ್ಬನೂ ಬ್ರಹ್ಮತತ್ತ್ವವನ್ನು ನಿಶ್ಚಿತವಾಗಿ ಸ್ವಾನುಭವದಿಂದ ತಿಳಿಯಲಾರನು; ಆದರೆ **ಆಗಮವನ್ನು** ಬಲ್ಲಂಥ ಬ್ರಹ್ಮನಿಷ್ಠನಾದ ಸದ್ಗುರುವು ಉಪದೇಶಮಾಡಿದಾಗ ಮಾತ್ರ ಬ್ರಹ್ಮವನ್ನು ಮುಮುಕ್ಷುಗಳು ಸುಲಭವಾಗಿ ತಿಳಿದುಕೊಳ್ಳಬಲ್ಲವರಾಗುತ್ತಾರೆ, ಏಕೆಂದರೆ ಆತ್ಮನು ಇಂದ್ರಿಯಮನೋಬುದ್ಧಿಗಳಿಗೆ ವಿಷಯನೇ ಅಲ್ಲ.

ಇದನ್ನು ಶ್ರೀಶಂಕರರು **ಯಾ ಇಯಮ್ ಆಗಮಪ್ರಸೂತಾ ಮತಿಃ ಸಾ ಅನ್ಯೇನೈವ ಆಗಮಾಭಿಜ್ಞೇನ ಆಚಾರ್ಯೇಣೈವ, ತಾರ್ಕಿಕಾತ್ ಭಿನ್ನೇನ, ಪ್ರೋಕ್ತಾ ಸತೀ ಸುಜ್ಞಾನಾಯ ಭವತಿ**; ತಾರ್ಕಿಕನಿಗಿಂತ ಭಿನ್ನನಾದ, ಆಗಮಾಭಿಜ್ಞನಾದ ಆಚಾರ್ಯನಿಂದ ತಿಳಿಸಲ್ಪಟ್ಟರೆ, ಈ ಆಗಮದಿಂದ ಉಂಟಾದ ತಿಳಿವಳಿಕೆಯು ಅನುಭವಕ್ಕೆ ಬಂದು ಬ್ರಹ್ಮವು ಸುಲಭವಾಗಿ ಅರ್ಥವಾಗಿಬಿಡುತ್ತದೆ ಎಂದು ಬರೆದಿದ್ದಾರೆ. ಶ್ರೀಶಂಕರರು ಸ್ವತಃ **ಆಗಮಾಭಿಜ್ಞರೂ** ಆಗಿರುತ್ತಾರೆ.

ಇಲ್ಲಿ ನಾವು ಗಮನಿಸಬೇಕಾದ ಅಂಶವೇನೆಂದರೆ: **ಆಗಮಾಭಿಜ್ಞನಾದ ಆಚಾರ್ಯನು**; ಆಗಮವೆಂದರೆ, ಶಾಸ್ತ್ರೋಪದೇಶಸಂಪ್ರದಾಯವು. ಇದನ್ನು ಬಲ್ಲವನಾದ ಬ್ರಹ್ಮನಿಷ್ಠನಾದ ಆಚಾರ್ಯನೇ ಆಗಮಾಭಿಜ್ಞನಾದ ಸದ್ಗುರುವು. ಇವನು ಒಣ ತಾರ್ಕಿಕಪಂಡಿತನಲ್ಲ, ಇವನು ಅನುಭವೀ ಮಹಾತ್ಮ, ಇಂಥವನು ಆತ್ಮನನ್ನು ನಮಗೆ ತಿಳಿಸಿದರೆ, ನಮಗೂ ಸುಲಭವಾಗಿ ಬ್ರಹ್ಮವು ತಿಳಿಯುತ್ತದೆ. ಹೀಗೆ ಆಗಮರಹಸ್ಯವನ್ನು ಸ್ವಾನುಭವದಿಂದ ನಿಶ್ಚಿತವಾಗಿ ಬಲ್ಲಂಥ ಶ್ರೀಶಂಕರರು ನಿಜವಾಗಿಯೂ **ಅದ್ಭುತ ಆಗಮಾಭಿಜ್ಞರಲ್ಲವೇ?**

# 11. ಅದ್ಭುತ ವೇದಾಂತಿಗಳಾಗಿ

ವೇದಾಂತಗಳನ್ನು ತಲಸ್ಪರ್ಶಿಗಳಾಗಿ ಅಧ್ಯಯನಮಾಡಿ, ವೇದಾಂತಗಳ ಸಾರವನ್ನು ಸಂಪೂರ್ಣವಾಗಿ ತಿಳಿದುಕೊಂಡು, ವೇದಾಂತಸಂದೇಶಗಳನ್ನು ಮಾನವರಿಗೆ ತಿಳಿಸುತ್ತಾ, ವೇದಾಂತನಿಷ್ಠರಾಗಿ, ವೇದಾಂತನಿಷ್ಣಾತರಾದ ಮಹಾತ್ಮರನ್ನು ನಾವುಗಳು **ವೇದಾಂತಿಗಳು** ಎಂದು ಕರೆಯುತ್ತೇವೆ. ಈ ಎಲ್ಲಾ ಅರ್ಥಗಳಲ್ಲಿಯೂ ಸ್ವತಃ ಶ್ರೀಶಂಕರರು **ಅನ್ವರ್ಥವೇದಾಂತಿ**ಗಳಾಗಿರುತ್ತಾರೆ. ಇಷ್ಟೇ ಅಲ್ಲದೇ ಶ್ರೀಶಂಕರರು ನೈಷ್ಠಿಕಬ್ರಹ್ಮಚಾರಿಗಳೂ ಪರಮಹಂಸ ಪರಿವ್ರಾಜಕರೂ ಯತಿಪುಂಗವರೂ ಆಗಿ **ವೇದಾಂತಭಾಷ್ಯಕಾರರೂ** ಆಗಿರುತ್ತಾರೆ.

ಶಾರೀರಕಮೀಮಾಂಸಾಸೂತ್ರಗಳಿಗೆ ಭಾಷ್ಯವನ್ನು ಬರೆಯುವುದಕ್ಕಿಂತ ಮುಂಚೆಯೇ ಶ್ರೀಶಂಕರರು **ಅಧ್ಯಾಸವನ್ನು** ವಿವರಿಸುವುದಕ್ಕಾಗಿ **ಅಧ್ಯಾಸಭಾಷ್ಯ**ವನ್ನು ಬರೆದಿರುತ್ತಾರೆ. ಆತ್ಮಾನಾತ್ಮರುಗಳ ಪರಸ್ಪರ ಅಧ್ಯಾಸಕ್ಕೇ ಅವಿದ್ಯಾ ಎಂದು ಹೆಸರು. ಅಧ್ಯಾಸವೇ ಸಕಲ ಅನರ್ಥಗಳಿಗೂ ಕಾರಣವಾಗಿದೆ ಎಂದು ಶ್ರೀಶಂಕರರು ಅಧ್ಯಾಸಭಾಷ್ಯದಲ್ಲಿ ಹೇಳಿದ್ದಾರೆ. ಈ ಅಧ್ಯಾಸವು ಸಕಲಲೋಕ ಪ್ರತ್ಯಕ್ಷವೂ ಆಗಿರುತ್ತದೆ. ಇದನ್ನು ಪರಿಹಾರಮಾಡುವುದಕ್ಕಾಗಿಯೇ ಎಲ್ಲಾ ವೇದಾಂತಗಳೂ ಹೊರಟಿರುತ್ತವೆ ಎಂದೂ ಶ್ರೀಶಂಕರರು ಇಲ್ಲಿ ಬರೆದಿದ್ದಾರೆ.

**ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾಂತಾಃ ಆರಭ್ಯಂತೇ**; (ಅಧ್ಯಾಸಭಾಷ್ಯ), ಆತ್ಮೈಕತ್ವವಿದ್ಯೆಯ ಉಪದೇಶದ ಮೂಲಕ ಈ ಅನರ್ಥಹೇತುವಾದ ಅಧ್ಯಾಸವನ್ನು ಕಳೆಯುವುದಕ್ಕಾಗಿಯೇ ಎಲ್ಲಾ ವೇದಾಂತಗಳೂ ಹೊರಟಿರುತ್ತವೆ. ವೇದಾಂತಗಳಿಂದ ನಮಗೆ ಉಂಟಾಗುವ ಫಲಗಳೆಂದರೆ: ಆತ್ಮೈಕತ್ವಜ್ಞಾನಪ್ರಾಪ್ತಿ, ಅದರಿಂದ ಅಧ್ಯಾಸ ನಿವೃತ್ತಿ, ಅದರಿಂದ ಸರ್ವಾನರ್ಥನಾಶ. ವೇದಾಂತಗಳ ಅಧ್ಯಯನ ಚಿಂತನ ಶ್ರವಣ ಮನನ ನಿದಿಧ್ಯಾಸನಗಳಿಂದ ಉಂಟಾಗುವ ಏಕೈಕಫಲವೆಂದರೆ ಅಧ್ಯಾಸ ನಿವೃತ್ತಿದ್ವಾರಾ ಮುಕ್ತಿಪ್ರಾಪ್ತಿಯೇ ಹೊರತು ಆಯುರಾರೋಗ್ಯಐಶ್ವರ್ಯ ಅಧಿಕಾರ ಪ್ರಾಪ್ತಿಗಳಲ್ಲ ಎಂದು ಧೈರ್ಯವಾಗಿ ಶಂಕರರು ಬರೆದಿರುತ್ತಾರೆ. ವೇದಾಂತಗಳು ವೇದಗಳ ಸಾರ, ವೇದಾಂತಗಳು ಸಕಲ ಶಾಸ್ತ್ರಗಳ ಸಾರ, ವೇದಾಂತಗಳು ಸಕಲ ಮುಮುಕ್ಷುಗಳ ಸಂಪತ್ತು, ವೇದಾಂತಾರ್ಥವಿಚಾರದಿಂದಲೇ ಆತ್ಮಜ್ಞಾನೋತ್ಪತ್ತಿ, ವೇದಾಂತಚಿಂತನೆಯಿಂದಲೇ ಮೋಕ್ಷ; ವೇದಾಂತಗಳನ್ನು ಮುಮುಕ್ಷುಗಳು ಅಧ್ಯಯನಮಾಡಬೇಕು ಎಂದು ಶ್ರೀಶಂಕರರು ಸಾರಿಸಾರಿ ಹೇಳುತ್ತಾರೆ. ಸ್ವತಃ ವೇದಾಂತಿಗಳಾಗಿ, ಈ ಧೀರ ಅದ್ಭುತಸಂದೇಶಗಳನ್ನು ಮುಮುಕ್ಷುಸಾಧಕರಿಗೆ ನೀಡಿರುವ ಶ್ರೀಶಂಕರರು **ಅದ್ಭುತ ವೇದಾಂತಿಗಳಲ್ಲವೇ**?

# 12. ಅದ್ಭುತ ಪರಮಾರ್ಥದರ್ಶಿಗಳಾಗಿ

ಶ್ರೀಶಂಕರರು ದಶೋಪನಿಷತ್ತುಗಳಿಗೂ ಸುಂದರವಾದ ಭಾಷ್ಯಗಳನ್ನು ಬರೆದಿರುತ್ತಾರೆ. ಹೀಗಾಗಿ ಮಾಂಡೂಕ್ಯೋಪನಿಷತ್ತಿನ ಹನ್ನೆರಡು ಮಂತ್ರಗಳಿಗೂ ಶ್ರೀಗೌಡಪಾದಾಚಾರ್ಯರ ಇನ್ನೂರ ಹದಿನೈದು **ಕಾರಿಕೆಗಳಿಗೂ** ಶ್ರೀಶಂಕರರು ಭಾಷ್ಯವನ್ನು ಬರೆದಿದ್ದಾರೆ. ಮಾಂಡೂಕ್ಯೋಪನಿಷತ್ತಿನ ಹನ್ನೆರಡನೆಯ ಮಂತ್ರ, **ಸಂವಿಶತ್ಯಾತ್ಮನಾತ್ಮಾನಂ ಯ ಏವಂ ವೇದ**; ಯಾವನು ಹೀಗೆ ಓಂಕಾರವೇ ಆತ್ಮವೆಂದು ತಿಳಿಯುತ್ತಾನೆಯೋ, ಅವನು ತನ್ನನ್ನೇ ತನ್ನಿಂದಲೇ ಸೇರಿಕೊಂಡು ಬಿಡುತ್ತಾನೆ—ಎಂಬ ಈ ಮಂತ್ರಕ್ಕೆ ಶಂಕರರು ಹೀಗೆ ಭಾಷ್ಯವನ್ನು ಬರೆದಿರುತ್ತಾರೆ:

**ಪರಮಾರ್ಥದರ್ಶೀ ಬ್ರಹ್ಮವಿತ್ ತೃತೀಯಂ ಬೀಜಭಾವಂ ದಗ್ಧ್ವಾ ಆತ್ಮಾನಂ ಪ್ರವಿಷ್ಟಃ ಇತಿ ನ ಪುನರ್ಜಾಯತೇ। ತುರೀಯಸ್ಯ ಅಬೀಜತ್ವಾತ್;**

*ತುರೀಯವೆಂಬ ಪರಮಾರ್ಥತತ್ತ್ವವನ್ನು, ಅಂದರೆ ಬ್ರಹ್ಮವನ್ನು ಬಲ್ಲವನಾದ ಜ್ಞಾನಿಯು ಮೂರನೆಯದಾದ ಬೀಜಭಾವವನ್ನು ಸುಟ್ಟುಬೂದಿಮಾಡಿಕೊಂಡು ಆತ್ಮನನ್ನೇ ಸೇರಿಕೊಂಡಿರುವುದರಿಂದ ಅವನು ಪುನಃ ಹುಟ್ಟುವುದಿಲ್ಲ.*

ವೈಶ್ವಾನರನಲ್ಲಿಯೂ ತೈಜಸನಲ್ಲಿಯೂ ಜ್ಞಾನಾಭಾವ ಮತ್ತು ಮಿಥ್ಯಾಜ್ಞಾನ ಗಳಿರುತ್ತವೆ. ಆದರೆ ಪ್ರಾಜ್ಞನಲ್ಲಿ ಜ್ಞಾನಾಭಾವರೂಪವಾದ ಬೀಜಭಾವವು ಮಾತ್ರ ಇರುತ್ತದೆ. ಇನ್ನು ತುರೀಯಾತ್ಮನಲ್ಲಿ ಈ ಬೀಜವೂ ಇರುವುದಿಲ್ಲ. ಈ ತುರೀಯನೇ ಪರಮಾರ್ಥಾತ್ಮಾ ಹಾಗೂ ಪರಬ್ರಹ್ಮತತ್ತ್ವವು. ಈ ಪರಮಾರ್ಥ ಬ್ರಹ್ಮವನ್ನೇ ತಾನೆಂದು ಸ್ವಾನುಭವದಿಂದ ಅರ್ಥಮಾಡಿಕೊಂಡ ಧೀರನೇ ಪರಮಾರ್ಥವಿದನು. ಇವನಿಗೆ ಜನ್ಮಾಂತರವಿಲ್ಲ ಎಂದು ಶ್ರೀಶಂಕರರ ವಾಣಿ.

ಹೀಗೆ ಧೈರ್ಯವಾಗಿ **ಪರಮಾರ್ಥದರ್ಶೀ ನ ಪುನರ್ಜಾಯತೇ** ಎಂದು ಸ್ವಾನುಭವದಿಂದ ಬರೆದಿರುವುದನ್ನು ನೋಡಿದಾಗ ಶ್ರೀಶಂಕರರನ್ನು **ಅದ್ಭುತ ಪರಮಾರ್ಥದರ್ಶೀ** ಎಂದು ಕರೆಯಬಹುದಲ್ಲವೇ? ಪರಬ್ರಹ್ಮವೇ ಪರಮಾರ್ಥ ತತ್ತ್ವ. ಈ ಪರಬ್ರಹ್ಮವು ಸಾಕಾರ ದೇವತೆಯಲ್ಲ; ಪರಬ್ರಹ್ಮಕ್ಕೆ ನಾಮ ರೂಪಗಳಿಲ್ಲ, ಗುಣಧರ್ಮಗಳಿಲ್ಲ, ಕ್ರಿಯಾಕಾರಕಫಲಗಳ ಸಂಬಂಧವೂ ಇಲ್ಲ. ಇಂಥ ಪರಮಾರ್ಥವೇ ತಾನೆಂದು ಸ್ವಾನುಭವದಿಂದ ತಿಳಿದವನೇ ಪರಮಾರ್ಥದರ್ಶಿಯು. ಜನ್ಮಾಂತರಕ್ಕೆ ಕಾರಣವಾದ ಅವಿದ್ಯೆಯಾಗಲೀ ಕರ್ಮಗಳಾಗಲೀ ಬ್ರಹ್ಮಜ್ಞಾನಿಗೆ ಇರಲಾರವು. ಏಕೆಂದರೆ ಬ್ರಹ್ಮಜ್ಞಾನಾಗ್ನಿಯಿಂದ ಇವನ ಅವಿದ್ಯಾಕಾಮಕರ್ಮಗಳೆಲ್ಲವೂ ಸಂಪೂರ್ಣವಾಗಿ ಸುಟ್ಟುಬೂದಿಯಾಗಿರು ತ್ತವೆ. ಬ್ರಹ್ಮಜ್ಞಾನಿಯೆಂದರೆ ಬ್ರಹ್ಮವೇ ಆಗಿರುತ್ತಾನೆ. ಇವನೇ ಪರಮಾರ್ಥದರ್ಶಿ!

# 13. ಅದ್ಭುತ ಶಾಸ್ತ್ರತಾತ್ಪರ್ಯವಿದರಾಗಿ

ಶಾಸ್ತ್ರಗಳು ಅನೇಕ, ಶಾಸ್ತ್ರಗಳ ತಾತ್ಪರ್ಯಗಳೂ ಅನೇಕವಾಗಿವೆ ಎಂದು ಸಾಮಾನ್ಯವಾಗಿ ನಾವುಗಳು ತಿಳಿದಿರುತ್ತೇವೆ. ಇದು ಸರಿಯಲ್ಲ , ಸಕಲ ಶಾಸ್ತ್ರಗಳ ತಾತ್ಪರ್ಯವೂ "ಆತ್ಮಜ್ಞಾನದಿಂದ ಮೋಕ್ಷ" ಎಂದು ಶ್ರೀಶಂಕರರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅನೇಕ ಬಾರಿ ಬರೆದಿರುತ್ತಾರೆ. ಇದಕ್ಕೆ ಉದಾಹರಣೆ ಯಾಗಿ ಗೀತಾಶಾಂಕರಭಾಷ್ಯದಿಂದ ಒಂದು ವಾಕ್ಯವನ್ನು ನೋಡೋಣ:

**ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ।**
**ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ॥** ೪-೩೯

*ಶ್ರದ್ಧಾವಂತನೂ ತತ್ಪರನೂ ಸಂಯತೇಂದ್ರಿಯನೂ ಆದ ಮುಮುಕ್ಷುಸಾಧಕನು ಆತ್ಮ ಜ್ಞಾನವನ್ನು ಪಡೆದು ಪರಮಶಾಂತಿಯನ್ನು ಕೂಡಲೇ ಹೊಂದುತ್ತಾನೆ.*

ಈ ಶ್ಲೋಕಕ್ಕೆ ಶ್ರೀಶಂಕರರು ಹೀಗೆ ಭಾಷ್ಯವನ್ನು ಬರೆದಿದ್ದಾರೆ:

**ಜ್ಞಾನಂ ಲಬ್ಧ್ವಾ ಪರಾಂ ಶಾಂತಿಂ ಮೋಕ್ಷಾಖ್ಯಾಮ್ ಉಪರತಿಮ್ ಅಚಿರೇಣ ಕ್ಷಿಪ್ರಮೇವ ಅಧಿಗಚ್ಛತಿ।**

*ಆತ್ಮಜ್ಞಾನವನ್ನು ಹೊಂದಿ, ಅನಂತರ ಎಂದರೆ ಕೂಡಲೇ ಪರಮಶಾಂತಿಯನ್ನು ಎಂದರೆ ಮೋಕ್ಷವನ್ನು ಹೊಂದುತ್ತಾನೆ ಎಂದು ಭಾಷ್ಯ.*

ಇದಾದಮೇಲೆ ಶ್ರೀಶಂಕರರು ಹೀಗೆ ಬರೆದಿದ್ದಾರೆ:

**ಸಮ್ಯಗ್ದರ್ಶನಾತ್ ಕ್ಷಿಪ್ರಂ ಮೋಕ್ಷೋ ಭವತಿ ಇತಿ ಸರ್ವಶಾಸ್ತ್ರನ್ಯಾಯ ಪ್ರಸಿದ್ಧಃ ಸುನಿಶ್ಚಿತೋಽರ್ಥಃ ಇತಿ।**

*ಸಮ್ಯಗ್ದರ್ಶನದಿಂದ ಕೂಡಲೇ ಮೋಕ್ಷವು ಉಂಟಾಗುತ್ತದೆ ಎಂಬಿದು ಸಕಲ ಶಾಸ್ತ್ರಗಳಿಂದ ಹಾಗೂ ನ್ಯಾಯದಿಂದ ಸುನಿಶ್ಚಿತವಾದ ತಾತ್ಪರ್ಯವು.*

ಶಂಕರರು ಇಲ್ಲಿ **ಸಕಲಶಾಸ್ತ್ರನ್ಯಾಯಪ್ರಸಿದ್ಧಃ ಸುನಿಶ್ಚಿತೋಽರ್ಥಃ** ಎಂದು ಧೈರ್ಯವಾಗಿ ಬರೆದಿರುವುದನ್ನು ನಾವು ಗಮನಿಸಬೇಕು. ಎಂದರೆ ಎಲ್ಲಾ ಶಾಸ್ತ್ರಗಳ ತಾತ್ಪರ್ಯವೂ ಇದೇ ಎಂದು ಸ್ಪಷ್ಟವಾಗಿ ಬರೆದಿದ್ದಾರೆ. ಸಮ್ಯಗ್ದರ್ಶನ ವೆಂದರೆ ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನ. ಆತ್ಮಜ್ಞಾನದಿಂದಲೇ ಮುಕ್ತಿ, ಆತ್ಮಜ್ಞಾನ ವುಂಟಾದ ಕೂಡಲೇ ಮುಕ್ತಿ, ಆತ್ಮಜ್ಞಾನವು ಉಂಟಾದ ಮೇಲೆ ಅದಕ್ಕೆ ಸಹಾಯಕವಾಗಿ ಕರ್ಮಗಳಾಗಲೀ ಉಪಾಸನೆಗಳಾಗಲೀ ಬೇಕಾಗಿಲ್ಲ ; ಎಂದು ಸ್ಪಷ್ಟವಾಗಿ ಹೇಳಿರುವ ಶ್ರೀಶಂಕರರು **ಅದ್ಭುತ ಶಾಸ್ತ್ರತಾತ್ಪರ್ಯವಿದ**ರಲ್ಲವೇ?

# 14. ಅದ್ಭುತ ಸಂಪ್ರದಾಯವಿದರಾಗಿ

ಒಂದೊಂದು ಶಾಸ್ತ್ರಕ್ಕೂ, ಅಥವಾ ದರ್ಶನಕ್ಕೂ ತನ್ನತನ್ನದೇ ಆದ ಚೌಕಟ್ಟು ಇರುತ್ತದೆ. ಅದನ್ನು ಅನುಸರಿಸಿಕೊಂಡು ಆಯಾ ಶಾಸ್ತ್ರವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸಾ, ವ್ಯಾಕರಣ, ಛಂದಸ್ಸು, ಜ್ಯೋತಿಷ, ಅಲಂಕಾರ, ಆಗಮ—ಹೀಗೆ ಅನೇಕ ಶಾಸ್ತ್ರಗಳಿವೆ. ಇವುಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಆಯಾ ಶಾಸ್ತ್ರ ಗಳ ಸಂಪ್ರದಾಯದಲ್ಲಿಯೇ ಹೋಗಬೇಕು. ಹೀಗೆಯೇ ನಾವು ವೇದಾಂತಗಳ ಎಂದರೆ ಉಪನಿಷತ್ತುಗಳ ಸಂದೇಶಗಳನ್ನು ಸರಿಯಾಗಿ ಸ್ಪಷ್ಟವಾಗಿ ತಿಳಿಯ ಬೇಕಾದರೂ ಅದಕ್ಕೆ ಒಂದು **ಸಂಪ್ರದಾಯ**ವೆಂಬುದಿರುತ್ತದೆ. ಪ್ರಕೃತ, ವೇದಾಂತ ಗಳ ಸಂಪ್ರದಾಯಕ್ಕೆ **ಅಧ್ಯಾರೋಪಾಪವಾದಸಂಪ್ರದಾಯ** ಎಂದು ಹೆಸರು.

**ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ।**
**ಶಿಷ್ಯಾಣಾಂ ಬೋಧಸಿದ್ಧ್ಯರ್ಥಂ ತತ್ತ್ವಜ್ಞೈಃ ಕಲ್ಪಿತಃ ಕ್ರಮಃ॥**

*ನಿರುಪಾಧಿಕವಾದ ಪರಬ್ರಹ್ಮವನ್ನು **ಅಧ್ಯಾರೋಪಾಪವಾದ**ವೆಂಬ ಸಂಪ್ರದಾಯ ದಿಂದಲೇ ಜ್ಞಾನಿಗಳು ತಿಳಿಸುತ್ತಾರೆ. ಶಿಷ್ಯರಿಗೆ ಬ್ರಹ್ಮವನ್ನು ತಿಳಿಸಲು ಈ ಕ್ರಮವನ್ನು ತತ್ತ್ವಜ್ಞರು ಕಲ್ಪಿಸಿರುತ್ತಾರೆ.*

ಆದ್ದರಿಂದ ನಿರ್ವಿಶೇಷವಾದ ನಿರುಪಾಧಿಕವಾದ ಮತ್ತು ಅವಾಙ್ಮನಸ ಗೋಚರವಾದ ಪರಬ್ರಹ್ಮವನ್ನು ಮುಮುಕ್ಷುಗಳು ಸಂಪ್ರದಾಯವಿದರಾದ ಆಚಾರ್ಯರಿಂದಲೇ ತಿಳಿದುಕೊಳ್ಳಬೇಕೇ ಹೊರತು ಸಂಪ್ರದಾಯವನ್ನು ಅರಿಯದ ಒಣಪಂಡಿತರಿಂದಲ್ಲ. ಏಕೆಂದರೆ ವೇದಾಂತಗಳಲ್ಲಿ ಪರಸ್ಪರ ವಿರುದ್ಧ ವಾದ ಉಪದೇಶಗಳಿರುವಂತೆ ಕಾಣುತ್ತವೆ. ಆದರೆ ನಿಜವಾಗಿ ಆ ಉಪದೇಶ ಗಳಲ್ಲಿ ಯಾವ ವಿರೋಧವೂ ಇಲ್ಲ. **ಅಧ್ಯಾರೋಪಾಪವಾದಸಂಪ್ರದಾಯಕ್ರಮ ದಿಂದ ಅರ್ಥಮಾಡಿಕೊಂಡರೆ ಎಲ್ಲಾ ವೇದಾಂತವಾಕ್ಯಗಳಿಗೂ ಸಮನ್ವಯವು ಆಗುತ್ತದೆ**. ಹೀಗಾಗಿ ಶ್ರೀಶಂಕರರು **ತಸ್ಮಾತ್ ಅಸಂಪ್ರದಾಯವಿತ್ ಸರ್ವಶಾಸ್ತ್ರ ವಿದಪಿ ಮೂರ್ಖವದೇವ ಉಪೇಕ್ಷಣೀಯಃ**; ಸರ್ವಶಾಸ್ತ್ರಗಳನ್ನು ಬಲ್ಲವ ನಾಗಿದ್ದರೂ ಸಂಪ್ರದಾಯವನ್ನು ತಿಳಿಯದಿದ್ದರೆ ಅಂಥ ಮಹಾಪಂಡಿತನನ್ನೂ ಮೂರ್ಖಶಿಖಾಮಣಿ ಎಂದು ತಿಳಿದು ಅವನನ್ನು ಉಪೇಕ್ಷಿಸಬೇಕು ಎಂದು ತಮ್ಮ ಗೀತಾಭಾಷ್ಯದಲ್ಲಿ (೧೩-೨) ಬರೆದಿದ್ದಾರೆ. ಹೀಗೆ **ಅಧ್ಯಾರೋಪ ಅಪವಾದ ವೆಂಬ ವೇದಾಂತಸಂಪ್ರದಾಯವನ್ನು ಬಲ್ಲಂಥ** ಶ್ರೀಶಂಕರರನ್ನು ನಾವು **ಅದ್ಭುತ ಸಂಪ್ರದಾಯವಿದರು** ಎಂದು ಕರೆಯಬಹುದಲ್ಲವೇ?

# 15. ಅದ್ಭುತ ವೈರಾಗ್ಯಚಕ್ರವರ್ತಿಗಳಾಗಿ

ಶ್ರೀಶಂಕರರು ಬರೀ ವೇದಾಂತವಾಕ್ಯಗಳನ್ನು ಉದಾಹರಿಸುತ್ತಾ, ವಾದ ವಿವಾದಗಳನ್ನು ಮಾಡುವ ಒಣವೇದಾಂತಿಗಳಲ್ಲ ; ಮತ್ತೇನೆಂದರೆ: ವೈರಾಗ್ಯಾದಿ ಸಾಧನಗಳಿಂದ ತುಂಬಿಕೊಂಡು, ಮುಮುಕ್ಷುಸಾಧಕರುಗಳಿಗೆ ವೈರಾಗ್ಯಭಾಗ್ಯದ ಮಹತ್ತ್ವವನ್ನೂ ಆತ್ಮಜ್ಞಾನದ ರುಚಿಯನ್ನೂ ತೋರಿಸುವ ಅದ್ಭುತವೈರಾಗ್ಯ ಚಕ್ರವರ್ತಿಗಳೂ ಆಗಿದ್ದಾರೆ ಎಂಬುದು ಅವರ ಭಾಷ್ಯವಾಕ್ಯಗಳಿಂದಲೇ ನಮಗೆ ತಿಳಿಯುತ್ತದೆ. ಇದಕ್ಕೆ ಕಾಠಕೋಪನಿಷತ್ ಭಾಷ್ಯದಿಂದ ಒಂದು ವಾಕ್ಯವನ್ನು ನಾವಿಲ್ಲಿ ಈಗ ನೋಡೋಣ:

**ಸರ್ವೇಂದ್ರಿಯಾಣಾಂ ಜರಯಂತಿ ತೇಜಃ।** ಕಾಠಕ ೧-೨೬

ಶಬ್ದಾದಿಪದಾರ್ಥಗಳು ಎಲ್ಲಾ ಇಂದ್ರಿಯಗಳ ಶಕ್ತಿಯನ್ನು ಮುಪ್ಪುಮಾಡುತ್ತವೆ ಎಂದು ಮಂತ್ರ ಹೇಳುತ್ತಿದೆ. ಇದಕ್ಕೆ ಶ್ರೀಶಂಕರರು ಹೀಗೆ ಬರೆದಿರುತ್ತಾರೆ:

**ಅನರ್ಥಾಯೈವ ಏತೇ ಭೋಗಾಃ; ಧರ್ಮವೀರ್ಯಪ್ರಜ್ಞಾತೇಜೋ ಯಶಃಪ್ರಭೃತೀನಾಂ ಕ್ಷಪಯಿತೃತ್ವಾತ್**; ಈ ವಿಷಯಭೋಗಗಳೆಲ್ಲವೂ ಮಾನವರ ಅನರ್ಥಕ್ಕೇ ಕಾರಣವಾಗಿರುತ್ತವೆ; ಏಕೆಂದರೆ ಇವುಗಳು ಮಾನವರ ಧರ್ಮ ವೀರ್ಯ ಪ್ರಜ್ಞಾ ತೇಜಸ್ಸು ಯಶಸ್ಸು ಮುಂತಾದವುಗಳನ್ನೆಲ್ಲ ಕ್ಷಯಮಾಡುತ್ತವೆ!

ಅಧ್ಯಾತ್ಮಸಾಧಕರಿಗೆ ಇಲ್ಲಿ ಶ್ರೀಶಂಕರರು ವೈರಾಗ್ಯಭಾಗ್ಯದ ಮಹತ್ತ್ವವನ್ನೂ, ವಿಷಯಭೋಗಗಳ ಹಣೆಬರಹವನ್ನೂ ಸುಂದರವಾಗಿ ಹೇಳಿದ್ದಾರೆ. ಶಬ್ದಸ್ಪರ್ಶ ರೂಪರಸಗಂಧಗಳೆಂಬ ಅನಾತ್ಮವಿಷಯಭೋಗಗಳಿಂದ ಮಾನವರಿಗೆ ದೈವದತ್ತ ವಾದ ಇಂದ್ರಿಯಶಕ್ತಿಗಳೆಲ್ಲವೂ ಕ್ರಮಕ್ರಮವಾಗಿ ನಾಶವಾಗುತ್ತವೆ; ಇದರಿಂದ ಮನಸ್ಸಿನ ಮೇಧಾಶಕ್ತಿಯೂ ಕುಂಠಿತವಾಗುತ್ತದೆ. ಏಕಾಗ್ರತೆ, ಮನಶ್ಶುದ್ಧಿ ಎಲ್ಲವೂ ನಿಧಾನವಾಗಿ ನಾಶವಾಗಿಬಿಡುತ್ತವೆ. ಹೀಗಾಗಿ ವಿಷಯಲಂಪಟರಾದ ಅಧ್ಯಾತ್ಮ ಸಾಧಕರಿಗೆ ಆತ್ಮಜ್ಞಾನವಾಗಲೀ ಮೋಕ್ಷವಾಗಲೀ ದೊರಕುವುದಿಲ್ಲ.

ಆದ್ದರಿಂದ ಮುಮುಕ್ಷುಗಳು ಇಂದ್ರಿಯನಿಗ್ರಹವನ್ನೂ ಮನೋನಿಗ್ರಹವನ್ನೂ ಖಂಡಿತವಾಗಿಯೂ ಸಾಧನೆಮಾಡಲೇಬೇಕು. ಇಂದ್ರಿಯಮನೋನಿಗ್ರಹವನ್ನೂ ಮಾಡದೇ, ವೈರಾಗ್ಯವನ್ನೂ ತಾಳದೇ ಬರೀ ಒಣವೇದಾಂತದ ಮಾತುಗಳಿಂದ ಬ್ರಹ್ಮಾತ್ಮಜ್ಞಾನದ ಅನುಭವವು ಸಾಧ್ಯವಿಲ್ಲ. ಈ ರಹಸ್ಯವನ್ನು ಬಲ್ಲವರಾದ ಶ್ರೀಶಂಕರರು ಬಾಲ್ಯದಲ್ಲಿಯೇ ವಿರಕ್ತರಾಗಿ, ಸಂನ್ಯಾಸಿಗಳೂ ಆಗಿ **ಅದ್ಭುತ ವೈರಾಗ್ಯಚಕ್ರವರ್ತಿಗಳೂ** ಆಗಿರುತ್ತಾರೆ. ಅನಾತ್ಮ ವಿಷಯಗಳಿಂದ ವಿರಕ್ತನಾಗುತ್ತಾ ಹೋದಂತೆ ಸಾಧಕನು ವೇದಾಂತದ ಸಂದೇಶಗಳನ್ನು ಅರ್ಥಮಾಡಿಕೊಳ್ಳುತ್ತಾನೆ.

# 16. ಅದ್ಭುತ ಅನುಕಂಪಿಗಳಾಗಿ

ಶ್ರೀಶಂಕರರು ತಮ್ಮ ಪಾಂಡಿತ್ಯವನ್ನು ತೋರಿಸಿ ಅದರಿಂದ ಖ್ಯಾತಿಲಾಭ ಗೌರವಗಳನ್ನು ಸಂಪಾದಿಸುವುದಕ್ಕಾಗಿ ಭಾಷ್ಯಗಳನ್ನು ಬರೆದಿಲ್ಲ. ಮತ್ತೇನೆಂದರೆ ಸಕಲ ಮಾನವರೂ ಶ್ರುತಿಸ್ಮೃತಿಸೂತ್ರಗಳ ಎಂದರೆ **ಪ್ರಸ್ಥಾನತ್ರಯಗ್ರಂಥ**ಗಳ ಸಂದೇಶಗಳನ್ನು ಅರ್ಥಮಾಡಿಕೊಂಡು, ಆತ್ಮಜ್ಞಾನವನ್ನು ಪಡೆದುಕೊಂಡು ಕೃತಾರ್ಥರಾಗಲಿ ಎಂಬ ಏಕೈಕ ಉದ್ದೇಶದಿಂದ ಪ್ರಸ್ಥಾನತ್ರಯಗಳಿಗೆ ಭಾಷ್ಯಗಳನ್ನು ಬರೆದಿದ್ದಾರೆ. ಕಾರುಣ್ಯಸಾಗರರಾಗಿ, ಮುಮುಕ್ಷುಜನಗಳ ಮೇಲಿನ ಅನುಕಂಪೆ ಯಿಂದಲೇ ಶ್ರೀಶಂಕರರು ಭಾಷ್ಯಗಳನ್ನು ರಚಿಸಿದ್ದಾರೆ. ಶ್ರೀಶಂಕರರ ಭಾಷ್ಯಗಳಲ್ಲಿ ಇಂಥ ನೂರಾರು ವಾಕ್ಯಗಳು ನಮಗೆ ಉಪಲಬ್ಧವಾಗುತ್ತವೆ.

ಆದರೆ, ನಾನಿಲ್ಲಿ ಬೃಹದಾರಣ್ಯಕಭಾಷ್ಯದಿಂದ ಇಂಥ ಒಂದು ವಾಕ್ಯವನ್ನು ಬರೆಯುತ್ತಿದ್ದೇನೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ೪-೩-೧೪ರಲ್ಲಿ ಬರುವ ಮಂತ್ರವಿದು: **ಆರಾಮಮಸ್ಯ ಪಶ್ಯಂತಿ, ನ ತಂ ಪಶ್ಯತಿ ಕಶ್ಚನ ಇತಿ**. ಈ ಆತ್ಮನ ಆರಾಮವನ್ನು ಎಲ್ಲರೂ ಕಾಣುತ್ತಾರೆ, ಆದರೆ ಆ ಆತ್ಮನನ್ನು ಮಾತ್ರ ಯಾವನೂ ಅರಿಯನು. ಈ ಮಂತ್ರಕ್ಕೆ ಭಾಷ್ಯವನ್ನು ಬರೆಯುವಾಗ ಶ್ರೀಶಂಕರರು ಹೀಗೆ ಬರೆದಿದ್ದಾರೆ:

**ಕಷ್ಟಂ ಭೋ ವರ್ತತೇ, ಅತ್ಯಂತವಿವಿಕ್ತಂ ದೃಷ್ಟಿಗೋಚರಾಪನ್ನಮಪಿ, ಅಹೋ ಭಾಗ್ಯಹೀನತಾ ಲೋಕಸ್ಯ, ಯತ್ ಶಕ್ಯದರ್ಶನಮಪಿ ಆತ್ಮಾನಂ ನ ಪಶ್ಯತೀತಿ ಲೋಕಂ ಪ್ರತಿ ಅನುಕ್ರೋಶಂ ದರ್ಶಯತಿ ಶ್ರುತಿಃ।**

*ಅಯ್ಯೋ, ಕಷ್ಟವಾಗಿದೆಯಲ್ಲ! ಅತ್ಯಂತ ಸುಸ್ಪಷ್ಟವಾಗಿ ಆತ್ಮನನ್ನು ಸುಲಭವಾಗಿ ಕಾಣಬಹುದಾಗಿದ್ದರೂ, ಏನಿದು ಜನಗಳ ದೌರ್ಭಾಗ್ಯವೆಂಬುದು? ಆತ್ಮನನ್ನು ಸುಲಭವಾಗಿ ತಿಳಿಯಬಹುದಾಗಿದ್ದರೂ ಆತ್ಮನನ್ನು ಜನಗಳು ತಿಳಿಯುತ್ತಿಲ್ಲವಲ್ಲ! ಅಯ್ಯೋ ದೌರ್ಭಾಗ್ಯವೇ! ಎಂದು ಅಜ್ಞರಾದ ಜನಗಳ ವಿಷಯದಲ್ಲಿ ಶ್ರುತಿಮಾತೆಯು ಸಂಕಟದಿಂದ ಅನುಕಂಪೆಯನ್ನು ತೋರಿಸುತ್ತಿದೆ.*

ಆತ್ಮನನ್ನು ವಿವೇಕದಿಂದ ಯಾರುಬೇಕಾದರೂ ಸ್ವಾನುಭವದಿಂದ ಸುಲಭ ವಾಗಿ ತಿಳಿದುಕೊಂಡು, ಈ ಸಂಸಾರಚಕ್ರದಿಂದ ತಪ್ಪಿಸಿಕೊಂಡು ಬ್ರಹ್ಮಾನಂದವನ್ನೇ ಪಡೆದುಕೊಂಡು ಮುಕ್ತರಾಗಿಬಿಡಬಹುದು. ಏಕೆಂದರೆ ಆತ್ಮನು ನಮ್ಮೆಲ್ಲರ ನಿಜ ಸ್ವರೂಪನೇ ಅಲ್ಲವೇ! ಆತ್ಮಜ್ಞಾನವು ಅತ್ಯಂತ ಸುಲಭದಲ್ಲಿ ಸುಲಭ! ಆದರೂ ಇಂಥ ಆತ್ಮನನ್ನು ಜನಗಳು ತಿಳಿಯುತ್ತಿಲ್ಲವಲ್ಲ! ಏನಿದು ದೌರ್ಭಾಗ್ಯ! ಎಂದು ಆತ್ಮವಿದರಾದ ಶ್ರೀಶಂಕರರು ಅಜ್ಞರ ಮೇಲೆ ಅನುಕಂಪೆಯನ್ನು ತೋರಿಸುತ್ತಾ **ಅದ್ಭುತ ಅನುಕಂಪಿಗಳೂ** ಆಗಿರುತ್ತಾರಲ್ಲವೇ?

# 17. ಅದ್ಭುತ ವೈಯ್ಯಾಕರಣರಾಗಿ

ಶ್ರೀಶಂಕರರು ಪದವಾಕ್ಯಪ್ರಮಾಣಜ್ಞರಾಗಿ, ಎಂದರೆ ವ್ಯಾಕರಣ, ಮೀಮಾಂಸಾ ಮತ್ತು ತರ್ಕಶಾಸ್ತ್ರಕೋವಿದರಾಗಿ ಸರ್ವಜ್ಞಸದೃಶರು ಎಂಬಿದು ಸಕಲಪಂಡಿತರಿಗೂ ತಿಳಿದ ವಿಷಯವೇ ಆಗಿದೆ. ಷಡಂಗಗಳೆಂದರೆ: ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಜ್ಯೋತಿಷ ಮತ್ತು ಛಂದಸ್ಸುಗಳು. ಶ್ರೀಶಂಕರರು ಷಡಂಗ ವಿದರೂ ಆಗಿದ್ದಾರೆ. ಈ ಷಡಂಗಗಳಲ್ಲಿ ವ್ಯಾಕರಣವು ವೇದಪುರುಷನಿಗೆ ಮುಖವಾಗಿದೆ, **ಮುಖಂ ವ್ಯಾಕರಣಂ ಸ್ಮೃತಮ್**. ಪಾಣಿನೀಯ ವ್ಯಾಕರಣದ ಅಷ್ಟಾಧ್ಯಾಯೀ ಸೂತ್ರಗಳಿಗೆಲ್ಲ, ಅಂದರೆ ಸುಮಾರು ೩೯೯೬ ಸೂತ್ರಗಳಿಗೂ **ಭಗವಾನ್ ಪತಂಜಲಿ ಮಹರ್ಷಿಗಳು** ಭಾಷ್ಯವನ್ನು ಬರೆದಿರುತ್ತಾರೆ. ಶ್ರೀಶಂಕರರು ಇದನ್ನೆಲ್ಲ ಸಂಪೂರ್ಣವಾಗಿ ಆಳವಾಗಿ ತಿಳಿದಿರುವ ಪಂಡಿತೋತ್ತಮ ರಾಗಿ **ಅದ್ಭುತ ವೈಯ್ಯಾಕರಣರಾಗಿರುತ್ತಾರೆ.**

ಶ್ರೀಶಂಕರರ **ವೇದಾಂತಮೀಮಾಂಸಾಭಾಷ್ಯವನ್ನು** ಆಳವಾಗಿ ಅಧ್ಯಯನ ಮಾಡಿದವರಿಗೆ ಇದು ಚೆನ್ನಾಗಿ ತಿಳಿಯುತ್ತದೆ. **ಪಾತಂಜಲ ವ್ಯಾಕರಣ ಮಹಾ ಭಾಷ್ಯಕ್ಕೆ ಸಾಟಿಯಾದ ಮತ್ತೊಂದು ಭಾಷ್ಯವೆಂದರೆ ಶ್ರೀಶಂಕರರ ಬ್ರಹ್ಮಸೂತ್ರಭಾಷ್ಯವೇ ಎಂದು ಎಲ್ಲಾ ಪಂಡಿತರೂ ಅಭಿಪ್ರಾಯಪಡುತ್ತಾರೆ.** ಮಹಾಭಾಷ್ಯದ ಶೈಲಿಯಲ್ಲಿ ರಚಿತವಾದ ಮತ್ತೊಂದು ಭಾಷ್ಯವೆಂದರೆ ಶಂಕರರ ಶಾರೀರಕಮೀಮಾಂಸಾಭಾಷ್ಯವೇ ಎಂಬುದರಲ್ಲಿ ಸಂಶಯವಿಲ್ಲ. ಹೀಗಾಗಿ **ಶ್ರೀಶಂಕರರು ಅದ್ಭುತ ವೈಯ್ಯಾಕರಣರು** ಎಂಬುದರಲ್ಲಿ ಎರಡನೇ ಮಾತಿಲ್ಲ.

ಇದಕ್ಕೆ ಉದಾಹರಣೆಯಾಗಿ ಶಾಂಕರಭಾಷ್ಯಗ್ರಂಥಗಳಲ್ಲಿ ನೂರಾರು ವಾಕ್ಯಗಳು ನಮಗೆ ಸಿಕ್ಕುತ್ತವೆ. ಆದರೆ ನಾನಿಲ್ಲಿ ತೈತ್ತಿರೀಯೋಪನಿಷತ್ತಿನ ಒಂದು ವಾಕ್ಯವನ್ನು ಅಥವಾ ಪದವನ್ನು ಉದಾಹರಣೆಯಾಗಿ ತೋರಿಸುತ್ತೇನೆ: **"ಕಶ್ಚಿತ್ ಸಮಶ್ನುತಾಽ ಉ"** (ತೈ. ಆನಂದವಲ್ಲಿ ೬-೩) ಮಂತ್ರದಲ್ಲಿರುವ **'ಸಮಶ್ನುತೇ ಉ"** ಎಂಬ ಈ ಎರಡು ಪದಗಳಿಗೆ ಸಂಧಿಕಾರ್ಯವನ್ನು ಶ್ರೀಶಂಕರರು ಸುಂದರ ವಾಗಿ ಹೀಗೆ ವಿವರಿಸಿದ್ದಾರೆ: **'ಸಮಶ್ನುತೇ ಉ' ಇತ್ಯೇವಂ ಸ್ಥಿತೇ, ಅಯಾದೇಶೇ, ಯಲೋಪೇ ಚ ಕೃತೇ, ಅಕಾರಸ್ಯ ಪ್ಲುತೇ "ಸಮಶ್ನುತಾಽಉ" ಇತಿ।** ಹೀಗೆಯೇ **"ಉತಾಹೋ ವಿದ್ವಾನ್"** ಪದಗಳಿಗೂ ಸಂಧಿಕಾರ್ಯವನ್ನು ತೋರಿಸಿದ್ದಾರೆ. ಇದು ಸುಮ್ಮನೆ ತಮಾಷೆಗಾಗಿ ನಾನು ಇಲ್ಲಿ ಹೇಳಿದ್ದೇನೆ. ಹೀಗೆ ತಮ್ಮ ಭಾಷ್ಯಗಳಲ್ಲಿ ಇನ್ನೂ ಅನೇಕ ವ್ಯಾಕರಣವಿಶೇಷಗಳನ್ನು ಮಾನವರಿಗೆ ತಿಳಿಸಿರುವ ಶ್ರೀಶಂಕರರು ನಿಜಕ್ಕೂ **ಅದ್ಭುತ ವೈಯ್ಯಾಕರಣರಾಗಿದ್ದಾರೆ**!

# 18. ಅದ್ಭುತ ಹಿತೈಷಿಗಳಾಗಿ

ಸದ್ಗುರುಗಳ ಕೆಲವು ಮಾತುಗಳು ನಮಗೆ ಸ್ವಲ್ಪ ಖಾರವಾಗಿ ತೋರುತ್ತವೆ. ಏಕೆಂದರೆ ಅವುಗಳು ನಮಗೆ ಪ್ರಿಯವಾಗಿರುವುದಿಲ್ಲ, ಅವುಗಳು ಹಿತೋಪದೇಶಗಳು. ಹಿತೋಪದೇಶಗಳು ಪ್ರಿಯೋಪದೇಶಗಳಲ್ಲ. ಜನಗಳಿಗೆ ಯಾವಾಗಲೂ ಪ್ರಿಯೋಪದೇಶಗಳೇ ಬೇಕು. ಇವುಗಳು ಕೇಳಲೂ ಅನುಷ್ಠಾನ ಮಾಡಲೂ ಸುಲಭವೂ ಪ್ರಿಯವೂ ಆಗಿರುತ್ತವೆ. ಆದರೆ ಅಧ್ಯಾತ್ಮಸಾಧಕರಿಗೆ, ಅದರಲ್ಲೂ ನಿಜವಾದ ಮುಮುಕ್ಷುಗಳಾದ ತತ್ತ್ವಜಿಜ್ಞಾಸುಗಳಿಗೆ ಪ್ರಿಯೋಪದೇಶ ಗಳಿಗಿಂತಲೂ ಹಿತೋಪದೇಶಗಳೇ ಬೇಕು. ಹಿತೋಪದೇಶ ಶ್ರವಣದಿಂದಲೇ ಅಧ್ಯಾತ್ಮಸಾಧಕರು ಉದ್ಧಾರವಾಗುತ್ತಾರೆ. ಹೀಗಾಗಿ ಶ್ರೀಶಂಕರರು ತಮ್ಮ ಭಾಷ್ಯ ಗಳಲ್ಲಿ ಮುಮುಕ್ಷುಗಳಿಗೆ ನೂರಾರು ಹಿತೋಪದೇಶಗಳನ್ನು ಮಾಡಿರುತ್ತಾರೆ. ಅವುಗಳಲ್ಲಿ ಒಂದನ್ನು ಮಾತ್ರ ನಾನಿಲ್ಲಿ ತಿಳಿಸುತ್ತೇನೆ:

ಕಾಠಕೋಪನಿಷತ್ತಿನ ಒಂದು ಮಂತ್ರಕ್ಕೆ (೪-೧೫) ಶ್ರೀಶಂಕರರು ಭಾಷ್ಯ ದಲ್ಲಿ ಹೀಗೆ ಹೇಳಿದ್ದಾರೆ. ಆ ಮೂಲಮಂತ್ರವನ್ನು ನೋಡೋಣ:

**ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ।**
**ಏವಂ ಮುನೇರ್ವಿಜಾನತಃ ಆತ್ಮಾ ಭವತಿ ಗೌತಮ॥**

*ವಿಶುದ್ಧ ಆತ್ಮನನ್ನು ತಾನೆಂದು ತಿಳಿದ ಆತ್ಮವಿದನಿಗೆ ಈ ವಿಶ್ವವೆಲ್ಲವೂ ಆತ್ಮನೇ ಆಗಿಬಿಡುತ್ತದೆ. ಬ್ರಹ್ಮಜ್ಞಾನಿಗೆ ಯಾವ ನಾಮರೂಪಭೇದಗಳೂ ಸತ್ಯವಾಗಿ ಉಳಿಯುವುದಿಲ್ಲ; ಶುದ್ಧವಾದ ನೀರಿನಲ್ಲಿ ಶುದ್ಧವಾದ ನೀರನ್ನು ಹಾಕಿದಾಗ ಎರಡೂ ಸೇರಿಕೊಂಡು ಒಂದೇ ನೀರಾಗಿಬಿಡುವಂತೆ.*

ಈ ಸಂದರ್ಭದಲ್ಲಿ ಶ್ರೀಶಂಕರರು ಮುಮುಕ್ಷುಸಾಧಕರಿಗೆ ಹಿತೈಷಿಗಳಾಗಿ ಈ ಕೆಳಗಿನ ಕಿವಿಮಾತುಗಳನ್ನು ಪ್ರೀತಿಯಿಂದ ಹೀಗೆ ಹೇಳಿರುತ್ತಾರೆ:

**ತಸ್ಮಾತ್ ಕುತಾರ್ಕಿಕಭೇದದೃಷ್ಟಿಂ ನಾಸ್ತಿಕಕುದೃಷ್ಟಿಂ ಚ ಉಜ್ಝಿತ್ವಾ ಮಾತೃಪಿತೃಸಹಸ್ರೇಭ್ಯೋಽಪಿ ಹಿತೈಷಿಣಾ ವೇದೇನ ಸಮುಪದಿಷ್ಟಮ್ ಆತ್ಮೈಕತ್ವಂ ಶಾಂತದರ್ಪೈಃ ಆದರಣೀಯಮ್ ಇತ್ಯರ್ಥಃ॥**

ಇದರ ತಾತ್ಪರ್ಯ: ಆದ್ದರಿಂದ ಕುತಾರ್ಕಿಕರ ಭೇದದೃಷ್ಟಿಯನ್ನೂ ಮತ್ತು ನಾಸ್ತಿಕರ ಕುದೃಷ್ಟಿಯನ್ನೂ ಮುಮುಕ್ಷುಗಳು ಸಂಪೂರ್ಣವಾಗಿ ಬಿಟ್ಟು ಸಹಸ್ರಾರು ತಾಯಿತಂದೆಯರಿಗಿಂತಲೂ ಹೆಚ್ಚಿನ ಪ್ರೀತಿಯಿಂದ ಹಿತೋಪದೇಶವನ್ನು ಮಾಡುತ್ತಿರುವ ವೇದವು ಉಪದೇಶಿಸುತ್ತಿರುವ ಆತ್ಮೈಕತ್ವವನ್ನೇ ಶಾಂತರಾಗಿ, ದರ್ಪವಿಲ್ಲದೇ ಶ್ರವಣಮಾಡಿ ಧನ್ಯರಾಗಬೇಕು—ಎಂದು ತಾತ್ಪರ್ಯ. ಹೀಗೆ ಮುಮುಕ್ಷುಗಳಿಗೆ ಉಪದೇಶಿಸಿರುವ ಶ್ರೀಶಂಕರರು **ಅದ್ಭುತ ಹಿತೈಷಿಗಳಲ್ಲವೇ?**

# 19. ಅದ್ಭುತ ಆಲಂಕಾರಿಕರಾಗಿ

ಸಾಮಾನ್ಯ ಲೌಕಿಕಜನಗಳ ದೃಷ್ಟಿಯಿಂದ ಅದ್ವೈತವೇದಾಂತ ಎಂದರೆ, ಶುಷ್ಕಶಾಸ್ತ್ರ. ಏಕೆಂದರೆ ಅವರಿಗೆ ಅರ್ಥವಾಗದ ಕಗ್ಗದ ಮಾತುಗಳು ಇಲ್ಲಿ ಇವೆ. ಉಪಾಧಿ, ಅಧ್ಯಾರೋಪ, ಪಂಚಕೋಶ, ಮಿಥ್ಯಾಜ್ಞಾನ, ಬ್ರಹ್ಮವಿದ್ಯಾ, ಮೋಕ್ಷ, ಬ್ರಹ್ಮೋಪಾಸನೆ, ಬ್ರಹ್ಮಲೋಕ, ಪ್ರಸ್ಥಾನತ್ರಯ, ವಿದೇಹಮುಕ್ತಿ ಇತ್ಯಾದಿ ಶಬ್ದಗಳೆಲ್ಲವೂ ಲೌಕಿಕರಿಗೆ ಅರ್ಥವಾಗದ ಶಬ್ದಗಳು. ಏಕೆಂದರೆ ಇದು ಅದ್ವೈತ ವೇದಾಂತ. ಇದನ್ನು ಉಪದೇಶಿಸುವುದಕ್ಕಾಗಿಯೇ ವೇದಾಂತಗಳು ಹೊರಟಿರುತ್ತವೆ. ಇಂಥ ಗ್ರಂಥಗಳಿಗೆ ಶ್ರೀಶಂಕರರು ಭಾಷ್ಯಗಳನ್ನು ಬರೆದಿರುತ್ತಾರೆ. ಅಂದರೆ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳೂ ಲೌಕಿಕರಿಗೆ ನೀರಸವೇ ಆಗಿರುತ್ತವೆ.

ಆದರೆ ಶ್ರೀಶಂಕರರು ಇಂಥ ವೇದಾಂತ ಸಂದೇಶಗಳನ್ನು ತಿಳಿಸುವಾಗ ಅಲ್ಲಿನ ಕೆಲವು ಪದಗಳಿಗೆ ಆಲಂಕಾರಿಕಭಾಷೆಯಲ್ಲಿ ಅರ್ಥವನ್ನು ಬರೆಯುತ್ತಾರೆ. ಉದಾಹರಣೆಗೆ: ಭಗವದ್ಗೀತೆಯಲ್ಲಿ ಒಂದು ಶ್ಲೋಕ (೧೦-೧೧) ಕ್ಕೆ

**ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ।**
**ನಾಶಯಾಮ್ಯಾತ್ಮಭಾವಸ್ಥೋ "ಜ್ಞಾನದೀಪೇನ" ಭಾಸ್ವತಾ॥**

"**ಜ್ಞಾನದೀಪ**"ದಿಂದ, ನನ್ನ ಭಕ್ತರುಗಳ ಅಜ್ಞಾನವನ್ನು ನಾನು ನಾಶಮಾಡುತ್ತೇನೆ ಎಂದು ಶ್ರೀಕೃಷ್ಣನು ಇಲ್ಲಿ ಹೇಳಿರುತ್ತಾನೆ. ಇಲ್ಲಿರುವ **ಜ್ಞಾನದೀಪ**ವನ್ನು ಶ್ರೀಶಂಕರರು **ರೂಪಕಾಲಂಕಾರ**ದಿಂದ ಹೀಗೆ ವರ್ಣಿಸಿರುತ್ತಾರೆ:

**ಜ್ಞಾನದೀಪೇನ ವಿವೇಕಪ್ರತ್ಯಯರೂಪೇಣ, ಭಕ್ತಿಪ್ರಸಾದಸ್ನೇಹಾಭಿಷಿಕ್ತೇನ ಮದ್ಭಾವನಾಭಿನಿವೇಶವಾತೇರಿತೇನ ಬ್ರಹ್ಮಚರ್ಯಾದಿ ಸಾಧನಸಂಸ್ಕಾರವತ್ ಪ್ರಜ್ಞಾವರ್ತಿನಾ ವಿರಕ್ತಾಂತಃಕರಣಾಧಾರೇಣ ವಿಷಯವ್ಯಾವೃತ್ತ ಚಿತ್ತರಾಗದ್ವೇಷಾ- ಕಲುಷಿತನಿವಾತಾಪವರಕಸ್ಥೇನ ನಿತ್ಯಪ್ರವೃತ್ತೈಕಾಗ್ರ್ಯಧ್ಯಾನಜನಿತಸಮ್ಯಗ್ದರ್ಶನ ಭಾಸ್ವತಾ "ಜ್ಞಾನದೀಪೇನ" ಇತ್ಯರ್ಥಃ॥**

ವಿವೇಕಪ್ರತ್ಯಯವೆಂಬ ಜ್ಞಾನದೀಪದಿಂದ ಅಜ್ಞಾನವು ದೂರವಾಗುತ್ತದೆ. ಈ ದೀಪಕ್ಕೆ ಭಕ್ತಿಯ ಪ್ರಸಾದವೆಂಬ ಎಣ್ಣೆ, ಭಗವದ್ಭಕ್ತಿಯೆಂಬ ಗಾಳಿ, ಬ್ರಹ್ಮಚರ್ಯಾದಿ ಸಾಧನಸಂಸ್ಕಾರವೇ ಬತ್ತಿ, ವಿರಕ್ತಾಂತಃಕರಣವೇ ಕಂಬ, ರಾಗ ದ್ವೇಷಗಳಿಲ್ಲದ ಕೋಣೆ, ಏಕಾಗ್ರತೆಯಿಂದ ಮತ್ತು ಧ್ಯಾನದಿಂದುಂಟಾದ ಸಮ್ಯಗ್ ದರ್ಶನವೇ ಜ್ಞಾನದೀಪ. ಶ್ರೀಶಂಕರರ ಈ ರಸಭರಿತ ಮಾತುಗಳನ್ನು ಕೇಳುತ್ತಿದ್ದರೆ ಯಾರಿಗಾದರೂ ಜ್ಞಾನದೀಪದ ಮಹಿಮೆಯು ಅರ್ಥವಾಗುತ್ತದೆಯಲ್ಲವೇ? ಹೀಗಾಗಿ ಶಂಕರರನ್ನು **ಅದ್ಭುತ ಆಲಂಕಾರಿಕರು** ಎಂದು ಕರೆಯೋಣವೇ?

# 20. ಅದ್ಭುತ ಕವಿಗಳಾಗಿ

ವೇದಾಂತಭಾಷ್ಯಕಾರರಾದ ಶ್ರೀಶಂಕರರು ಅದ್ಭುತ ವ್ಯಾಕರಣವಿದ್ವಾಂಸರು ಮಾತ್ರವಲ್ಲ ; ಮತ್ತೇನೆಂದರೆ, ಅವರು **ಅದ್ಭುತಕವಿಗಳೂ** ಹೌದು. ಕ್ರಾಂತದರ್ಶಿಗಳೇ ಕವಿಗಳು, ನೀರಸವಿಷಯಗಳನ್ನು ರಸವತ್ತಾಗಿ ವಿವರಿಸಿ ಹೇಳುವವರೇ ಕವಿಗಳು. ಪ್ರಾಸ ಅಲಂಕಾರ ವೃತ್ತಗಳಿಂದ ಕೂಡಿದ ವಾಕ್ಯಗಳಿಂದ ಜನಗಳಿಗೆ ಸಂತೋಷವಾಗುವಂತೆ, ಶುಷ್ಕವಿಷಯಗಳನ್ನು ದೃಷ್ಟಾಂತಗಳಿಂದ ಮನಮುಟ್ಟುವಂತೆ ಸ್ವಾರಸ್ಯವಾಗಿ ತಿಳಿಸುವ ಪಂಡಿತರೇ ಕವಿಗಳು. ಕಾಳಿದಾಸ, ಭಾಸ, ಭವಭೂತಿ, ಭಾರವಿ ಮುಂತಾದವರು **ಮಹಾಕವಿ**ಗಳೆಂದು ಪ್ರಸಿದ್ಧರಾಗಿರುತ್ತಾರೆ.

ಶ್ರೀಶಂಕರರ **ಪ್ರಸ್ಥಾನತ್ರಯಭಾಷ್ಯಗಳನ್ನು** ನಿಧಾನವಾಗಿ ಓದುತ್ತಿದ್ದರೆ ಶ್ರೀಶಂಕರರು **ಅದ್ಭುತಕವಿಗಳೂ** ಆಗಿದ್ದರು ಎಂಬುದು ನಮಗೆ ತಿಳಿಯುತ್ತದೆ. ಇದಕ್ಕೆ ಅವರ ಭಾಷ್ಯಗ್ರಂಥಗಳಲ್ಲಿ ಅನೇಕ ಉದಾಹರಣೆಗಳನ್ನು ನಾವು ಕಾಣಬಹುದು. ನಾನಿಲ್ಲಿ ಒಂದೆರಡು ಅಂಥ ವಾಕ್ಯಗಳನ್ನು ತೋರಿಸಲು ಇಚ್ಛಿಸುತ್ತೇನೆ:

**ತಾ ಏತಾ ದೇವತಾಃ ಸೃಷ್ಟಾ ಅಸ್ಮಿನ್ ಮಹತ್ಯರ್ಣವೇ ಪ್ರಾಪತನ್** ಎಂದು ಐತರೇಯೋಪನಿಷತ್ತಿನ (೧-೨-೧) ಮಂತ್ರಕ್ಕೆ ಶ್ರೀಶಂಕರರು ಹೀಗೆ ಭಾಷ್ಯವನ್ನು ಬರೆದಿದ್ದಾರೆ: **ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಈ ದೇವತೆಗಳು ಈ ಸಂಸಾರಸಾಗದಲ್ಲಿ ಬಿದ್ದರು** ಎಂಬುದು ಈ ಮಂತ್ರಕ್ಕೆ ತಾತ್ಪರ್ಯ. ಈ ಸಂಸಾರಸಾಗರವನ್ನು ಶಂಕರರು ಕಾವ್ಯಮಯಭಾಷೆಯಲ್ಲಿ ಹೀಗೆ ವರ್ಣಿಸಿದ್ದಾರೆ:

**ಅಸ್ಮಿನ್ ಸಂಸಾರಾರ್ಣವೇ ಅವಿದ್ಯಾಕಾಮಕರ್ಮಪ್ರಭವದುಃಖೋದಕೇ, ತೀವ್ರರೋಗಜರಾಮೃತ್ಯುಮಹಾಗ್ರಾಹೇ, ಅನಾದೌ, ಅನಂತೇ, ಅಪಾರೇ, ನಿರಾಲಂಬೇ.... ಮೋಕ್ಷತೀರೇ ಸಂಸಾರಾರ್ಣವೇ ಪ್ರಾಪತನ್ ಪತಿತವತ್ಯಃ ಸರ್ವಾ ದೇವತಾಃ** ॥ ಪೂರ್ಣಪಾಠಕ್ಕೆ ಮೂಲಭಾಷ್ಯವನ್ನು ನೋಡಬಹುದು.

ಇನ್ನೊಂದು ಉದಾಹರಣೆ: ಮುಂಡಕೋಪನಿಷದ್ಭಾಷ್ಯದಲ್ಲಿ (೧-೨-೧೨): **ಕರ್ಮಚಿತಾನ್ ಲೋಕಾನ್, ಸಂಸಾರಗತಿಭೂತಾನ್। ಅವ್ಯಕ್ತಾದಿಸ್ಥಾವರಾಂತಾನ್, ವ್ಯಾಕೃತಾವ್ಯಾಕೃತಲಕ್ಷಣಾನ್, ಬೀಜಾಂಕುರವತ್ ಇತರೇತರೋತ್ಪತ್ತಿನಿಮಿತ್ತಾನ್, ಅನೇಕಾನರ್ಥಶತಸಹಸ್ರಸಂಕುಲಾನ್, ಕದಲೀಗರ್ಭವತ್ ಅಸಾರಾನ್, ಮಾಯಾಮರೀಚ್ಯುದಕಗಂಧರ್ವನಗರಾಕಾರಸ್ವಪ್ನಜಲಬುದ್ಬುದಫೇನಸಮಾನ್, ಪ್ರತಿಕ್ಷಣಪ್ರಧ್ವಂಸಾನ್ ಅವಿದ್ಯಾಕಾಮದೋಷಪ್ರವರ್ತಿತಕರ್ಮಚಿತಾನ್ ಲೋಕಾನ್, ವಿವೇಕೇನ ಪ್ರಸ್ಪತಃ ಕೃತ್ವಾ** ॥

ಎಂದು ಶ್ರೀಶಂಕರರು **ಲೋಕಾನ್** ಎಂಬ ಮಂತ್ರದ ಪದಕ್ಕೆ ಬರೆದಿರುವುದನ್ನು ನೋಡಿದರೆ ಶ್ರೀಶಂಕರರನ್ನು **ಅದ್ಭುತ ಕವಿಗಳೆಂದು** ಕರೆಯಬಹುದಲ್ಲವೇ?

# 21. ಅದ್ಭುತ ಬ್ರಹ್ಮಜ್ಞಾನಿಗಳಾಗಿ

ಶ್ರೀಶಂಕರರನ್ನು ಸಾಮಾನ್ಯವಾಗಿ ಮಹಾಮೇಧಾವಿಗಳು, ಮಹಾಪಂಡಿತೋತ್ತಮರು, ಸಕಲಶಾಸ್ತ್ರಪಾರಂಗತರು, ಮಹಾತ್ಯಾಗಿಗಳು—ಎಂದೆಲ್ಲಾ ಕೊಂಡಾಡುತ್ತೇವೆ. ಆದರೆ ಇದೆಲ್ಲಕ್ಕಿಂತ ಹೆಚ್ಚಾಗಿ **ಶ್ರೀಶಂಕರರು ಅದ್ಭುತ ಬ್ರಹ್ಮಜ್ಞಾನಿಗಳೂ** ಆಗಿದ್ದಾರೆ ಎಂಬುದನ್ನು ನಾವುಗಳಾರೂ ಮರೆಯಲೇಬಾರದು. ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಇದಕ್ಕೆ ನೂರಾರು ಪ್ರಮಾಣವಾಕ್ಯಗಳು ಸಿಕ್ಕುತ್ತವೆ.

ಸರಿ, ಬ್ರಹ್ಮಜ್ಞಾನಿಗಳು ಎಂದರೇನು? ಎಂದರೆ, ಇದೆಲ್ಲವೂ ಪರಬ್ರಹ್ಮವೇ ಹೊರತು, ಪರಬ್ರಹ್ಮಕ್ಕಿಂತ ಭಿನ್ನವಾಗಿ ದ್ವೈತವ್ಯವಹಾರಗಳಾವುವೂ ಇಲ್ಲವೇ ಇಲ್ಲ ಎಂದು ನಿಶ್ಚಿತವಾಗಿ ತಿಳಿದ ಮಹಾತ್ಮರೇ ಬ್ರಹ್ಮಜ್ಞಾನಿಗಳು. ಇದು ಸಾಧ್ಯವೇ? ಎಂದರೆ, ಖಂಡಿತಾ ಸಾಧ್ಯ. ಹಾಗಾದರೆ ಲೋಕದಲ್ಲಿ ಪ್ರತಿಯೊಬ್ಬರೂ ನೂರಾರು ರೀತಿಯಲ್ಲಿ ವ್ಯವಹಾರಗಳನ್ನು ಮಾಡುತ್ತಾ ಇದ್ದಾರಲ್ಲ! ಇದೆಲ್ಲವೂ ಹಾಗಾದರೆ ಸುಳ್ಳಾದದ್ದೇ? ಎಂದರೆ, ಹೌದು, ಈ ವ್ಯವಹಾರಗಳೆಲ್ಲವೂ ಮಿಥ್ಯಾಭೂತವಾದವುಗಳೇ; ಅಂದರೆ ಅವಿದ್ಯೆಯಿಂದಲೇ ತೋರುತ್ತಿವೆಯೇ ಹೊರತು ಪರಮಾರ್ಥಸತ್ಯವಲ್ಲ ಎಂದು ಶ್ರೀಶಂಕರರು ಬಾಯಿಬಿಟ್ಟು, ಧೈರ್ಯವಾಗಿ ತಮ್ಮ ಬ್ರಹ್ಮಸೂತ್ರಭಾಷ್ಯದ ಪ್ರಾರಂಭದ **ಅಧ್ಯಾಸಭಾಷ್ಯ**ದಲ್ಲಿ ಹೀಗೆ ಹೇಳಿದ್ದಾರೆ:

**ತಮೇತಮ್ ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾಃ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ। ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ।**

ಆತ್ಮಾನಾತ್ಮರ ಪರಸ್ಪರಾಧ್ಯಾಸಕ್ಕೇ ಅವಿದ್ಯಾ ಎಂದು ಹೆಸರು. ಈ ಅವಿದ್ಯೆಯಿಂದಲೇ ಪ್ರಮಾಣಪ್ರಮೇಯವ್ಯವಹಾರಗಳೆಲ್ಲವೂ ನಡೆಯುತ್ತಿವೆ. **ಅವಿದ್ಯೆಯಿಂದಲೇ ಲೌಕಿಕ ವೈದಿಕ ವ್ಯವಹಾರಗಳೂ, ಎಲ್ಲಾ ವಿಧಿಪ್ರತಿಷೇಧ ಮೋಕ್ಷಶಾಸ್ತ್ರಗಳೂ ನಿಂತಿರುತ್ತವೆ.** ಹೀಗೆ ಇಷ್ಟೊಂದು ಧೈರ್ಯವಾಗಿ ಬರೆಯಬೇಕಾದರೆ **ಶ್ರೀಶಂಕರರು ಅದ್ಭುತ ಬ್ರಹ್ಮಜ್ಞಾನಿಗಳಾಗಿರಲೇಬೇಕಲ್ಲವೇ?**

**ಬ್ರಹ್ಮೈವೇದಂ ವಿಶ್ವಮ್; ಆತ್ಮೈವೇದಂ ಸರ್ವಮ್; ಅಹಂ ಬ್ರಹ್ಮಾಸ್ಮಿ; ಮಾಯಾಮಾತ್ರಮಿದಂ ಸರ್ವಮ್** ಎಂಬ ಈ ಭಾಷ್ಯವಾಕ್ಯಗಳನ್ನು ಬ್ರಹ್ಮಾತ್ಮಜ್ಞಾನನಿಷ್ಠರಾಗದಿದ್ದರೆ ಶ್ರೀಶಂಕರರು ಬರೆಯಲು ಆಗುತ್ತಿರಲಿಲ್ಲ; ಅಲ್ಲವೇ? ಪರಮಾರ್ಥವಾಗಿ ಎಲ್ಲವೂ ಬ್ರಹ್ಮವೇ ಎಂದು ತಿಳಿದೂ ಶ್ರೀಶಂಕರರು ವ್ಯಾವಹಾರಿಕ ದೃಷ್ಟಿಯಿಂದಲೇ ಎಲ್ಲಾ ವ್ಯವಹಾರಗಳನ್ನೂ ಆಭಾಸರೂಪದಿಂದ ಮಾಡಿರುತ್ತಾರೆ. **ಇಂಥ ಅದ್ಭುತ ಬ್ರಹ್ಮಜ್ಞಾನಿಪುಂಗವ** ಶಂಕರರಿಗೆ ನಮಸ್ಕಾರ.

# 22. ಅದ್ಭುತ ಗುರುಭಕ್ತರಾಗಿ

ಶ್ರೀಶಂಕರರು ಅದ್ವೈತಜ್ಞಾನವೆಂಬ ಗೌರೀಶಂಕರದ ತುಟ್ಟತುದಿಯಲ್ಲಿದ್ದು ಕೊಂಡು **"ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್"** ಎಂದು ಸಾರಿಸಾರಿ ಹೇಳುತ್ತಿರುವ ಬ್ರಹ್ಮಜ್ಞಾನಿಪುಂಗವರು. **ನ ಬಂಧುರ್ನ ಮಿತ್ರಂ ಗುರುರ್ನೈವ ಶಿಷ್ಯಃ ಚಿದಾನಂದರೂಪಃ ಶಿವೋಽಹಂ ಶಿವೋಽಹಮ್**; ಬಂಧುವೂ ಇಲ್ಲ, ಮಿತ್ರನೂ ಇಲ್ಲ, ಗುರುವೂ ಇಲ್ಲ, ಶಿಷ್ಯನೂ ಇಲ್ಲ; ಚಿದಾನಂದಸ್ವರೂಪನಾದ ಶಿವನೇ ನಾನು, ಶಿವನೇ ನಾನು—ಎಂದು **ನಿರ್ವಾಣಷಟ್ಕ**ದಲ್ಲಿ ಶ್ರೀಶಂಕರರು ಅದ್ವೈತಸ್ವರೂಪಾನುಭವವನ್ನು ಹೇಳಿದ್ದಾರೆ. ಹೌದು, ದಿಟ, ಇದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಮುಮುಕ್ಷುಗಳಿಗಾಗಿ ಶ್ರೀಶಂಕರರು **ಗುರ್ವಷ್ಟಕಂ** ಎಂಬ ಸ್ತೋತ್ರವನ್ನು ರಚಿಸಿ ಅಧ್ಯಾತ್ಮಸಾಧಕರಿಗೆ ಸದ್ಗುರುಮಹಿಮೆಯನ್ನು ತಿಳಿಸಿ ಸ್ವತಃ ತಾವು **ಅದ್ಭುತ ಗುರುಭಕ್ತರೂ** ಆಗಿರುತ್ತಾರೆ.

ಈ **ಗುರ್ವಷ್ಟಕ** ಸ್ತೋತ್ರದಲ್ಲಿ ಎಂಟು ಶ್ಲೋಕಗಳಿರುತ್ತವೆ. ಪ್ರತಿಯೊಂದು ಶ್ಲೋಕದ ನಾಲ್ಕನೆಯ ಪಾದದಲ್ಲಿ **ಗುರೋರಂಘ್ರಿಪದ್ಮೇ ಮನಶ್ಚೇನ್ನ ಲಗ್ನಂ ತತಃ ಕಿಂ? ತತಃ ಕಿಂ? ತತಃ ಕಿಂ? ತತಃ ಕಿಮ್?** ಎಂದು ಹೇಳಿದ್ದಾರೆ. ಮನುಷ್ಯರಿಗೆ ಎಲ್ಲಾ ಸಂಪತ್ತುಗಳೂ ಇದ್ದು, ಗುರುಭಕ್ತಿಯೊಂದಿಲ್ಲದಿದ್ದರೆ ಆ ಸಂಪತ್ತುಗಳಿಂದ ಏನು ಪ್ರಯೋಜನ? ಎಂದಿದ್ದಾರೆ. ಶಂಕರರ **ಗುರ್ವಷ್ಟಕ**ದ ಪ್ರಥಮಶ್ಲೋಕವನ್ನು ನೋಡೋಣ:

**ಶರೀರಂ ಸುರೂಪಂ ತಥಾ ವಾ ಕಲತ್ರಂ**
**ಯಶಶ್ಚಾರು ಚಿತ್ರಂ ಧನಂ ಮೇರುತುಲ್ಯಮ್।**
**ಗುರೋರಂಘ್ರಿಪದ್ಮೇ ಮನಶ್ಚೇನ್ನ ಲಗ್ನಂ**
**ತತಃ ಕಿಂ? ತತಃ ಕಿಂ? ತತಃ ಕಿಂ? ತತಃ ಕಿಮ್?**

ಸುಂದರವಾದ ಶರೀರವಿದೆ, ಯೋಗ್ಯಳಾದ ಪತಿವ್ರತೆಯಾದ ಪತ್ನಿಯೂ ಇದ್ದಾಳೆ, ದೇಶವಿದೇಶಗಳಲ್ಲಿ ಸಾಕಷ್ಟು ಧವಳಕೀರ್ತಿಯೂ ಇದೆ; ಇನ್ನು, ಸಮೃದ್ಧ ವಾಗಿ ಹೊಲಮನೆ ಚಿನ್ನಬೆಳ್ಳಿ, ವಾಹನಗಳು, ಆಳುಕಾಳುಗಳು, ಸೇವಕರುಗಳು ಎಲ್ಲರೂ ಇದ್ದಾರೆ. ತುಂಬಾತುಂಬಾ ಹಣವೂ ಇದೆ; ಆದರೆ, ಅವನಿಗೆ ಸದ್ಗುರುವಿನ ಪಾದಕಮಲಗಳಲ್ಲಿ ಭಕ್ತಿಯೊಂದಿರದಿದ್ದರೆ ಆ ಸುಂದರಶರೀರದಿಂದ ಏನು ಫಲ? ಆ ಪತಿವ್ರತಾಪತ್ನಿಯಿಂದ ಫಲವೇನು? ಆ ಕೀರ್ತಿಯಿಂದ ಪ್ರಯೋಜನವೇನು? ಬೆಟ್ಟದಷ್ಟಿರುವ ಆ ಚಿನ್ನ ಬೆಳ್ಳಿ ವಜ್ರ, ಹಣಗಳಿಂದ ಫಲ ವೇನು? ಎಂದಿದ್ದಾರೆ. ಗುರುಭಕ್ತಿಯಿಂದಲೇ ಎಲ್ಲಾ ಸಂಪತ್ತುಗಳಿಗೂ ಬೆಲೆಯು ಬರುತ್ತದೆ ಎಂದಿರುವ ಶ್ರೀಶಂಕರರು ನಿಜಕ್ಕೂ **ಅದ್ಭುತ ಗುರುಭಕ್ತರಲ್ಲವೇ?**

# 23. ಅದ್ಭುತ ಭಕ್ತಿಸ್ತೋತ್ರಕರ್ತೃಗಳಾಗಿ

ಶ್ರೀಶಂಕರರು ವೇದಾಂತಭಾಷ್ಯಕಾರರಾಗಿ ಬ್ರಹ್ಮಜ್ಞಾನಿಪುಂಗವರಾಗಿ ಮಾತ್ರ ವಲ್ಲದೇ ಭಕ್ತಾಗ್ರಣಿಗಳಾಗಿ ಭಕ್ತಿಪ್ರಧಾನವಾದ ನೂರಾರು ಸ್ತೋತ್ರಗಳನ್ನೂ ರಚಿಸಿರುತ್ತಾರೆ. ಈ ಒಂದೊಂದು ಸ್ತೋತ್ರವೂ ಪಾರಾಯಣಮಾಡುವುದಕ್ಕೂ ಅರ್ಥಾನುಸಂಧಾನಕ್ಕೂ ತುಂಬಾ ಉಪಯುಕ್ತವಾಗಿರುತ್ತವೆ. ಈ ಸ್ತೋತ್ರಗಳನ್ನು ನೋಡಿದಾಗ ಶ್ರೀಶಂಕರರ ಕವಿತಾಚಾತುರ್ಯ, ವಾಗರ್ಥಸಾಹಿತ್ಯ, ವಿದ್ವತ್ತು, ಮಹಾಪಾಂಡಿತ್ಯ, ಶರಣಾಗತಿ, ಭಗವದ್ಭಕ್ತಿ, ಜ್ಞಾನನಿಷ್ಠೆ, ವೈರಾಗ್ಯ, ಇಂದ್ರಿಯ ನಿಗ್ರಹ, ಬ್ರಹ್ಮಚರ್ಯ ಮುಂತಾದ ನೂರಾರು ಆದರ್ಶಸದ್ಗುಣಗಳು ಓದುಗರ ಕಣ್ಮನಗಳ ಮುಂದೆ ಬಂದುನಿಲ್ಲುತ್ತವೆ. ನಾನಿಲ್ಲಿ ಶ್ರೀಶಂಕರರಿಂದ ರಚಿತ ವಾಗಿರುವ ಕೆಲವೇ ಭಕ್ತಿಪ್ರಧಾನಸ್ತೋತ್ರಗಳನ್ನು ಪಟ್ಟಿಹಾಕಿರುತ್ತೇನೆ:

೧. ಗಣೇಶಸ್ತವಃ
೨. ಶಿವಾಪರಾಧಕ್ಷಮಾಪಣಸ್ತೋತ್ರಂ
೩. ವೇದಸಾರಶಿವಸ್ತೋತ್ರಂ
೪. ಶಿವಪಂಚಾಕ್ಷರಸ್ತೋತ್ರಂ
೫. ಶಿವನಾಮಾವಲ್ಯಷ್ಟಕಂ
೬. ಶಿವಮಾನಸಪೂಜಾ
೭. ವಿಷ್ಣುಷಟ್ಪದೀ
೮. ಲಕ್ಷ್ಮೀನೃಸಿಂಹಸ್ತೋತ್ರಮ್
೯. ಶ್ರೀರಾಮಭುಜಂಗಪ್ರಯಾತಂ
೧೦. ಶ್ರೀಹನುಮತ್ ಪಂಚರತ್ನಂ
೧೧. ಗೌರೀದಶಕಂ
೧೨. ತ್ರಿಪುರಸುಂದರೀ ಅಷ್ಟಕಂ
೧೩. ದೇವ್ಯಪರಾಧಕ್ಷಮಾಪಣಂ
೧೪. ಅನ್ನಪೂರ್ಣಾಷ್ಟಕಂ
೧೫. ಸರಸ್ವತೀಸ್ತೋತ್ರಂ
೧೬. ಗಂಗಾ ಸ್ತೋತ್ರಂ
೧೭. ಗಣೇಶಭುಜಂಗಸ್ತೋತ್ರಂ
೧೮. ಗುರುಪಾದುಕಾಸ್ತೋತ್ರಂ
೧೯. ಶ್ರೀಶಾರದಾಭುಜಂಗಪ್ರಯಾತಂ
೨೦. ಶ್ರೀಲಲಿತಾಪಂಚರತ್ನಂ
೨೧. ಶ್ರೀಸುಬ್ರಹ್ಮಣ್ಯಭುಜಂಗಂ
೨೨. ವಿಶ್ವನಾಥಾಷ್ಟಕಂ
೨೩. ಅರ್ಧನಾರೀಶ್ವರಸ್ತೋತ್ರಂ
೨೪. ಕಾಲಭೈರವಾಷ್ಟಕಂ
೨೫. ಕಾಮಾಕ್ಷೀಸ್ತೋತ್ರಂ
೨೬. ಮೀನಾಕ್ಷೀಸ್ತೋತ್ರಂ
೨೭. ಲಕ್ಷ್ಮೀನೃಸಿಂಹಪಂಚರತ್ನಂ
೨೮. ಅಚ್ಯುತಾಷ್ಟಕಂ
೨೯. ಜಗನ್ನಾಥಾಷ್ಟಕಂ
೩೦. ಲಿಂಗಾಷ್ಟಕಂ
೩೧. ಸೌಂದರ್ಯಲಹರೀ
೩೨. ಕೃಷ್ಣಾಷ್ಟಕಂ
೩೩. ನಿರ್ಗುಣಮಾನಸಪೂಜಾ
೩೪. ವಿನಾಯಕಾಷ್ಟಕಂ

# 24. ಅದ್ಭುತ ಹಿತೋಪದೇಶಕರಾಗಿ

ಶ್ರೀಶಂಕರರು ಒಣವೇದಾಂತಿಗಳಲ್ಲ, ಬರೀ ಭಾಷ್ಯಕಾರರೂ ಅಲ್ಲ; ಮತ್ತೇನೆಂದರೆ, ಸಂದರ್ಭವನ್ನು ನೋಡಿಕೊಂಡು ಮುಮುಕ್ಷುಸಾಧಕರಿಗೆ ಅಲ್ಲಲ್ಲಿ ಅತ್ಯಂತ ಮುಖ್ಯವಾದ ಸಂದೇಶಗಳನ್ನು ತಿಳಿಸಿರುತ್ತಾರೆ. ಅಧ್ಯಾತ್ಮಮುಮುಕ್ಷುಗಳಿಗೆ ಮನಮುಟ್ಟುವಂತೆ ಹಿತೋಪದೇಶಗಳನ್ನೂ ತಮ್ಮ ಭಾಷ್ಯಗ್ರಂಥಗಳಲ್ಲಿ ತಿಳಿಸಿದ್ದಾರೆ. ಉದಾಹರಣೆಗೆ: **ಸರ್ವೇಂದ್ರಿಯಾಣಾಂ ಜರಯಂತಿ ತೇಜಃ** (೧-೨೬) ಎಂಬ ಕಾಠಕೋಪನಿಷತ್ ಮಂತ್ರಕ್ಕೆ ಹೀಗೆ ಭಾಷ್ಯವನ್ನು ಬರೆದಿದ್ದಾರೆ:

**ಅಪ್ಸರಃಪ್ರಭೃತಯೋ ಭೋಗಾಃ ಸರ್ವೇಂದ್ರಿಯಾಣಾಂ ತೇಜಃ ಜರಯಂತಿ, ಅಪಕ್ಷಪಯಂತಿ। ಅನರ್ಥಾಯೈವ ಏತೇ ಭೋಗಾಃ, ಧರ್ಮವೀರ್ಯಪ್ರಜ್ಞಾತೇಜೋಯಶಃಪ್ರಭೃತೀನಾಂ ಕ್ಷಪಯಿತೃತ್ವಾತ್।**

ಸಕಲವಿಷಯಭೋಗಗಳೂ ಅನರ್ಥಕಾರಿಗಳೇ ಆಗಿರುತ್ತವೆ; ಎಚ್ಚರಿಕೆ!

ಇನ್ನೊಂದು ಉದಾಹರಣೆ, ಭಗವದ್ಗೀತಾ ಭಾಷ್ಯದಿಂದ: **ಯೇ ಹಿ ಸಂಸ್ಪರ್ಶಜಾ ಭೋಗಾಃ ದುಃಖಯೋನಯ ಏವ ತೇ** (೫-೨೨) ಎಂಬ ಈ ಶ್ಲೋಕಕ್ಕೆ ಭಾಷ್ಯವನ್ನು ಬರೆಯುವಾಗ, **ಭೋಗಾಃ ದುಃಖಯೋನಯ ಏವ, ಅವಿದ್ಯಾಕೃತತ್ವಾತ್। ದೃಶ್ಯಂತೇ ಹಿ ಆಧ್ಯಾತ್ಮಿಕಾದೀನಿ ದುಃಖಾನಿ ಭೋಗನಿಮಿತ್ತಾನ್ಯೇವ। ಯಥಾ ಇಹ ಲೋಕೇ ತಥಾ ಪರಲೋಕೇಽಪಿ ಇತಿ ಗಮ್ಯತೇ, ಏವಶಬ್ದಾತ್। ನ ಇಹ ಸಂಸಾರೇ ಸುಖಸ್ಯ ಗಂಧಮಾತ್ರಮಪ್ಯಸ್ತಿ, ಇತಿ ಬುದ್ಧ್ವಾ ವಿಷಯಮೃಗತೃಷ್ಣಿಕಾಯಾಃ ಇಂದ್ರಿಯಾಣಿ ನಿವರ್ತಯೇತ್** ಎಂದು ಮುಮುಕ್ಷುಸಂನ್ಯಾಸಿಗಳಿಗೆ ಹಿತೋಪದೇಶವನ್ನು ಮಾಡಿರುತ್ತಾರೆ.

ಹೀಗೆಯೇ, ಇನ್ನೂ ಒಂದು ಉದಾಹರಣೆ: ಕೇನೋಪನಿಷದ್ಭಾಷ್ಯದಿಂದ: **ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಮ್** (೨-೪) ಎಂಬ ಮಂತ್ರಕ್ಕೆ ಭಾಷ್ಯವನ್ನು ಬರೆಯುವಾಗ, **ಆತ್ಮನಾ ಸ್ವೇನರೂಪೇಣ ವಿಂದತೇ ಲಭತೇ ವೀರ್ಯಂ ಬಲಂ ಸಾಮರ್ಥ್ಯಂ। ಧನ ಸಹಾಯ ಮಂತ್ರ ಔಷಧ ಜಪ ತಪೋಯೋಗಕೃತಂ ವೀರ್ಯಂ ಮೃತ್ಯುಂ ನ ಶಕ್ನೋತಿ ಅಭಿಭವಿತುಂ, ಅವಿದ್ಯಾಕೃತತ್ವಾತ್; ಆತ್ಮವಿದ್ಯಾಕೃತಂ ತು ವೀರ್ಯಂ ಮೃತ್ಯುಮಭಿಭವಿತುಂ ಶಕ್ನೋತಿ;** ಆತ್ಮವಿದ್ಯೆಯೊಂದರಿಂದ ಮಾತ್ರವೇ ಮುಮುಕ್ಷುಗಳು ಮೃತ್ಯುಭಯವನ್ನು ಗೆಲ್ಲಬಹುದೇ ಹೊರತು ಉಳಿದ ಯಾವ ಬಲಗಳಿಂದಲೂ ಸಾಧ್ಯವಿಲ್ಲ. ಆದ್ದರಿಂದ ಎಲೈ ಮುಮುಕ್ಷುಸಾಧಕರೇ, ನೀವುಗಳು ಆತ್ಮವಿದ್ಯಾವೀರ್ಯವನ್ನೇ ಸಂಪಾದಿಸಿಕೊಂಡು ಮೃತ್ಯುವನ್ನು ಗೆಲ್ಲಿರಿ—ಎಂದು ಉಪದೇಶವನ್ನು ಮಾಡುತ್ತಿರುವ ಶಂಕರರು ನಿಜವಾಗಿಯೂ **ಅದ್ಭುತ ಹಿತೋಪದೇಶಕರಲ್ಲವೇ?**

# 25. ಅದ್ಭುತ ಆಚಾರ್ಯರಾಗಿ

ಸಾಮಾನ್ಯವಾಗಿ ಗುರುಗಳನ್ನು, ವೈದಿಕವಿದ್ವಾಂಸರನ್ನು, ಅನುಷ್ಠಾನತತ್ಪರರಾದ ಮಹಾತ್ಮರನ್ನು ಲೋಕದಲ್ಲಿ **ಆಚಾರ್ಯರು** ಎಂದು ಕರೆಯುತ್ತಾರೆ. ಆಚಾರವಂತರಾದ, ಸದಾಚಾರಸಂಪನ್ನರಾದ ಅನುಷ್ಠಾನತತ್ಪರರೂ ಆದ ವೈದಿಕ ಪಂಡಿತರುಗಳಿಗೆ **ಆಚಾರ್ಯರು** ಎಂದು ಹೆಸರು.

**ಆಚಿನೋತಿ ಹಿ ಶಾಸ್ತ್ರಾಣಿ ಆಚಾರೇ ಸ್ಥಾಪಯತ್ಯಪಿ।**
**ಸ್ವಯಮಾಚರತೇ ಯಸ್ಮಾತ್ ಆಚಾರ್ಯಸ್ತೇನ ಸ ಸ್ಮೃತಃ॥**

*ಶಾಸ್ತ್ರಾರ್ಥವನ್ನೆಲ್ಲ ಚೆನ್ನಾಗಿ ಸಂಗ್ರಹಿಸಿ, ಆಚಾರವಿಚಾರಗಳನ್ನು ಜನಗಳಿಗೆ ಬೋಧಿಸುತ್ತಾ, ತಾನೂ ಸದಾಚಾರಸಂಪನ್ನನಾಗಿದ್ದರೆ ಅಂಥವನೇ ಆಚಾರ್ಯನು ಎನಿಸುತ್ತಾನೆ.*

ಶ್ರೀಶಂಕರರು ಶ್ರೀಶಂಕರಾಚಾರ್ಯರು, ಶ್ರೀಭಗವತ್ಪಾದಾಚಾರ್ಯರು ಎಂದಾಗಬೇಕಾದರೆ ಅವರು ಸದಾಚಾರಸಂಪನ್ನರಾಗಿರಲೇಬೇಕಲ್ಲವೇ? ಶ್ರೀಶಂಕರರು ತಮ್ಮ ಬ್ರಹ್ಮಸೂತ್ರಭಾಷ್ಯ ೩-೧-೧೦ರಲ್ಲಿ **ನ ಹಿ ಸದಾಚಾರಹೀನಃ ಕಶ್ಚಿತ್ ಶಾಸ್ತ್ರೀಯೇಷು ಕರ್ಮಸು ಅಧಿಕೃತಃ ಸ್ಯಾತ್। ಆಚಾರಹೀನಂ ನ ಪುನಂತಿ ವೇದಾಃ ಇತ್ಯಾದಿಸ್ಮೃತಿಭ್ಯಃ;** ಸದಾಚಾರಹೀನನಾದವನು ಶಾಸ್ತ್ರೀಯ ಕರ್ಮಗಳಲ್ಲಿ ಅಧಿಕೃತನಾಗುವುದಿಲ್ಲ; ಏಕೆಂದರೆ ಆಚಾರಹೀನನನ್ನು ವೇದಗಳು ಪವಿತ್ರಗೊಳಿಸುವುದಿಲ್ಲ ಎಂದು ಸ್ಮೃತಿಗಳು ಹೇಳುತ್ತಿರುವುದರಿಂದ ಎಂದಿದ್ದಾರೆ.

ಶ್ರೀಶಂಕರರು ನೈಷ್ಠಿಕಬ್ರಹ್ಮಚಾರಿಗಳಾಗಿ, ಆದರ್ಶಬ್ರಹ್ಮಚಾರಿಗಳಾಗಿ, ಆದರ್ಶಯತಿಪುಂಗವರಾಗಿ, ಕೇವಲಭಿಕ್ಷಾನ್ನಮಾತ್ರದಿಂದ ಬದುಕುವವರಾಗಿ, ವೇದಾಂತವಿಜ್ಞಾನಸುನಿಶ್ಚಿತಾರ್ಥರೂ ಆದ ಮಹಾತ್ಮರು. ಹೀಗಾಗಿ ಶ್ರೀಶಂಕರರನ್ನು ನಾವುಗಳು **ಶಂಕರಾಚಾರ್ಯರು** ಎಂದು ಕರೆಯುತ್ತೇವೆ. ಸದಾಚಾರಸಂಪನ್ನರಾದ ಸದ್ಗುರುಗಳೂ ಆದ ಆಚಾರ್ಯರಿಂದ ಉಪದೇಶಿಸಲ್ಪಟ್ಟ ಉಪದೇಶಗಳು ಮಾತ್ರವೇ ಫಲಕಾರಿಗಳಾಗುತ್ತವೆ. ದುರಾಚಾರಿಗಳ ಸಂದೇಶಗಳಿಂದ ಯಾರಿಗೂ ಬ್ರಹ್ಮಜ್ಞಾನವು ಖಂಡಿತಾ ಉಂಟಾಗಲಾರದು. ಶ್ರೀಶಂಕರಾಚಾರ್ಯರವರ ಪುಣ್ಯನಾಮವೇ ಪಾವನವಾಗಿರುತ್ತದೆ. ಹೀಗಾಗಿ ಶ್ರೀಶಂಕರರ ಉಪದೇಶಾಮೃತಗಳು ಮುಮುಕ್ಷುಸಾಧಕರುಗಳ ಹೃದಯವನ್ನು ಪ್ರವೇಶಿಸುತ್ತವೆ; ಶ್ರೀಶಂಕರಾಚಾರ್ಯರವರು ಬರೆದಿರುವ ಪ್ರಸ್ಥಾನತ್ರಯಭಾಷ್ಯಗ್ರಂಥಗಳಂತೂ ಮುಮುಕ್ಷುಜಿಜ್ಞಾಸುಗಳಿಗೆ ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ, ಅಮೃತದಂತಿರುತ್ತದೆ. ಹೀಗಾಗಿ ಶ್ರೀಶಂಕರರು **ಅದ್ಭುತ ಆಚಾರ್ಯರಾಗಿರುತ್ತಾರೆ.**

# 26. ಅದ್ಭುತ ಜಗದ್ಗುರುಗಳಾಗಿ

ಗುರುಗಳನ್ನು ಗುರು, ಸದ್ಗುರು, ಶ್ರೀಗುರು, ಜಗದ್ಗುರು—ಎಂದೆಲ್ಲ ಕರೆಯುತ್ತೇವೆ. ಶಿಷ್ಯರ ಅಜ್ಞಾನಾಂಧಕಾರವನ್ನು ದೂರಮಾಡುವ ಕಾರುಣ್ಯಸಾಗರನಾದ ಮಹಾತ್ಮನೇ **ಗುರು**ವೆನಿಸುತ್ತಾನೆ.

**ಗುಕಾರಶ್ಚಾಂಧಕಾರಃ ಸ್ಯಾತ್ ರುಕಾರಸ್ತನ್ನಿರೋಧಕಃ।**
**ಅಂಧಕಾರನಿರೋಧಿತ್ವಾತ್ ಗುರುರಿತ್ಯಭಿಧೀಯತೇ॥**

**ಗು** ಎಂದರೆ ಅಜ್ಞಾನಾಂಧಕಾರ, **ರು** ಎಂದರೆ ನಾಶಮಾಡುವವನು; ಅಜ್ಞಾನಾಂಧಕಾರವನ್ನು ದೂರಮಾಡುವ ಮಹಾತ್ಮನೇ **ಗುರು** ಎನಿಸುತ್ತಾನೆ.

ಶ್ರೀಶಂಕರರು ಬರೀ ಗುರುಗಳಲ್ಲ ; ಇವರು ಅನ್ವರ್ಥ ಆದರ್ಶ **ಅದ್ಭುತ ಜಗದ್ಗುರುಗಳೂ** ಆಗಿರುತ್ತಾರೆ. ಜಗತ್ತಿಗೇ ಗುರುವಾದವರನ್ನು ನಾವುಗಳು **ಜಗದ್ಗುರು** ಎಂದು ಕರೆಯುತ್ತೇವೆ. ಸಕಲ ಮಾನವರ ಅಜ್ಞಾನವೆಂಬ ಕತ್ತಲೆಯನ್ನು ಆತ್ಮಜ್ಞಾನೋಪದೇಶದಿಂದ ದೂರಮಾಡಿರುವ ಶ್ರೀಶಂಕರರು **ಅದ್ಭುತ ಜಗದ್ಗುರುಗಳೂ** ಆಗಿರುತ್ತಾರೆ. ಅಜ್ಞಾನದಿಂದಲೇ ಬಂಧ, ಜ್ಞಾನದಿಂದಲೇ ಮೋಕ್ಷ; ಯಾರು ಬೇಕಾದರೂ, ಎಲ್ಲರೂ ಆತ್ಮಜ್ಞಾನವನ್ನು ಪಡೆದು ಅಜ್ಞಾನಾಂಧಕಾರವನ್ನು ಕಳೆದುಕೊಂಡು ಮುಕ್ತರಾಗಬಹುದು ಎಂಬ ವೇದಾಂತಸಂದೇಶಗಳನ್ನು ಶ್ರೀಶಂಕರರು ತಮ್ಮ ಭಾಷ್ಯಗಳಲ್ಲಿ ಅನೇಕ ಕಡೆಗಳಲ್ಲಿ ತಿಳಿಸಿರುತ್ತಾರೆ. **ವರ್ಣ, ಆಶ್ರಮ, ಧರ್ಮ, ಮತ, ಪಂಥ, ಲಿಂಗ, ಪಂಗಡ, ಅಂತಸ್ತುಗಳಿಲ್ಲದೇ ಸಕಲ ಮಾನವರಿಗೂ ಬ್ರಹ್ಮಾತ್ಮಜ್ಞಾನವನ್ನು ಪ್ರೀತಿಯಿಂದ ಉಪದೇಶಿಸಿರುವ** ಶ್ರೀಶಂಕರರು ನಿಜಕ್ಕೂ **ಅದ್ಭುತ ಜಗದ್ಗುರು**ಗಳಾಗಿದ್ದಾರೆ.

**ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ।**
**ಗುರವೋ ವಿರಲಾಃ ಸಂತಿ ಶಿಷ್ಯಹೃತ್ತಾಪಹಾರಕಾಃ॥**

*ಶಿಷ್ಯರುಗಳ ಸಂಪತ್ತನ್ನು ಕೊಳ್ಳೆಹೊಡೆಯುವ ಗುರುಗಳು ಬಹಳ ಇದ್ದಾರೆ. ಆದರೆ ಶಿಷ್ಯರ ಮನಸ್ತಾಪವನ್ನು ಅಂದರೆ ಅವಿದ್ಯಾ ಅಂಧಕಾರವನ್ನು ದೂರಮಾಡುವಂಥ ಸದ್ಗುರುಗಳುಮಾತ್ರ ಅತ್ಯಂತ ವಿರಳವಾಗಿರುತ್ತಾರೆ. ಇವರೇ **ಅದ್ಭುತ ಶಂಕರರು.***

ಶ್ರೀಶಂಕರರು ತಮ್ಮ ಶಿಷ್ಯರಿಂದ, ಭಕ್ತರುಗಳಿಂದ ಅಥವಾ ಜನಗಳಿಂದ ಏನೇನನ್ನೂ ನಿರೀಕ್ಷಿಸದೇ ಲೋಕಕಲ್ಯಾಣೈಕದೃಷ್ಟಿಯಿಂದ ಎಲ್ಲರಿಗೂ ಅರ್ಥವಾಗುವಂತೆ ಆತ್ಮಜ್ಞಾನವನ್ನು ಉಪದೇಶಿಸಿರುತ್ತಾರೆ. ಮಂದ, ಮಧ್ಯಮ, ಉತ್ತಮಾಧಿಕಾರಿಗಳಿಗೆ ತಕ್ಕಂಥ ಸಾಧನಗಳನ್ನು ಪ್ರೇಮದಿಂದ ಉಪದೇಶಿಸಿರುವ ಶ್ರೀಶಂಕರರು ನಿಜಕ್ಕೂ **ಅದ್ಭುತ ಜಗದ್ಗುರುಗಳಲ್ಲವೇ?**

# 27. ಅದ್ಭುತಶಂಕರಾಷ್ಟಕಮ್

ಪ್ರಣಮ್ಯ ಶ್ರೀಹರಿಂ ಪೂರ್ವಂ ಸದಾಶಿವಮನಂತರಮ್ ।
ಸದ್ಗುರುಂ ಚ ನಮಸ್ಕೃತ್ಯ **ಹ್ಯದ್ಭುತಂ ಲೋಕಶಂಕರಮ್** ॥
ಪಠೇತ್ ಪ್ರತಿದಿನಂ ಸ್ತೋತ್ರಂ **ಶಂಕರಸ್ಯಾದ್ಭುತಸ್ಯ** ಹಿ ।
ಜ್ಞಾನವೈರಾಗ್ಯಸಿದ್ಧ್ಯರ್ಥಂ ಸರ್ವಸಂಪತ್‌ಕರಾಯ ಚ ॥

ಭಾಷ್ಯಕಾರಂ ಭಾಗ್ಯವಂತಂ ಭಕ್ತಾನುಗ್ರಹಕಾರಕಮ್ ।
ಜ್ಞಾನವೈರಾಗ್ಯಸಂಪನ್ನಂ **ನಮಾಮ್ಯದ್ಭುತಶಂಕರಮ್** ॥ ೧ ॥

ರಾಷ್ಟ್ರಭಕ್ತಂ ಮಾತೃಭಕ್ತಂ ದೈವಭಕ್ತಂ ಕೃಪಾನಿಧಿಮ್ ।
ಜ್ಞಾನವೈರಾಗ್ಯದಾತಾರಂ **ನಮಾಮ್ಯದ್ಭುತಶಂಕರಮ್** ॥ ೨ ॥

ವಾದಿರಾಜಂ ಯೋಗಿರಾಜಂ ತ್ಯಾಗಿರಾಜಮಕಲ್ಮಷಮ್ ।
ಭಕ್ತಾನಾಂ ಭಾಗ್ಯದಾತಾರಂ **ನಮಾಮ್ಯದ್ಭುತಶಂಕರಮ್** ॥ ೩ ॥

ಜ್ಞಾನನಿಷ್ಠಂ ತಪೋನಿಷ್ಠಂ ಧರ್ಮನಿಷ್ಠಂ ತಪಸ್ವಿನಮ್ ।
ಬ್ರಹ್ಮಾತ್ಮಜ್ಞಾನಸಂಪನ್ನಂ **ನಮಾಮ್ಯದ್ಭುತಶಂಕರಮ್** ॥ ೪ ॥

ಗೀತಾಭಾಷ್ಯಕೃತಂ ಧೀರಂ ಸೂತ್ರಭಾಷ್ಯಕೃತಂ ಪರಮ್ ।
ವೇದಾಂತಭಾಷ್ಯಕಾರಂ ಚ **ನಮಾಮ್ಯದ್ಭುತಶಂಕರಮ್** ॥ ೫ ॥

ಕರ್ಮೋಪಾಸನಮರ್ಮಜ್ಞಂ ಬ್ರಹ್ಮವಿದ್ಯಾಪರಂ ಯತಿಮ್ ।
ಜೀವನ್ಮುಕ್ತಂ ಬ್ರಹ್ಮನಿಷ್ಠಂ **ನಮಾಮ್ಯದ್ಭುತಶಂಕರಮ್** ॥ ೬ ॥

ಸರ್ವಾತ್ಮಭೂತಂ ಸರ್ವಜ್ಞಂ ಬ್ರಹ್ಮವಿದ್ಯೋಪದೇಶಕಮ್ ।
ಜಗದ್ಗುರುಂ ಮಹಾಪ್ರಾಜ್ಞಂ **ನಮಾಮ್ಯದ್ಭುತಶಂಕರಮ್** ॥ ೭ ॥

ಗುರುಭಕ್ತಂ ಯಶೋವಂತಂ ಗುರುತತ್ತ್ವೋಪದೇಶಕಮ್ ।
ಕಾರುಣ್ಯಸಾಗರಂ ಶಾಂತಂ **ನಮಾಮ್ಯದ್ಭುತಶಂಕರಮ್** ॥ ೮ ॥

ಯಃ ಪಠೇತ್ ಪ್ರತ್ಯಹಂ ಭಕ್ತ್ಯಾ **ಶಂಕರಸ್ಯಾದ್ಭುತಸ್ಯ** ವೈ ।
ಸರ್ವಸಂಪತ್ಕರಂ ಸ್ತೋತ್ರಂ ಹ್ಯಷ್ಟಕಂ ಪಾಪನಾಶಕಮ್ ॥

ಆಯುರಾರೋಗ್ಯಮೈಶ್ವರ್ಯಂ ಜ್ಞಾನಂ ವೈರಾಗ್ಯಮೇವ ಚ ।
ಬ್ರಹ್ಮಜ್ಞಾನಂ ತಥಾ ಮುಕ್ತಿಂ ಲಭತೇ ನಾತ್ರ ಸಂಶಯಃ ॥

ಮಂಗಳಂ ಗುರುದೇವಾಯ **ಶಂಕರಾಯಾದ್ಭುತಾಯ** ಚ ।
ಮಂಗಳಂ ಬ್ರಹ್ಮನಿಷ್ಠಾಯ ತಪೋನಿಷ್ಠಾಯ ಮಂಗಳಮ್ ॥

**॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

# 28. ಅದ್ಭುತ ಏಕತಾಸಮತಾವಾದಿಗಳಾಗಿ

ಶ್ರೀಶಂಕರರು ವೇದಾಂತಗಳಿಗೆ ಭಾಷ್ಯಗಳನ್ನು ಬರೆದು, ಅಷ್ಟರಿಂದ ಧನ್ಯತೆಯನ್ನು ಪಡೆದುಕೊಂಡು, ಮೌನದಿಂದ ಒಂದು ಕಡೆ ಸುಮ್ಮನೆ ಕೂತುಕೊಳ್ಳಲಿಲ್ಲ. ಭಾರತದೇಶದ ಪೂರ್ವದಿಂದ ಪಶ್ಚಿಮದವರೆಗೂ, ದಕ್ಷಿಣದ ಮೂಲೆಯಿಂದ ಉತ್ತರದ ಅಂಚಿನವರೆಗೂ ಪಾದಚಾರಿಗಳಾಗಿ ಸಂಚರಿಸಿ ಭಾರತರಾಷ್ಟ್ರದ ಏಕತ್ವವನ್ನು ಪ್ರಚಾರಮಾಡಿ, ಸಮತ್ವವನ್ನು ಸ್ಥಾಪನೆಮಾಡಿದ ಸಮಾಜಸುಧಾರಕರೂ ಹೌದು. ಕ್ರಿಸ್ತಶಕ ಎಂಟನೆಯ ಶತಮಾನದ ಮಾತುಗಳಿವು. ಆಗ, ಅಂದರೆ ಹದಿಮೂರು ಶತಮಾನಗಳ ಹಿಂದೆ, ಈಗಿನಷ್ಟು ಅಂದರೆ ಇಪ್ಪತ್ತೊಂದನೆಯ ಶತಮಾನದ ತಂತ್ರಜ್ಞಾನವು ಯಾವುದೂ ಇರಲಿಲ್ಲ. ಕೇವಲ ಕಾಲುನಡಿಗೆಯಿಂದಲೇ ಭಾರತದ ಉದ್ದಗಲಕ್ಕೂ ಸಂಚರಿಸಿ ಸನಾತನಧರ್ಮವನ್ನೂ ವೇದಾಂತಸಂದೇಶಗಳನ್ನೂ ಜನರಲ್ಲಿ ಪ್ರಚಾರಮಾಡಿದ ಧೀರರು ಶ್ರೀಶಂಕರರು!

ಭಾರತದೇಶದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು **ಆಮ್ನಾಯಪೀಠಗಳನ್ನು** ಸ್ಥಾಪಿಸಿ, ಅವುಗಳಲ್ಲಿ ತಮ್ಮ ನಾಲ್ಕು ಶಿಷ್ಯರುಗಳನ್ನು ಪ್ರತಿಷ್ಠಾಪಿಸಿ ಶ್ರೀಶಂಕರರು ಸನಾತನ ಹಿಂದೂಧರ್ಮದ ಪುನರುದ್ಧಾರವನ್ನು ಮಾಡಿರುತ್ತಾರೆ.

**ಪೂರ್ವದಲ್ಲಿ** ಪುರೀನಗರಿಯಲ್ಲಿ **ಗೋವರ್ಧನಪೀಠ**ವನ್ನು ಸ್ಥಾಪಿಸಿ, ಅಲ್ಲಿಗೆ **ಶ್ರೀಹಸ್ತಾಮಲಕಾಚಾರ್ಯರನ್ನು** ಪ್ರಥಮ ಪೀಠಾಧಿಪತಿಗಳನ್ನಾಗಿ ನೇಮಿಸಿದರು. ಆ ಪೀಠಕ್ಕೆ ಋಗ್ವೇದದ **'ಪ್ರಜ್ಞಾನಂ ಬ್ರಹ್ಮ'** ಎಂಬ ಮಹಾವಾಕ್ಯದ ಉಪದೇಶವನ್ನೂ ಮಾಡಿದ್ದಾರೆ.

**ದಕ್ಷಿಣದಲ್ಲಿ** ಶೃಂಗೇರಿಕ್ಷೇತ್ರದಲ್ಲಿ **ದಕ್ಷಿಣಾಮ್ನಾಯ ಶ್ರೀಶಾರದಾಪೀಠ**ವನ್ನು ಸ್ಥಾಪಿಸಿ ಅಲ್ಲಿಗೆ ತಮ್ಮ ಶಿಷ್ಯರಾದ **ಶ್ರೀಸುರೇಶ್ವರಾಚಾರ್ಯರನ್ನು** ಪ್ರಥಮ ಪೀಠಾಧಿಕಾರಿಗಳನ್ನಾಗಿ ನೇಮಿಸಿದರು. ಯಜುರ್ವೇದದ **'ಅಹಂ ಬ್ರಹ್ಮಾಸ್ಮಿ'** ಎಂಬ ಮಹಾವಾಕ್ಯವನ್ನು ಇಲ್ಲಿಗೆ ಉಪದೇಶಿಸಿರುತ್ತಾರೆ.

**ಪಶ್ಚಿಮದಲ್ಲಿ** ದ್ವಾರಕಾನಗರದಲ್ಲಿ **ಕಾಳಿಕಾಮಠ**ವನ್ನು ಸ್ಥಾಪಿಸಿ, ಅಲ್ಲಿಗೆ ತಮ್ಮ ಶಿಷ್ಯರಾದ **ಪದ್ಮಪಾದಾಚಾರ್ಯರನ್ನು** ಪ್ರಥಮ ಪೀಠಾಧಿಪತಿಗಳನ್ನಾಗಿ ನೇಮಕ ಮಾಡಿರುತ್ತಾರೆ. ಸಾಮವೇದದ **'ತತ್ತ್ವಮಸಿ'** ಮಹಾವಾಕ್ಯವನ್ನು ಆ ಮಠಕ್ಕೆ ಅನುಗ್ರಹಿಸಿರುತ್ತಾರೆ.

**ಉತ್ತರದಲ್ಲಿ** ಬದರಿಯಲ್ಲಿ **ಜ್ಯೋತಿರ್ಮಠ**ವನ್ನು ಸ್ಥಾಪಿಸಿ, ಅಲ್ಲಿಗೆ **ತೋಟಕಾಚಾರ್ಯರನ್ನು** ನೇಮಿಸಿರುತ್ತಾರೆ. ಅಥರ್ವವೇದದ **'ಅಯಮಾತ್ಮಾ ಬ್ರಹ್ಮ'** ಎಂಬ ಮಹಾವಾಕ್ಯವನ್ನು ಇಲ್ಲಿ ಅನುಗ್ರಹಿಸಿರುತ್ತಾರೆ. ಹೀಗೆ ಭಾರತದ ಏಕತ್ವವನ್ನು ಸಾಧಿಸಿರುವ ಶಂಕರರು **ಅದ್ಭುತ ಏಕತಾಸಮತಾವಾದಿಗಳಲ್ಲವೇ?**

# 29. ಅದ್ಭುತ ಅಸಂಸಾರಿಗಳಾಗಿ

ಶ್ರೀಶಂಕರರು ಸ್ವತಃ ಬ್ರಹ್ಮಚಾರಿಗಳೂ ಬ್ರಹ್ಮನಿಷ್ಠರೂ ಆಗಿ ಅಸಂಸಾರಿ ಬ್ರಹ್ಮವೇ ಆಗಿದ್ದಾರೆ ಎಂದು ಅವರ ವಾಕ್ಯಗಳಿಂದಲೇ ನಮಗೆ ತಿಳಿಯುತ್ತದೆ. ಕೇವಲ ಬ್ರಹ್ಮಜ್ಞಾನಮಾತ್ರದಿಂದ ಸಂಸಾರಿತ್ವಭ್ರಾಂತಿಯು ತೊಲಗಲಾರದೆಂದೂ, ಭ್ರಾಂತಿಯು ತೊಲಗಬೇಕಾದರೆ ಜ್ಞಾನವಾದಮೇಲೆ ಏನಾದರೊಂದು ಕರ್ಮವನ್ನೋ, ಜಪವನ್ನೋ, ಉಪಾಸನೆಯನ್ನೋ ಮಾಡಬೇಕೆಂದೂ ಪೂರ್ವಪಕ್ಷಿಯು ಅಭಿಪ್ರಾಯಪಡುತ್ತಾನೆ. ಇದಕ್ಕೆ ಶ್ರೀಶಂಕರರು ಹೀಗೆ ಉತ್ತರಿಸಿದ್ದಾರೆ:

**ನಾವಗತಬ್ರಹ್ಮಾತ್ಮಭಾವಸ್ಯ ಯಥಾಪೂರ್ವಂ ಸಂಸಾರಿತ್ವಂ ಶಕ್ಯಂ ದರ್ಶಯಿತುಮ್, ವೇದಪ್ರಮಾಣಜನಿತಬ್ರಹ್ಮಾತ್ಮತಾವಿರೋಧಾತ್ ।**

ಬ್ರ. ಸೂ. ಭಾ. ೧-೧-೪

*ಬ್ರಹ್ಮಾತ್ಮಭಾವವನ್ನು ತಿಳಿದವನಿಗೆ ಹಿಂದಿನಂತೆಯೇ ಸಂಸಾರಿತ್ವವು ಉಂಟು ಎಂದು ಹೇಳುವುದಕ್ಕಾಗಲೀ ಅಥವಾ ತೋರಿಸುವುದಕ್ಕಾಗಲೀ ಸಾಧ್ಯವಿಲ್ಲ. ಏಕೆಂದರೆ ವೇದಾಂತಪ್ರಮಾಣದಿಂದ ಉಂಟಾಗಿರುವ ಬ್ರಹ್ಮಾತ್ಮತ್ವಕ್ಕೆ ಪುನಃ ಸಂಸಾರಿತ್ವವೆಂಬುದು ವಿರುದ್ಧವಾಗಿರುತ್ತದೆ.*

ಈ ಮಾತನ್ನು ಶ್ರೀಶಂಕರರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಬರೆದಿದ್ದಾರೆ. ಬ್ರಹ್ಮಜ್ಞಾನಿಗೆ ಸಂಸಾರವು ಉಂಟು ಎಂದು ಊಹಿಸಲೂ ಸಾಧ್ಯವೇ ಇಲ್ಲ, ಅಥವಾ ಸಂಸಾರಿತ್ವವನ್ನು ಬ್ರಹ್ಮಜ್ಞಾನಿಗೆ ತೋರಿಸಲೂ ಸಾಧ್ಯವಿಲ್ಲ ಎಂದಿದ್ದಾರೆ. **ಇದು ಶ್ರೀಶಂಕರರ ಸ್ವಾನುಭವದ ಮಾತೇ ಹೊರತು ಅವರಿವರ ಮಾತುಗಳಲ್ಲ.** ಹೊಟ್ಟೆ ತುಂಬಿದವನಿಗೆ ಹಸಿವನ್ನು ತೋರಿಸಲು ಯಾರಿಂದಲೂ ಸಾಧ್ಯವಿಲ್ಲ; ಬೆಂಕಿಯಲ್ಲಿ ಶೈತ್ಯವನ್ನಾಗಲೀ ಕತ್ತಲೆಯನ್ನಾಗಲೀ ತೋರಿಸಲು ಸಾಧ್ಯವಿಲ್ಲ ಎಂಬುದೆಲ್ಲವೂ ಸಾರ್ವತ್ರಿಕಾನುಭವದ ಮಾತುಗಳೇ ಹೊರತು ಬೊಗಳೆಯಲ್ಲ.

**ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ;** ಬ್ರಹ್ಮಾತ್ಮ ಏಕತ್ವವನ್ನು ಕಾಣುವಂಥ ಧೀರನಿಗೆ ಶೋಕವೆಲ್ಲಿ? ಮೋಹವೆಲ್ಲಿ? ಎಂದು ಈಶಾವಾಸ್ಯೋಪನಿಷತ್ತೂ ಸಾರುತ್ತಿದೆ. ಹೀಗೆಯೇ ಜ್ಞಾನಿಗೆ ಸಂಸಾರದ ಅಂಟು ಇಲ್ಲ ಎಂದು ವೇದಾಂತಗಳು ಮತ್ತೆ ಮತ್ತೆ ಸಾರಿಸಾರಿ ಹೇಳುತ್ತಿವೆ. ಈ ಮಾತುಗಳಾವುವೂ ಸುಮ್ಮನೇ ಹೇಳಿದ ತಮಾಷೆಯ ಮಾತುಗಳಲ್ಲ. ಶುಷ್ಕ ಪಂಡಿತರುಗಳಿಗೆ ಈ ಮಾತುಗಳು ಒಣಮಾತುಗಳಾಗಿ ತೋರಬಹುದು. ಆದರೆ ನಿಜವಾಗಿಯೂ ಬ್ರಹ್ಮಜ್ಞಾನಿಯಾದವನಿಗೆ ಈ ಸಂದೇಶಗಳೆಲ್ಲವೂ ಅನುಭವದ ಮಾತುಗಳೇ. ಬ್ರಹ್ಮಜ್ಞಾನಿಗೆ ಸಂಸಾರಿತ್ವವು ಕನಸಿನಲ್ಲೂ ಇರಲಾರದು ಎಂದು ಹೇಳುತ್ತಿರುವ ಶ್ರೀಶಂಕರರು **ಅದ್ಭುತ ಅಸಂಸಾರಿಗಳಾಗಿರುತ್ತಾರೆ.**

# 30. ಅದ್ಭುತ ಅಲಂಕಾರಪ್ರಿಯರಾಗಿ

ಸಂನ್ಯಾಸಿಗಳೂ ವಿರಕ್ತರೂ ಆದ ಶ್ರೀಶಂಕರರು ಅಲಂಕಾರಪ್ರಿಯರೇ? ಏನಿದರರ್ಥ? ಎಂದು ಅನೇಕರಿಗೆ ಆಶ್ಚರ್ಯವಾಗಬಹುದು. ಆದರೆ ಇದು ಸತ್ಯ. ಒಬ್ಬೊಬ್ಬರಿಗೂ ಒಂದೊಂದು ಅಲಂಕಾರವಸ್ತುವಿರುತ್ತದೆ. ಅಲಂಕಾರಪದಾರ್ಥಗಳೆಂದರೆ ಬರೀ ಚಿನ್ನದ ಆಭರಣಗಳು, ರೇಷ್ಮೆಯ ವಸ್ತ್ರಗಳು, ಕುಂಕುಮ ವಿಭೂತಿಗಳಷ್ಟೇ ಅಲ್ಲ; ಮತ್ತೇನೆಂದರೆ: ಶಾಸ್ತ್ರಜ್ಞಾನ, ವೇದಾಂತವಿಜ್ಞಾನ, ಬ್ರಹ್ಮಜ್ಞಾನಗಳೂ ಅಲಂಕಾರಗಳೇ. ಹೀಗಾಗಿ ಬ್ರಹ್ಮಜ್ಞಾನಿಪುಂಗವರಾದ ಯತಿವರೇಣ್ಯರಾದ ಅಪ್ಪಟ ವೇದಾಂತಿಗಳಾದ ಶ್ರೀಶಂಕರರಿಗೆ ಬ್ರಹ್ಮಾತ್ಮಜ್ಞಾನವೇ ವಜ್ರದ ಕಿರೀಟದಂಥ ಅಲಂಕಾರವು. ಏಕೆಂದರೆ ಶ್ರೀಶಂಕರರೇ ಬಾಯಿಬಿಟ್ಟು **"ನಮಗಿದು ಅಲಂಕಾರ"** ಎಂದು ಬರೆದಿದ್ದಾರೆ. ಹೌದೇ? ಎಲ್ಲಿ ಬರೆದಿದ್ದಾರೆ? ಎಂದರೆ ಬ್ರಹ್ಮಸೂತ್ರಭಾಷ್ಯದಲ್ಲಿ (೧-೧-೪):

**ಅಲಂಕಾರೋ ಹ್ಯಯಮಸ್ಮಾಕಂ ಯದ್ ಬ್ರಹ್ಮಾತ್ಮಾವಗತೌ ಸತ್ಯಾಂ ಸರ್ವಕರ್ತವ್ಯತಾಹಾನಿಃ ಕೃತಕೃತ್ಯತಾ ಚ ಇತಿ,** ಬ್ರಹ್ಮಾತ್ಮಾವಗತಿಯು ಉಂಟಾಗಿಬಿಟ್ಟರೆ ಅಂಥವನಿಗೆ ಯಾವ ಕರ್ತವ್ಯತಾಬುದ್ಧಿಯೂ ಇರುವುದಿಲ್ಲ, ಅವನು ಕೃತಕೃತ್ಯನೇ ಆಗಿಬಿಡುತ್ತಾನೆ—ಎಂಬೀ ಮಾತುಗಳು **ನಮಗೆ ಅಲಂಕಾರವೇ** ಆಗಿವೆ. ಈ ಮಾತುಗಳು ತುಂಬಾ ಅರ್ಥಗರ್ಭಿತವಾಗಿವೆ. ಈ ಮಾತುಗಳು ವೇದಾಂತಗಳ ಸಾರವಾಗಿರುತ್ತವೆ. ಆದ್ದರಿಂದಲೇ ವೇದಾಂತಿಗಳಾದ ನಮಗೆ ಈ ಮಾತುಗಳು ಅಲಂಕಾರವೇ ಹೊರತು ದೂಷಣವಲ್ಲ.

ಈ ಮೇಲಿನ ವಾಕ್ಯದ ತಾತ್ಪರ್ಯವನ್ನು ನೋಡೋಣ: ವೇದಾಂತದಲ್ಲಿ ಜ್ಞಾನ ಎಂದರೆ ಬ್ರಹ್ಮಜ್ಞಾನ, ಬ್ರಹ್ಮಜ್ಞಾನ ಎಂದರೆ ಬ್ರಹ್ಮಾತ್ಮಜ್ಞಾನ, ಬ್ರಹ್ಮಾತ್ಮಜ್ಞಾನ ಎಂದರೆ ಬ್ರಹ್ಮಾತ್ಮಾವಗತಿಯೇ ಎಂದು ತಿಳಿಯಬೇಕು. **ಅಹಂ ಬ್ರಹ್ಮಾಸ್ಮಿ** ಎಂಬ ಅಪರೋಕ್ಷಾನುಭವಕ್ಕೇ ವೇದಾಂತದಲ್ಲಿ ಬ್ರಹ್ಮಜ್ಞಾನ ಎಂದು ಹೆಸರು. ಅದು ಬರೀ ಪುಸ್ತಕದ ಬದನೇಕಾಯಿಯಲ್ಲ, ಮತ್ತೇನೆಂದರೆ ಸ್ವಾನುಭವದ ನಿಶ್ಚಯ ಜ್ಞಾನವಿದು. ನಿತ್ಯಶುದ್ಧ ನಿತ್ಯಬುದ್ಧ ನಿತ್ಯಮುಕ್ತನಾದ ಆತ್ಮನೇ ತಾನೆಂದು ತಿಳಿದ ಆತ್ಮಜ್ಞಾನಿಗೆ ಯಾವ ಕರ್ಮಗಳ ಸಂಬಂಧವೂ ಇಲ್ಲ. ಬ್ರಹ್ಮಜ್ಞಾನಿಯು ಕೃತಾರ್ಥನಾಗಿರುವ ಧೀರನು. ಇದನ್ನು ಅರ್ಥಮಾಡಿಕೊಳ್ಳದೇ ಮೀಮಾಂಸಕರು ಹಾಗಾದರೆ "ಬ್ರಹ್ಮಜ್ಞಾನಿಗೆ ಕರ್ತೃತ್ವವೇ ಇಲ್ಲವಾದರೆ ಕರ್ಮಗಳೇ ಇಲ್ಲ" ಎಂದಾಗುತ್ತದೆಯಲ್ಲಾ ಎಂದು ಆಕ್ಷೇಪಿಸಿದರೆ, ಆದಕ್ಕೆ ಉತ್ತರವಾಗಿ ಶ್ರೀಶಂಕರರು **ಈ ಮಾತುಗಳು ನಮಗೆ ದೂಷಣವಲ್ಲ, ಭೂಷಣವೇ** ಎಂದಿದ್ದಾರೆ. ಬ್ರಹ್ಮಜ್ಞಾನವನ್ನು ಭೂಷಣವನ್ನಾಗುಳ್ಳ ಶಂಕರರು **ಅದ್ಭುತ ಅಲಂಕಾರಪ್ರಿಯರಲ್ಲವೇ?**

# 31. ಅದ್ಭುತ ಪದವಾಕ್ಯಪ್ರಮಾಣಜ್ಞರಾಗಿ

ಶ್ರೀಶಂಕರರು ಪ್ರಸ್ಥಾನತ್ರಯೀಗ್ರಂಥಗಳಿಗೆ ಅತ್ಯಂತ ಸುಂದರವಾದ ಭಾಷ್ಯಗಳನ್ನು ಬರೆದಿದ್ದಾರೆ. ಭಗವದ್ಗೀತೆಗೂ, ದಶೋಪನಿಷತ್ತುಗಳಿಗೂ ಹಾಗೂ ವೇದಾಂತಮೀಮಾಂಸಾಸೂತ್ರಗಳಿಗೂ ವಿಸ್ತಾರವಾದ ಭಾಷ್ಯಗಳನ್ನು ಶ್ರೀಶಂಕರರು ಬರೆದಿರುತ್ತಾರೆ. ಇಂಥ ಭಾಷ್ಯಗಳನ್ನು ಬರೆಯುವುದು ಅಷ್ಟೇನು ಸುಲಭವಲ್ಲ. ಏಕೆಂದರೆ ಅಪೌರುಷೇಯವಾದ ವೇದಾಂತಗಳಿಗೆ ಅರ್ಥವನ್ನು ತಿಳಿಸಬೇಕಾದರೆ ಆ ಭಾಷ್ಯಕಾರರಿಗೆ ಪದವಾಕ್ಯಪ್ರಮಾಣಗಳ ಆಳವಾದ ಜ್ಞಾನವಿರಬೇಕು. ಇನ್ನು, ಭಗವಾನ್ ಬಾದರಾಯಣರ **ವೇದಾಂತಬ್ರಹ್ಮಸೂತ್ರಗಳಿಗೆ** ಭಾಷ್ಯವನ್ನು ಬರೆಯುವುದು ಎಂಬುದಂತೂ ಬರೀ ಪಂಡಿತನಾಗಿದ್ದರೆ ಸಾಧ್ಯವಾಗದು.

ಇದಕ್ಕೆ ವಿಶೇಷವಾದ ಹಾಗೂ ಅಸಾಧಾರಣವಾದ ಸಾಮರ್ಥ್ಯವಿರಬೇಕು. ಆ ಸಾಮರ್ಥ್ಯವೇ ಪದವಾಕ್ಯಪ್ರಮಾಣಜ್ಞತ್ವ. **ಪದ**ವೆಂದರೆ ವ್ಯಾಕರಣಶಾಸ್ತ್ರ, **ವಾಕ್ಯ**ವೆಂದರೆ ಪೂರ್ವಮೀಮಾಂಸಾದರ್ಶನ, **ಪ್ರಮಾಣ**ವೆಂದರೆ ತರ್ಕಶಾಸ್ತ್ರ. ನೈಯ್ಯಾಯಿಕ ವೈಶೇಷಿಕಗಳೆಂಬ ಎರಡೂ ದರ್ಶನಗಳಿಗೆ **ಪ್ರಮಾಣಶಾಸ್ತ್ರ** ಎಂದು ಹೆಸರು. ಈ ಪದವಾಕ್ಯಪ್ರಮಾಣಗಳನ್ನು ಸರಿಯಾಗಿ ಅಧ್ಯಯನಮಾಡದೇ **ಪ್ರಸ್ಥಾನತ್ರಯೀ**ಗ್ರಂಥಗಳಿಗೆ, ಅದರಲ್ಲೂ ಉಪನಿಷತ್ತುಗಳಿಗೆ, ಅದರಲ್ಲೂ ಶಾರೀರಕಮೀಮಾಂಸಾಸೂತ್ರಗಳಿಗೆ ಪ್ರಸನ್ನಗಂಭೀರ ಭಾಷ್ಯಗಳನ್ನು ರಚಿಸುವುದು ಖಂಡಿತಾ ಸಾಧ್ಯವೇ ಇಲ್ಲ.

**ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಮ್ ।**
**ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥**

ಎಂಬುದು ಸೂತ್ರದ ಲಕ್ಷಣ. ಅಲ್ಪಾಕ್ಷರಗಳಿಂದ ಕೂಡಿದ ಸೂತ್ರಗಳಿಗೆ ಅದ್ಭುತವಾದ ವಿಸ್ತಾರವಾದ ಅರ್ಥವುಳ್ಳ ಭಾಷ್ಯವನ್ನು ಬರೆಯುವುದು ಕಷ್ಟವೇ ಸರಿ. ಆದ್ದರಿಂದಲೇ ಶಾಂಕರಭಾಷ್ಯದ ಸಹಾಯವಿಲ್ಲದೇ ಉಪನಿಷನ್ಮಂತ್ರಗಳಿಗಾಗಲೀ ಬ್ರಹ್ಮಸೂತ್ರಗಳಿಗಾಗಲೀ ಸರಿಯಾದ ಸಂಪೂರ್ಣಾರ್ಥವು ತಿಳಿಯುವುದೇ ಇಲ್ಲ.

ಉದಾಹರಣೆಗೆ: **ತತ್ತು ಸಮನ್ವಯಾತ್** (೧-೧-೪) ಎಂಬುದು ಬ್ರಹ್ಮಸೂತ್ರಗಳಲ್ಲಿ ಒಂದು ಸೂತ್ರ; ಇದಕ್ಕೆ ಹೆಸರು **ಸಮನ್ವಯಸೂತ್ರ** ಎಂದು. ಈ ಸೂತ್ರದಲ್ಲಿ ಆರು ಅಕ್ಷರಗಳಿವೆ. ಆದರೆ ಈ ಸೂತ್ರಕ್ಕೆ ಶ್ರೀಶಂಕರರು ಸುಮಾರು ಹತ್ತು ಪುಟ ಭಾಷ್ಯವನ್ನು ಬರೆದಿರುತ್ತಾರೆ. ಇದಕ್ಕೆ **ಸಮನ್ವಯಭಾಷ್ಯ** ಎಂದು ಹೆಸರು. ಇದನ್ನು ನೋಡಿದಾಗ ಶಂಕರರನ್ನು **ಅದ್ಭುತ ಪದವಾಕ್ಯಪ್ರಮಾಣಜ್ಞರು** ಎಂದು ಧೈರ್ಯವಾಗಿ ಹೇಳಬಹುದು. ಬ್ರಹ್ಮಸೂತ್ರಭಾಷ್ಯವನ್ನು ಆಳವಾಗಿ ಓದಿದವರಿಗೆ ಈ ಮಾತು ಉತ್ಪ್ರೇಕ್ಷೆಯಲ್ಲ ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

# 32. ಅದ್ಭುತ ಸಂಶೋಧಕರಾಗಿ

ವೇದಾಂತಭಾಷ್ಯಕಾರರಾದ ಶ್ರೀಶಂಕರರು ಉಪನಿಷತ್ತುಗಳಿಗೆ ಸುಮ್ಮನೇ **ಮಕ್ಷಿಕಾ ಮಕ್ಷಿ** ಭಾಷ್ಯಗಳನ್ನು ಬರೆದಿಲ್ಲ. ವೇದಾಂತದರ್ಶನದ ಮೇಲೆ, ಸಾಂಖ್ಯರು, ತಾರ್ಕಿಕರು, ಮೀಮಾಂಸಕರು, ಜೈನರು, ಬೌದ್ಧರೇ ಮುಂತಾದ ಇತರ ದಾರ್ಶನಿಕರು ಆರೋಪಿಸಿದ ಆಕ್ಷೇಪಗಳಿಗೆಲ್ಲಾ ಭಾಷ್ಯಕಾರರಾದ ಶ್ರೀಶಂಕರರು ಸಮಾಧಾನಗಳನ್ನು ಕೊಟ್ಟಿರುತ್ತಾರೆ. ವೇದಾಂತೇತರ ಆ ಆಸ್ತಿಕ ನಾಸ್ತಿಕದರ್ಶನಗಳನ್ನೆಲ್ಲ ಆಳವಾಗಿ ವಿಮರ್ಶೆಮಾಡಿ ಅವರಲ್ಲಿರುವ ದೋಷಗಳನ್ನೆಲ್ಲ ಶ್ರೀಶಂಕರರು ತಮ್ಮ ಭಾಷ್ಯಗಳಲ್ಲಿ ತೋರಿಸಿ ಖಂಡಿಸಿದ್ದಾರೆ ಕೂಡ.

ವೇದಾಂತಪ್ರತಿಪಾದ್ಯನಾದ ಪುರುಷನ ಸ್ವರೂಪವನ್ನು ತೋರಿಸಿ ಈ ಪುರುಷನ ಸ್ವರೂಪವು ಯಾವ ಇತರ ದರ್ಶನಕಾರರಿಗೂ ತಿಳಿದಿಲ್ಲ ಎಂದು ಧೈರ್ಯವಾಗಿ ಶ್ರೀಶಂಕರರು ಬರೆದು **ಸಂಶೋಧಕ**ರಾಗಿರುತ್ತಾರೆ. ಇದಕ್ಕೆ ಉದಾಹರಣೆಯಾಗಿ ಬ್ರಹ್ಮಸೂತ್ರಭಾಷ್ಯದಿಂದ ಒಂದು ವಾಕ್ಯವನ್ನು ನಾವಿಲ್ಲಿ ನೋಡೋಣ: **ನ ಹಿ ಅಹಂಪ್ರತ್ಯಯವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ ಸಮಃ ಏಕಃ ಕೂಟಸ್ಥನಿತ್ಯಃ ಪುರುಷಃ ವಿಧಿಕಾಂಡೇ ವಾ ತರ್ಕಸಮಯೇ ವಾ ಕೇನಚಿದಧಿಗತಃ ಸರ್ವಸ್ಯಾತ್ಮಾ।** ಬ್ರ.ಸೂ.ಭಾ. ೧-೧-೪. ಅಹಂಪ್ರತ್ಯಯಕ್ಕೆ ವಿಷಯನಾಗಿರುವ ಕರ್ತೃವಾದ ಆತ್ಮನಿಗಿಂತ ಭಿನ್ನನಾದ, ಅವನಿಗೂ ಸಾಕ್ಷಿಯಾದ ಸರ್ವಭೂತಸ್ಥನೂ ಸಮನೂ ಅದ್ವಿತೀಯನೂ ಕೂಟಸ್ಥನಿತ್ಯನೂ ಸರ್ವಾತ್ಮನೂ ಆದ ಪುರುಷನನ್ನು ವಿಧಿಕಾಂಡದಲ್ಲಾಗಲೀ ತರ್ಕಶಾಸ್ತ್ರಗಳಲ್ಲಾಗಲೀ ಯಾರೂ ತಿಳಿದಿರುವುದಿಲ್ಲ, ತಿಳಿಸಿರುವುದೂ ಇಲ್ಲ.

ಇದು ಶ್ರೀಶಂಕರರ ಸಿಂಹಗರ್ಜನೆ. ಇದರ ತಾತ್ಪರ್ಯವೇನೆಂದರೆ: ಔಪನಿಷದ ಪುರುಷನ ಲಕ್ಷಣಗಳನ್ನೂ ಸ್ವರೂಪಗಳನ್ನೂ ವೇದಾಂತಗಳಲ್ಲಿ ತಿಳಿಸಿರುವಂತೆ ಇತರ ಯಾವ ದರ್ಶನಗಳಲ್ಲಿಯೂ ತಿಳಿಸಿಲ್ಲ. ಏಕೆಂದರೆ ಅವರಾರಿಗೂ ಇಂಥ ಆತ್ಮನ ಸ್ವರೂಪದ ಕಲ್ಪನೆಯೇ ಇಲ್ಲ. ಏಕೆಂದರೆ ಅವರಿಗೆ ವೇದಾಂತಸಂಪ್ರದಾಯವೇ ತಿಳಿದಿಲ್ಲ. ವೇದಾಂತಗಳಲ್ಲಿ ಪುರುಷನನ್ನು ಅಕರ್ತೃವೆಂದೂ ಅಭೋಕ್ತೃವೆಂದೂ ಅದ್ವಿತೀಯನೆಂದೂ ಕೂಟಸ್ಥನೆಂದೂ ಅಸಂಸಾರಿಯೆಂದೂ, ಎಲ್ಲರಿಗೂ ಪ್ರತ್ಯಗಾತ್ಮನೆಂದೂ ತಿಳಿಸಿದೆ. ಇಂಥ ಆತ್ಮನ ಜ್ಞಾನದಿಂದಲೇ ಮುಮುಕ್ಷುಗಳಿಗೆ ಮೋಕ್ಷಪ್ರಾಪ್ತಿ ಎಂದೂ ವೇದಾಂತಗಳಲ್ಲಿ ಮಾತ್ರ ತಿಳಿಸಿದೆ. ಇಂಥ ಆತ್ಮನನ್ನು ಇತರ ಯಾವ ದರ್ಶನಗಳಲ್ಲಿಯೂ ಯಾರೂ ತಿಳಿಸಿಲ್ಲ. ಏಕೆಂದರೆ ಅವರಿಗೆ ಇದು ತಿಳಿದೇ ಇಲ್ಲ ಎಂದು ಧೈರ್ಯವಾಗಿ ಬರೆದಿರುವ ಶ್ರೀಶಂಕರರನ್ನು **ಅದ್ಭುತ ಸಂಶೋಧಕರು** ಎನ್ನಬಹುದಲ್ಲವೇ?

# 33. ಅದ್ಭುತ ಸೂತ್ರಭಾಷ್ಯಕಾರರಾಗಿ

ಶ್ರೀಶಂಕರರು ಭಗವಾನ್ ಬಾದರಾಯಣಾಚಾರ್ಯರ **ಬ್ರಹ್ಮಸೂತ್ರಗಳಿಗೆ** ಅಂದರೆ **ವೇದಾಂತಮೀಮಾಂಸಾಸೂತ್ರಗಳಿಗೆ** ಅದ್ಭುತವಾದ ಭಾಷ್ಯವನ್ನು ಬರೆದಿದ್ದಾರೆ. ಇದು **ಬ್ರಹ್ಮಸೂತ್ರಶಾಂಕರಭಾಷ್ಯ** ಎಂದು ಸುಪ್ರಸಿದ್ಧವಾಗಿರುತ್ತದೆ. ಇದು ಮುಮುಕ್ಷುಗಳಿಗೂ, ವೇದಾಂತಜಿಜ್ಞಾಸುಗಳಿಗೂ, ಅಧ್ಯಾತ್ಮಸಾಧಕರಿಗೂ, ಸಂನ್ಯಾಸಿಗಳಿಗೂ, ಪಂಡಿತರಿಗೂ, ವಿದ್ವಾಂಸರಿಗೂ, ವೇದಾಂತಶಾಸ್ತ್ರವಿಮರ್ಶಕರುಗಳಿಗೂ ಅತ್ಯಂತ ಉಪಯುಕ್ತವಾಗಿರುವ ಮೋಕ್ಷಮಾರ್ಗಪ್ರದರ್ಶಕಗ್ರಂಥರತ್ನ. **ಅದ್ವೈತವೇದಾಂತಪ್ರಪಂಚದಲ್ಲಿ ಬ್ರಹ್ಮಸೂತ್ರಶಾಂಕರಭಾಷ್ಯವು ಧ್ರುವತಾರೆಯಂತೆ, ಮೇರುಪರ್ವತದಂತೆ, ಗೌರೀಶಂಕರಶಿಖರದಂತೆ, ಕೋಹಿನೂರ್ ವಜ್ರದಂತೆ ಹೊಳೆಯುತ್ತಿರುವ, ಮೆರೆಯುತ್ತಿರುವ ಒಂದು ಅದ್ಭುತ ಅಸಾಧಾರಣ, ಅಪೂರ್ವ, ವಿದ್ವಜ್ಜನಮಾನ್ಯವಾದ ವೇದಾಂತಕೃತಿರತ್ನ.**

ಇದನ್ನು ಅಧ್ಯಯನಮಾಡಿದವರಿಗೆಲ್ಲ ಈ ಮೇಲಿನ ಮಾತುಗಳು ಸತ್ಯ ಎನಿಸುತ್ತವೆ. ಬಾದರಾಯಣೀಯ ಬ್ರಹ್ಮಸೂತ್ರಗಳಿಗೆ ಇಷ್ಟೊಂದು ಸ್ಥಾನಮಾನ ಮಹತ್ತ್ವಗಳು ಬಂದಿರುವುದು ಶ್ರೀಶಂಕರರ ಭಾಷ್ಯದಿಂದಲೇ ಎಂಬುದನ್ನು ನಾವು ಮರೆಯಬಾರದು. ಏಕೆಂದರೆ ಬಾದರಾಯಣಾಚಾರ್ಯರ ಐನೂರೈವತ್ತೈದು ಸೂತ್ರಗಳೂ ನಿಜವಾಗಿಯೂ ಸೂತ್ರಗಳೇ ಆಗಿವೆ. ಅಲ್ಪಾಕ್ಷರಗಳಿಂದ ಕೂಡಿದ ಶಬ್ದಗಳೇ ಸೂತ್ರಗಳು. ಈ ಸೂತ್ರಗಳನ್ನಷ್ಟೇ ಓದಿದರೆ ಯಾರಿಗೂ ಸರಿಯಾಗಿ ಸ್ಪಷ್ಟವಾದ ಅರ್ಥಗಳು ತಿಳಿಯುವುದೇ ಇಲ್ಲ. ಏಕೆಂದರೆ ಅವುಗಳು ಸೂತ್ರಗಳು ಎಂದರೆ, ಅರ್ಥಗರ್ಭಿತವಾದ ಅಲ್ಪಾಕ್ಷರಗಳಲ್ಲವೇ?

ಈ ಸೂತ್ರಗಳಿಗೆಲ್ಲ ಹೂರಣವನ್ನು ತುಂಬಿ, ವಿಷಯ, ಸಂಶಯ, ಪೂರ್ವಪಕ್ಷ, ಉತ್ತರಪಕ್ಷ, ಸಿದ್ಧಾಂತಗಳಿಂದ ತಾತ್ಪರ್ಯಗಳನ್ನು ಧೈರ್ಯವಾಗಿ ಸುಸ್ಪಷ್ಟವಾಗಿ ತಿಳಿಸಿದ ಪ್ರಪ್ರಥಮ ಭಾಷ್ಯಕಾರರೆಂದರೆ ಶ್ರೀಶಂಕರಾಚಾರ್ಯರೇ ಎಂದು ಇಡೀ ವಿದ್ವಾಂಸರ ಸಮೂಹವೇ ಹೇಳುತ್ತದೆ. ಆಯಾ **ಅಧಿಕರಣಕ್ಕೆ** ವಿಷಯವಾಕ್ಯಗಳನ್ನು ಭಿನ್ನಭಿನ್ನ ವೇದಾಂತಗಳಿಂದ ಆರಿಸಿಕೊಂಡು, ಅನಂತರ ಆಯಾ ಸೂತ್ರಗಳಿಗೆ ಅರ್ಥವನ್ನು ಬರೆಯುವುದೆಂಬುದು ಸುಲಭವಾದ ಕೆಲಸವಲ್ಲ. ಇದೊಂದು ಅದ್ಭುತ, ಅನಿತರಸಾಧಾರಣ ಹಾಗೂ ಅಪೌರುಷೇಯವಾದ ಕೆಲಸವು! ಇದನ್ನು ಮಾಡಿರುವ ಶ್ರೀಶಂಕರರು **ಅದ್ಭುತ ಸೂತ್ರಭಾಷ್ಯಕಾರರು** ಎಂಬುದರಲ್ಲಿ ಎರಡನೆಯ ಮಾತಿಲ್ಲ. ಬ್ರಹ್ಮಸೂತ್ರಶಾಂಕರಭಾಷ್ಯವನ್ನು ಆಳವಾಗಿ ಅಧ್ಯಯನಮಾಡಿದವರಿಗೆ ಈ ಮಾತು ಸತ್ಯವೆಂದು ತಿಳಿಯುತ್ತದೆ.

# 34. ಅದ್ಭುತ ವಾದಿರಾಜರಾಗಿ

ಉಪನಿಷತ್ತುಗಳಿಗೂ, ಭಗವದ್ಗೀತೆಗೂ ಮತ್ತು ವೇದಾಂತಮೀಮಾಂಸಾ ಸೂತ್ರಗಳಿಗೂ ಅದ್ಭುತವಾದ ಭಾಷ್ಯಗಳನ್ನು ಬರೆದು, ಶ್ರೀಶಂಕರರು ವೇದ ವೇದಾಂತಗಳ ತಾತ್ಪರ್ಯವನ್ನು ಮಂಡಿಸಿರುತ್ತಾರೆ. ಬ್ರಹ್ಮಾತ್ಮೈಕತ್ವಜ್ಞಾನವೇ ವೇದಾಂತಗಳಿಗೆ ತಾತ್ಪರ್ಯವೆಂದೂ, ಆತ್ಮಜ್ಞಾನದಿಂದಲೇ ಮೋಕ್ಷವೆಂದೂ, ಮೋಕ್ಷವೇ ಮಾನವಜನ್ಮದ ಹೆಗ್ಗುರಿಯೆಂದೂ ಶ್ರೀಶಂಕರರು ಪ್ರತಿಪಾದಿಸಿರುತ್ತಾರೆ. ಇದನ್ನೆಲ್ಲ ಶ್ರೀಶಂಕರರು ಚರ್ಚೆಗಳ ಮೂಲಕ, ವಾದಪ್ರತಿವಾದಗಳ ಮೂಲಕ, ಖಂಡನಮಂಡನಗಳ ಮೂಲಕ ಸಿದ್ಧಾಂತಮಾಡಿದ್ದಾರೆ.

ಉದಾಹರಣೆಗೆ: ಜೈಮಿನಿ ಆಚಾರ್ಯರ ಪೂರ್ವಮೀಮಾಂಸಾದರ್ಶನದ ಪ್ರಕಾರ, ಧರ್ಮವೇ ವೇದವೇದಾಂತಗಳ ತಾತ್ಪರ್ಯ; ಧರ್ಮದಿಂದಲೇ ಮೋಕ್ಷ ಮತ್ತು ಸ್ವರ್ಗಪ್ರಾಪ್ತಿ; ವೇದಾಂತಗಳಲ್ಲಿಯೂ ಧರ್ಮವನ್ನೇ ಪ್ರಧಾನವಾಗಿ ಹೇಳಿದೆ. ಬ್ರಹ್ಮಜ್ಞಾನವೆಂಬುದು ಗೌಣ ಮಾತ್ರ. ಬರೀ ಜ್ಞಾನದಿಂದ ಮೋಕ್ಷವಿಲ್ಲ; ಧರ್ಮಾಚರಣೆಯಿಂದಲೇ ಮೋಕ್ಷ. ಧರ್ಮವೇ ಪ್ರಧಾನ, ಕೇವಲ ಆತ್ಮಜ್ಞಾನವು ನಿಷ್ಪ್ರಯೋಜನ—ಎಂದೆಲ್ಲಾ ಮೀಮಾಂಸಕರು ಆ ಕಾಲದಲ್ಲಿ ಪ್ರಚಾರ ಮಾಡುತ್ತಿದ್ದರು, ವಾದಮಾಡುತ್ತಿದ್ದರು ಕೂಡ.

ಇದಕ್ಕೆ ಒಂದು ಕಥೆ ಕೂಡ ಇದೆ: ಕುಮಾರಿಲಭಟ್ಟರ ಪ್ರಿಯಶಿಷ್ಯರಾದ ಮಂಡನಮಿಶ್ರರಿಗೆ ಹಾಗೂ ಶ್ರೀಶಂಕರರಿಗೆ ನಡೆದ ಧರ್ಮ-ಜ್ಞಾನಮೀಮಾಂಸಾ ವಿಚಾರ. ಆಗಿನ ಕಾಲಕ್ಕೆ ಮೀಮಾಂಸಾದರ್ಶನದಲ್ಲಿ ಮಹಾಪಂಡಿತರಾಗಿದ್ದ ಮಂಡನಮಿಶ್ರರೊಂದಿಗೆ ಬಾಲಸಂನ್ಯಾಸಿಗಳಾದ ಹಾಗೂ ಬ್ರಹ್ಮಜ್ಞಾನಿಪುಂಗವರಾಗಿದ್ದ ಶ್ರೀಶಂಕರರು ವಾದವನ್ನು ಮಾಡುತ್ತಾರೆ. ಮಂಡನಮಿಶ್ರರು ಕರ್ಮನಿಷ್ಠರಾಗಿದ್ದ ಪ್ರಚಂಡ ಪೂರ್ವಮೀಮಾಂಸಕರು. ಇವರಿಗೆ ವೇದಗಳೇ ಪ್ರಮಾಣ, ವೇದಾಂತಗಳು ಸ್ವತಂತ್ರಪ್ರಮಾಣಗಳೇ ಅಲ್ಲ; ವೇದಗಳ ತಾತ್ಪರ್ಯವೆಂದರೆ ಅಗ್ನಿಹೋತ್ರಾದಿಕರ್ಮಗಳೇ; ವೇದಾಂತಗಳೂ ಹೇಗೋ ಈ ಕರ್ಮಗಳನ್ನೇ ಹೇಳುತ್ತವೆ—ಎಂದೆಲ್ಲಾ ವಾದಿಸುತ್ತಿದ್ದರಂತೆ. ಇಂಥವರೊಂದಿಗೆ ವಾದಮಾಡಿ, ಶ್ರೀಶಂಕರರು ಆತ್ಮಜ್ಞಾನವೇ ವೇದವೇದಾಂತಗಳಿಗೆ ತಾತ್ಪರ್ಯ, ಕರ್ಮಗಳಿಂದ ಕೇವಲ ಚಿತ್ತಶುದ್ಧಿಯಾಗಿ, ಅನಂತರ ವೈರಾಗ್ಯ ಉಂಟಾಗಿ, ಆತ್ಮಜ್ಞಾನವನ್ನು ಪಡೆದರೇ ಮೋಕ್ಷಪ್ರಾಪ್ತಿಯು ಎಂದು ಪ್ರತಿಪಾದಿಸಿರುತ್ತಾರೆ. ಹೀಗೆ ಮಂಡನಮಿಶ್ರರನ್ನು ವಾದದಲ್ಲಿ ಸೋಲಿಸಿ ಅವರಿಗೆ **ಸುರೇಶ್ವರಾಚಾರ್ಯ** ಎಂಬ ಹೆಸರಿನಿಂದ ಸಂನ್ಯಾಸದೀಕ್ಷೆಯನ್ನೂ ಕೊಟ್ಟು ಅವರನ್ನೂ ಆತ್ಮಜ್ಞಾನಿಗಳನ್ನಾಗಿ ಪರಿವರ್ತಿಸಿದ ಶ್ರೀಶಂಕರರು **ಅದ್ಭುತ ವಾದಿರಾಜರಲ್ಲವೇ?**

# 35. ಅದ್ಭುತ ಗೀತಾಭಾಷ್ಯಕಾರರಾಗಿ

ಭಗವದ್ಗೀತೆಯು ಪಂಚಮವೇದವೆಂದೇ ಪ್ರಸಿದ್ಧವಾಗಿರುವ ಶ್ರೀಮನ್ಮಹಾಭಾರತದ ಭೀಷ್ಮಪರ್ವದಲ್ಲಿ ಬರುವ ಭಾಗ. ರಣರಂಗದಲ್ಲಿ ಧರ್ಮಸಂಮೂಢಚಿತ್ತನಾಗಿದ್ದ ಮಧ್ಯಮಪಾಂಡವನಾದ ಅರ್ಜುನನಿಗೆ ಸಾರಥಿಯಾಗಿದ್ದ ಶ್ರೀಕೃಷ್ಣಭಗವಂತನು ಉಪದೇಶಮಾಡಿದ ಸಂದೇಶಗಳ ಸಾರವೇ ಭಗವದ್ಗೀತೆ.

**ಗೀತಾ ಸಹಸ್ರನಾಮ್ನೈವ ಸ್ತವರಾಜೋ ಹ್ಯನುಸ್ಮೃತಿಃ।**
**ಗಜೇಂದ್ರಮೋಕ್ಷಣಂ ಚೈವ "ಪಂಚ ರತ್ನಾನಿ" ಭಾರತೇ॥**

*ಭಗವದ್ಗೀತಾ, ಶ್ರೀವಿಷ್ಣುಸಹಸ್ರನಾಮಸ್ತೋತ್ರ, ಭೀಷ್ಮಸ್ತವರಾಜ, ಅನುಸ್ಮೃತಿ ಮತ್ತು ಗಜೇಂದ್ರಮೋಕ್ಷ—ಈ ಐದೂ **"ಮಹಾಭಾರತದಲ್ಲಿನ ಪಂಚ ರತ್ನಗಳು"**.*

ಹೀಗೆ ಭಗವದ್ಗೀತೆಯು ಭಾರತದ ಪಂಚರತ್ನಗಳಲ್ಲಿ ಒಂದಾಗಿತ್ತು. ದಿಟ, ಆದರೆ ಶ್ರೀಶಂಕರರು ಈ ಭಗವದ್ಗೀತೆಗೆ ತಮ್ಮ ಭಾಷ್ಯವನ್ನು ಬರೆಯುವುದಕ್ಕಿಂತ ಮುಂಚೆ, ಈಗಿನಂತೆ ಗೀತೆಗೆ ಹೆಚ್ಚಿನ ಸ್ಥಾನಮಾನವಾಗಲೀ ಮಹತ್ತ್ವವಾಗಲೀ ಇರಲಿಲ್ಲ. ಭಗವದ್ಗೀತೆಯೆಂದರೆ ಅದೂ ಒಂದು ಪುಸ್ತಕ, ಮಹಾಭಾರತದ ಭೀಷ್ಮಪರ್ವದಲ್ಲಿನ ಭಾಗ, ಅದರಲ್ಲಿ ತುಂಬಾ ವಿಷಯಗಳಿವೆಯಂತೆ—ಎಂದಷ್ಟೇ ಅದು ಪ್ರಸಿದ್ಧವಾಗಿತ್ತು. ಈಗ ಮೋಕ್ಷಶಾಸ್ತ್ರವೆಂದು ಪ್ರಸಿದ್ಧವಾಗಿರುವಂತೆ ಭಗವದ್ಗೀತೆಯು ಈ ಹಿಂದೆ ಅಷ್ಟೊಂದು ಜನಪ್ರಿಯವಾಗಿರಲಿಲ್ಲ.

ಆದರೆ ಶ್ರೀಶಂಕರರು ಕ್ರಿಸ್ತಶಕ ಎಂಟನೆಯ ಶತಮಾನದಲ್ಲಿ ಈ ಗೀತೆಗೆ ತಮ್ಮ ಸುಂದರವಾದ, ಪ್ರಸನ್ನವಾದ, ಪಾಂಡಿತ್ಯಪೂರ್ಣವಾದ ಹಾಗೂ ವಿಸ್ತಾರವಾದ ಭಾಷ್ಯವನ್ನು ಬರೆದಮೇಲೆ ಭಗವದ್ಗೀತೆಯ ಜಾತಕವೇ ಬದಲಾವಣೆಯಾಯಿತು. **ಅಂದಿನಿಂದ ಭಗವದ್ಗೀತೆಯು ವಿಶ್ವಗೀತೆಯಾಗಿ, ವಿಶ್ವವಿಖ್ಯಾತವಾಗತೊಡಗಿತು. ಗೀತೆಯೆಂದರೇ ಸಾಕು, ಅದು ಭಗವದ್ಗೀತೆಯೇ ಎನ್ನುವಷ್ಟು ಸುಪ್ರಸಿದ್ಧವಾಯಿತು. ಭಗವದ್ಗೀತೆಗೆ ವೇದಾಂತಪ್ರಪಂಚದಲ್ಲಿ ಒಂದು ಅತ್ಯದ್ಭುತ ಅತ್ಯುನ್ನತ ಸ್ಥಾನವು ಸಿಕ್ಕಿದಂತಾಯಿತು. ಇದಕ್ಕೆಲ್ಲ ಕಾರಣ ಅದ್ಭುತ ಶಂಕರರ ಅದ್ಭುತ ಗೀತಾಭಾಷ್ಯ.**

ಇಂದು **ಪ್ರಸ್ಥಾನತ್ರಯೀ**ಗ್ರಂಥಗಳಲ್ಲಿ ಭಗವದ್ಗೀತೆಗೂ ಒಂದು ಅಸಾಧಾರಣ ಸ್ಥಾನವು ದೊರಕಿರುತ್ತದೆ. ವೇದಾಂತಶಾಸ್ತ್ರವೆಂದರೆ ಉಪನಿಷತ್ತುಗಳ ಜೊತೆಯಲ್ಲಿ ಭಗವದ್ಗೀತೆಯೂ ಸೇರಿಕೊಂಡಿರುತ್ತದೆ. **"ಆತ್ಮಜ್ಞಾನದಿಂದಲೇ ಮೋಕ್ಷ"** ಎಂಬ ಔಪನಿಷದಸಂದೇಶವನ್ನು ಭಗದ್ಗೀತೆಯೂ ನಮಗೆ ತಿಳಿಸುತ್ತಿದೆ ಎಂದು ಶಂಕರರು ಬರೆದಿದ್ದಾರೆ. ಹೀಗಾಗಿ ಶಂಕರರು **ಅದ್ಭುತ ಗೀತಾಭಾಷ್ಯಕಾರರಾಗಿದ್ದಾರೆ.**

# 36. ಅದ್ಭುತ ಪ್ರಕರಣಗ್ರಂಥಕಾರರಾಗಿ

ಶ್ರೀಶಂಕರರು ಪ್ರಸ್ಥಾನತ್ರಯಗ್ರಂಥಗಳಿಗೆ ಸುಂದರವಾದ ಭಾಷ್ಯಗಳನ್ನು ಬರೆದು **ವೇದಾಂತಭಾಷ್ಯಕಾರರು** ಎಂದೇ ಪ್ರಸಿದ್ಧರಾಗಿದ್ದರೂ, ಇವುಗಳಲ್ಲದೇ ನೂರಾರು **ಸ್ವತಂತ್ರ ಪ್ರಕರಣಗ್ರಂಥಗಳನ್ನೂ** ರಚಿಸಿರುತ್ತಾರೆ. ನಾನಿಲ್ಲಿ ಪ್ರಕೃತದಲ್ಲಿ, ಶ್ರೀಶಂಕರರಿಂದ ರಚಿತವಾಗಿರುವ ಕೆಲವು **ವೇದಾಂತಪ್ರಕರಣ ಗ್ರಂಥಗಳನ್ನು** ಪರಿಚಯಿಸುತ್ತೇನೆ. ಉಪನಿಷತ್ತುಗಳಲ್ಲಿ ತಿಳಿಸಿರುವ ಎಲ್ಲಾ ವಿಷಯಗಳನ್ನೂ ಈ ವೇದಾಂತಪ್ರಕರಣಗ್ರಂಥಗಳಲ್ಲಿ ಸುಲಭವಾಗಿ ಶ್ರೀಶಂಕರರು ತಿಳಿಸಿರುತ್ತಾರೆ. ಸಾಧನ, ಜ್ಞಾನ, ಭಕ್ತಿ, ಕರ್ಮಗಳು, ಗುರುಭಕ್ತಿ, ವೈರಾಗ್ಯ, ತ್ಯಾಗ, ಸತ್ಯ, ಬ್ರಹ್ಮಚರ್ಯ, ವಿವೇಕ, ಮುಮುಕ್ಷುತ್ವ, ಮೋಕ್ಷ, ಇತ್ಯಾದಿ ಇತ್ಯಾದಿ ವಿಷಯಗಳನ್ನು ಶ್ರೀಶಂಕರರು ಸುಂದರಶೈಲಿಯಲ್ಲಿ ತಿಳಿಸಿರುತ್ತಾರೆ. ಶಂಕರರ ಇಂಥ ಕೆಲವು **ವೇದಾಂತಪ್ರಕರಣಗ್ರಂಥಗಳನ್ನು** ನಾನಿಲ್ಲಿ ಹೆಸರಿಸುತ್ತೇನೆ:

೧. ಉಪದೇಶಸಾಹಸ್ರೀ
೨. ವಿವೇಕಚೂಡಾಮಣಿ (?)
೩. ಭಜ ಗೋವಿಂದಂ
೪. ಕಾಶೀಪಂಚಕಂ
೫. ಏಕಶ್ಲೋಕೀ
೬. ಸ್ವರೂಪಾನುಸಂಧಾನಂ
೭. ಶ್ರೀದಕ್ಷಿಣಾಮೂರ್ತಿ ಸ್ತೋತ್ರಂ
೮. ನಿರ್ವಾಣಷಟ್ಕಂ
೯. ಪ್ರಾತಃಸ್ಮರಣ ಸ್ತೋತ್ರಂ
೧೦. ತತ್ತ್ವೋಪದೇಶಃ
೧೧. ಅನಾತ್ಮಶ್ರೀವಿಗರ್ಹಣಂ
೧೨. ಹಸ್ತಾಮಲಕ ಸ್ತೋತ್ರಂ
೧೩. ದಶಶ್ಲೋಕೀ
೧೪. ಧನ್ಯಾಷ್ಟಕಂ
೧೫. ವಿಜ್ಞಾನನೌಕಾ
೧೬. ಲಕ್ಷ್ಮೀನೃಸಿಂಹಪಂಚರತ್ನಂ
೧೭. ಜೀವನ್ಮುಕ್ತಾನಂದಲಹರೀ
೧೮. ಶ್ರೀಲಕ್ಷ್ಮೀನೃಸಿಂಹಕರಾವಲಂಬಂ
೧೯. ಮಹಾವಾಕ್ಯದರ್ಪಣಂ
೨೦. ಬ್ರಹ್ಮಾನುಚಿಂತನಂ
೨೧. ಸದಾಚಾರಾನುಸಂಧಾನಂ
೨೨. ಸರ್ವವೇದಾಂತಸಿದ್ಧಾಂತಸಾರಸಂಗ್ರಹ
೨೩. ಸಾಧನಸೋಪಾನಪಂಚಕಂ
೨೪. ಪ್ರೌಢಾನುಭೂತಿಃ
೨೫. ಅದ್ವೈತಪಂಚರತ್ನಂ
೨೬. ದೃಗ್‌ದೃಶ್ಯವಿವೇಕಃ
೨೭. ಮಾಯಾಪಂಚಕಂ
೨೮. ನಿರ್ವಾಣಮಂಜರೀ
೨೯. ಷಟ್ಪದೀಸ್ತೋತ್ರಂ
೩೦. ಲಘುವಾಕ್ಯವೃತ್ತಿಃ
೩೧. ಅಪರೋಕ್ಷಾನುಭೂತಿಃ
೩೨. ಗುರ್ವಷ್ಟಕಂ
೩೩. ಸ್ವಾತ್ಮನಿರೂಪಣಂ
೩೪. ವೇದಸಾರಶಿವಸ್ತೋತ್ರಂ
೩೫. ಮನೀಷಾಪಂಚಕಂ
೩೬. ಕೌಪೀನಪಂಚಕಂ
೩೭. ವಾಕ್ಯವೃತ್ತಿಃ
೩೮. ಬ್ರಹ್ಮಜ್ಞಾನಾವಳೀಮಾಲಾ
೩೯. ಆತ್ಮಬೋಧಃ
೪೦. ಸದ್ಗುರ್ವಷ್ಟಕಂ

# 37. ಅದ್ಭುತ ಪರಿವ್ರಾಜಕರಾಗಿ

ಸರ್ವಸಂಗಪರಿತ್ಯಾಗಿಗಳಾದ ಸಂನ್ಯಾಸಿಗಳಿಗೆ **ಪರಿವ್ರಾಜಕರು** ಎಂದೂ ಹೆಸರಿದೆ. ಪರಿವ್ರಾಟ್, ಪರಿವ್ರಾಜಕ, ಯತಿ, ತುರೀಯಾಶ್ರಮೀ, ಸಂನ್ಯಾಸೀ ಇವೆಲ್ಲವೂ ಪರ್ಯಾಯಪದಗಳು. **ಪರಿ ಸಮಂತಾತ್ ವ್ರಜತಿ ಇತಿ ಪರಿವ್ರಾಜಕಃ;** ಎಲ್ಲಾ ಕಡೆಗಳಲ್ಲಿಯೂ ಸಂಚಾರಮಾಡುವವರಿಗೆ **ಪರಿವ್ರಾಜಕರು** ಎಂದು ಹೆಸರು. ನಾನು ನನ್ನದೆಂಬ ಅಭಿಮಾನವನ್ನು ಬಿಟ್ಟಿರುವ ಸಂನ್ಯಾಸಿಗಳಿಗೆ ಗೊತ್ತಾದ ಒಂದು ಮನೆ, ವಾಸಸ್ಥಾನ, ಆಶ್ರಮ, ಮಠ—ಯಾವುದೂ ಇರುವುದಿಲ್ಲ. ಹೀಗಾಗಿ **ವಸುಧೈವ ಕುಟುಂಬಕಮ್** ಎಂಬಂತೆ ಪರಿವ್ರಾಜಕರಿಗೆ ಇಡೀ ಭೂಮಂಡಲವೇ ಕುಟುಂಬವಾಗಿರುತ್ತದೆ. ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುತ್ತಲೇ ಜೀವನವನ್ನು ಇವರು ಸಾಗಿಸುತ್ತಾರೆ.

ಈ ಮಾತು ಶ್ರೀಶಂಕರರಿಗೆ ಚೆನ್ನಾಗಿ ಹೊಂದುತ್ತದೆ. ಶ್ರೀಶಂಕರರು ಆಸೇತು ಹಿಮಾಚಲದವರೆಗೆ **ಪಾದಚಾರಿಗಳಾಗಿ** ಸಂಚರಿಸುತ್ತಾ, ಅಲ್ಲಲ್ಲಿ ವೇದಾಂತ ಪ್ರವಚನ, ವೇದಾಂತಗೋಷ್ಠೀ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಆಗಿನ ಕಾಲದಲ್ಲಿ, ಅಂದರೆ ಕ್ರಿಸ್ತಶಕ ಎಂಟನೆಯ ಶತಮಾನದಲ್ಲಿ, ಸ್ಕೂಟೀ, ಸ್ಕೂಟರ್, ಆಟೋರಿಕ್ಷಾ, ಕಾರುಗಳು, ಬಸ್, ಟ್ಯಾಕ್ಸಿ, ಕ್ಯಾಬ್‌ಗಳು, ಊಬರ್, ಓಲಾ, ಟ್ರೈನ್‌ಗಳು—ಯಾವುದೂ ಇರಲಿಲ್ಲ. ಆ ಕಾಲದಲ್ಲಿ ಸಂಚಾರಕ್ಕೆ ಇದ್ದ ಒಂದೇ ಒಂದು ಸಾಧನ ಎಂದರೆ ದೈವದತ್ತವಾದ ಕಾಲುಗಳು. ಶ್ರೀಶಂಕರರು ಊರಿಂದ ಊರಿಗೆ ಕಾಲ್ನಡಿಗೆಯಿಂದಲೇ ಹೋಗುತ್ತಿದ್ದರು. ಭಿಕ್ಷಾನ್ನದಿಂದಲೇ ಸಂತುಷ್ಟರಾಗಿ ಶ್ರೀಶಂಕರರು ಆನಂದವಾಗಿರುತ್ತಿದ್ದರು.

**ವೇದಾಂತವಾಕ್ಯೇಷು ಸದಾ ರಮಂತಃ**
**ಭಿಕ್ಷಾನ್ನಮಾತ್ರೇಣ ಚ ತುಷ್ಟಿಮಂತಃ।**
**ವಿಶೋಕಮಂತಃಕರಣೇ ರಮಂತಃ**
**ಕೌಪೀನವಂತಃ ಖಲು ಭಾಗ್ಯವಂತಃ॥**

ಎಂಬ ಶ್ರೀಶಂಕರರ ಸೂಕ್ತಿಗೆ ಶ್ರೀಶಂಕರರೇ ಜ್ವಲಂತ ಉದಾಹರಣೆ. ತಮ್ಮ ಮೂವತ್ತೆರಡು ವರ್ಷಗಳ ಜೀವಿತಕಾಲದಲ್ಲಿ ಶ್ರೀಶಂಕರರು ಕಾಲ್ನಡಿಗೆಯಿಂದಲೇ ಅಖಂಡಭಾರತವನ್ನು ಸಂಚರಿಸಿ **ಅದ್ಭುತ ಪರಿವ್ರಾಜಕರಾಗಿದ್ದಾರೆ.** ಅನ್ವರ್ಥ ಪರಿವ್ರಾಜಕಾಚಾರ್ಯರೆಂದರೆ ಶ್ರೀಶಂಕರರೇ. ಶ್ರೀಶಂಕರರೆಂದರೆ ಅನ್ವರ್ಥ ಪರಿವ್ರಾಜಕರೇ. ಆದರ್ಶಸಂನ್ಯಾಸಿಗಳಾಗಿ ಅನ್ವರ್ಥ ವೇದಾಂತವಿಜ್ಞಾನಸುನಿಶ್ಚಿತಾರ್ಥರಾಗಿ ಇಡೀ ಭಾರತರಾಷ್ಟ್ರವನ್ನೇ ತಮ್ಮ ಪವಿತ್ರ ಪಾದಗಳಿಂದ ಪಾವನಗೊಳಿಸಿರುವ **ಅದ್ಭುತ ಪರಿವ್ರಾಜಕ** ಶಂಕರರಿಗೆ ಭಕ್ತಿಪೂರ್ವಕ ವಂದನೆಗಳು.

# 38. ಅದ್ಭುತ ಸದ್ಗುರುಭಕ್ತರಾಗಿ

ಶ್ರೀಶಂಕರರು ಸ್ವತಃ ಅವರೇ ಗುರುಗಳು, ಅಲ್ಲಾ, ಸದ್ಗುರುಗಳು; ಅಲ್ಲಾ, **ಜಗದ್ಗುರು**ಗಳಾಗಿದ್ದಾರೆ. ಶ್ರೀಶಂಕರರಿಗೆ **ಜಗದ್ಗುರು ಶ್ರೀಶಂಕರಾಚಾರ್ಯರು** ಎಂದೇ ಹೆಸರು. ಹೌದು,ಇದು ಸತ್ಯ. ಶ್ರೀಶಂಕರರು ಜಾತಿ, ಮತ, ಪಂಥ, ಲಿಂಗ, ಆಶ್ರಮ, ಸಂಪ್ರದಾಯ ಮುಂತಾದ ಯಾವ ಭೇದವೂ ಇಲ್ಲದೇ ಸಕಲ ಮಾನವರಿಗೂ ಸಮನಾಗಿ ವೇದಾಂತಸಂದೇಶಗಳನ್ನು ತಿಳಿಸಿದ್ದಾರೆ. ಸಕಲಮಾನವರೂ ಬ್ರಹ್ಮಾತ್ಮಜ್ಞಾನದಿಂದ ಮೋಕ್ಷವನ್ನು ಈ ಜನ್ಮದಲ್ಲಿಯೇ ಹೊಂದಬಹುದು ಎಂಬುದನ್ನು ತಿಳಿಸಿರುತ್ತಾರೆ. ಇಷ್ಟೂ ದಿಟ. ಇದರಲ್ಲೇನೂ ಸಂಶಯವಿಲ್ಲ.

ಇಂಥ ಶಂಕರರು ಸ್ವತಃ ಸದ್ಗುರುಭಕ್ತರೂ ಹೌದು, ಬರೀ ಸದ್ಗುರುಭಕ್ತರಲ್ಲ; **ಅದ್ಭುತ ಸದ್ಗುರುಭಕ್ತರು** ಶ್ರೀಶಂಕರರು. ತಮ್ಮ ಭಾಷ್ಯಗಳಲ್ಲಿ ಪ್ರಸಂಗಬಂದಾಗ ಸದ್ಗುರುಸೇವೆಯ ಮಹಿಮೆಯನ್ನೂ ಸದ್ಗುರುಭಕ್ತಿಯ ಫಲವನ್ನೂ ಹೃದಯಂಗಮವಾಗಿ ಶ್ರೀಶಂಕರರು ತಿಳಿಸಿರುತ್ತಾರೆ. ಉದಾಹರಣೆಗೆ:

**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್।** ಮುಂಡಕ ೧-೨-೧೨

ಇಲ್ಲಿ **ಗುರುಮೇವಾಭಿಗಚ್ಛೇತ್** ಎಂಬ ವಾಕ್ಯಕ್ಕೆ ಶ್ರೀಶಂಕರರು **ಶಾಸ್ತ್ರಜ್ಞೋಽಪಿ ಸ್ವಾತಂತ್ರ್ಯೇಣ ಬ್ರಹ್ಮಜ್ಞಾನಾನ್ವೇಷಣಂ ನ ಕುರ್ಯಾತ್ ಇತಿ ಅವಧಾರಣಫಲಂ;** ಸರ್ವಶಾಸ್ತ್ರಗಳನ್ನು ಬಲ್ಲವನಾದರೂ ಸ್ವತಂತ್ರನಾಗಿ ತಾನೇ ಬ್ರಹ್ಮಜ್ಞಾನದ ಅನ್ವೇಷಣವನ್ನು ಮಾಡಬಾರದು, ಗುರುವಿನ ಹತ್ತಿರಕ್ಕೇ ಹೋಗಬೇಕು ಎಂದು ಬರೆದಿದ್ದಾರೆ. ಹೀಗೆಯೇ '**ಆಚಾರ್ಯವಾನ್ ಪುರುಷೋ ವೇದ**' (ಛಾಂದೋಗ್ಯ) ಮುಂತಾದ ಮಂತ್ರಗಳಿಗೆ ಅರ್ಥವನ್ನು ತಿಳಿಸುವಾಗ ಶಂಕರರು ಸದ್ಗುರುಭಕ್ತಿಯ ಮಹಿಮೆಯನ್ನು ತಿಳಿಸಿದ್ದಾರೆ.

ಶ್ರೀಶಂಕರರು '**ಗುರ್ವಷ್ಟಕಂ**' ಎಂಬ ಹೆಸರಿನಿಂದ ಎಂಟು ಶ್ಲೋಕಗಳನ್ನು ರಚಿಸಿ, ಇದರಲ್ಲಿ ಸದ್ಗುರುವಿನ ಮಹಿಮೆಯನ್ನು ಸುಂದರವಾಗಿ ತಿಳಿಸಿರುತ್ತಾರೆ:

**ಗುರೋರಂಘ್ರಿಪದ್ಮೇ ಮನಶ್ಚೇನ್ನ ಲಗ್ನಂ**
**ತತಃ ಕಿಂ? ತತಃ ಕಿಂ? ತತಃ ಕಿಂ? ತತಃ ಕಿಮ್?**

ಸದ್ಗುರುವಿನ ಪಾದಕಮಲಂಗಳಲ್ಲಿ ಮನಸ್ಸು ನಿಲ್ಲದೇ ಹೋದರೆ ಆ ಸಂಪತ್ತುಗಳಿಂದ, ಆ ವಿದ್ಯೆಗಳಿಂದ, ಆ ಸೌಂದರ್ಯದಿಂದ, ಆ ಭೋಗಗಳಿಂದ, ಆ ಅಧಿಕಾರದಿಂದ, ಆ ಕೀರ್ತಿಯಿಂದ ಏನು ಪ್ರಯೋಜನ? ಎಂದು ಶ್ರೀಶಂಕರರು ಹೇಳಿರುವುದನ್ನು ನೋಡಿದರೆ ಆದರ್ಶಸದ್ಗುರುಭಕ್ತರಾದ ಪೂಜ್ಯ ಶ್ರೀಶಂಕರರನ್ನು **ಅದ್ಭುತ ಸದ್ಗುರುಭಕ್ತ**ರೆನ್ನಬಹುದಲ್ಲವೇ?

# 39. ಅದ್ಭುತ ಬ್ರಹ್ಮನಿಷ್ಠರಾಗಿ

ಸಾಧಕರಾದ ಮುಮುಕ್ಷುಗಳಿಗೆ ಬ್ರಹ್ಮನಿಷ್ಠರಾದ ಸದ್ಗುರುಗಳು ದೊರಕಬೇಕೆಂದರೂ ಅದಕ್ಕೆ ಪೂರ್ವಜನ್ಮಸುಕೃತವು ಇರಬೇಕು. ಆ ಆಚಾರ್ಯನ ಉಪದೇಶಶ್ರವಣದಿಂದಲೇ ಸಾಧಕನು ಬ್ರಹ್ಮಾತ್ಮಜ್ಞಾನವನ್ನು ಪಡೆದುಕೊಂಡು ಅದರಿಂದ ಸಕಲ ಸಂಸಾರಬಂಧನಗಳಿಂದಲೂ ಮುಕ್ತನಾಗುತ್ತಾನೆ. ಛಾಂದೋಗ್ಯೋಪನಿಷತ್ತಿನ ಒಂದು ಮಂತ್ರ (೬-೧೪-೨)ವು **"ಆಚಾರ್ಯವಾನ್ ಪುರುಷೋ ವೇದ"** ಎಂದು ಹೇಳುತ್ತಿದೆ; ಆಚಾರ್ಯನನ್ನುಳ್ಳ ಜಿಜ್ಞಾಸುಸಾಧಕನು ಮಾತ್ರವೇ ಬ್ರಹ್ಮವನ್ನು ತನ್ನ ಆತ್ಮನನ್ನಾಗಿ ತಿಳಿಯುತ್ತಾನೆ.

ಈ ಮಂತ್ರಕ್ಕೆ ಶ್ರೀಶಂಕರರು ವಿಸ್ತಾರವಾದ ಹಾಗೂ ಅರ್ಥಗರ್ಭಿತವಾದ ಭಾಷ್ಯವನ್ನು ಬರೆಯುತ್ತಾ ಹೀಗೆ ಹೇಳಿದ್ದಾರೆ: **ಕಥಂಚಿದೇವ ಪೂರ್ವಜನ್ಮ ಕೃತಪುಣ್ಯಾತಿಶಯಾತ್ ಪರಮಕಾರುಣಿಕಂ ಕಂಚಿತ್ ಸದ್‌ಬ್ರಹ್ಮಾತ್ಮವಿದಂ ವಿಮುಕ್ತಬಂಧನಂ ಬ್ರಹ್ಮಿಷ್ಠಂ ಯದಾ ಆಸಾದಯತಿ, ತದಾ ಸದ್ಗುರೂಪ ದೇಶೇನ ಆತ್ಮಜ್ಞೋ ಭವತಿ;** ಹೇಗೋ ಹಿಂದಿನ ಜನ್ಮಗ್ರಳಲ್ಲಿ ಮಾಡಿರುವ ಪುಣ್ಯಾತಿಶಯದಿಂದ ಪರಮಕಾರುಣಿಕನಾದ ಸದ್‌ಬ್ರಹ್ಮಾತ್ಮವಿದನಾದ, ಸಕಲ ಸಂಸಾರಬಂಧನಗಳಿಂದಲೂ ಮುಕ್ತನಾದ ಬ್ರಹ್ಮಿಷ್ಠನನ್ನು ತನ್ನ ಗುರುವನ್ನಾಗಿ ಮುಮುಕ್ಷುವು ಹೊಂದುತ್ತಾನೆ; ಆ ಸದ್ಗುರುವಿನ ಉಪದೇಶಶ್ರವಣದಿಂದ ಮುಮುಕ್ಷುಸಾಧಕನು ಆತ್ಮಜ್ಞನಾಗುತ್ತಾನೆ.

ಎಷ್ಟು ಅರ್ಥಗರ್ಭಿತವಾದ ಭಾಷ್ಯವಾಕ್ಯವಿದು! ಸದ್ಗುರುವೆಂದರೆ ಅವನು ಪರಮಕಾರುಣಿಕನೂ ಸ್ವತಃ ಬಂಧವಿಮುಕ್ತನೂ **ಬ್ರಹ್ಮನಿಷ್ಠನೂ** ಆಗಿರಬೇಕು. ಅಂಥ ಸದ್ಗುರುವು ಮುಮುಕ್ಷು ಅಧ್ಯಾತ್ಮಸಾಧಕರುಗಳಿಗೆ ದೊರಕಬೇಕೆಂದರೂ ಆ ಸಾಧಕರು ಹಿಂದಿನ ಅನೇಕ ಜನ್ಮಗ್ರಳಲ್ಲಿ ತಪಸ್ಸನ್ನು ಮಾಡಿರಬೇಕು. ಅಂಥ ಸದ್ಗುರುಗಳ ಸೇವೆಯನ್ನು ಮಾಡುತ್ತಾ, ಅವರಿಂದಲೇ ವೇದಾಂತವಾಕ್ಯಾರ್ಥಗಳನ್ನು ಶ್ರವಣಮಾಡಬೇಕೆಂದರೆ ಅಂಥವರು ನಿಜವಾಗಿಯೂ ಪುಣ್ಯವಂತರಲ್ಲವೇ? ಉಪನ್ಯಾಸಮಾಡುವವರೆಲ್ಲರೂ ಗುರುಗಳಾಗಲಾರರು. ಗುರುಗಳು ಎಂದರೆ ಪರಮಕಾರುಣ್ಯಸಿಂಧುಗಳಾಗಿ ಸ್ವತಃ ಬ್ರಹ್ಮನಿಷ್ಠರೂ ಆಗಿರಬೇಕು. ಇವರಿಗೇ **ಆಚಾರ್ಯರು** ಎಂದು ಹೆಸರು. ಇಂಥ ಆಚಾರ್ಯರನ್ನು ಪಡೆದ ಮುಮುಕ್ಷುಸಾಧಕನನ್ನು ಛಾಂದೋಗ್ಯೋಪನಿಷತ್ತು **'ಆಚಾರ್ಯವಾನ್ ಪುರುಷೋ ವೇದ'** ಎಂದಿದೆ. ಹೀಗೆ ಬರೆದಿರುವ ಶ್ರೀಶಂಕರರು ನಿಜಕ್ಕೂ ಅದ್ಭುತ ಕಾರುಣ್ಯಸಾಗರರೂ **ಅದ್ಭುತ ಬ್ರಹ್ಮನಿಷ್ಠರೂ** ಆಗಿರಲೇಬೇಕಲ್ಲವೇ? ಬ್ರಹ್ಮನಿಷ್ಠರಾಗದೆ ಇದ್ದಿದ್ದರೆ ಇಂಥ ಮಾತುಗಳು ಶ್ರೀಶಂಕರರ ಬಾಯಿಂದ ಬರುತ್ತಿರಲಿಲ್ಲ.

# 40. ಅದ್ಭುತ ಜೀವನ್ಮುಕ್ತರಾಗಿ

ಶ್ರೀಶಂಕರರ ನಿಲುಮೆಯನ್ನು ಅವರ ಭಾಷ್ಯವಾಕ್ಯಗಳಿಂದಲೇ ನಾವುಗಳು ನಿರ್ಧರಿಸಬೇಕೇ ಹೊರತು ಅವರ ಇವರ ಮಾತುಗಳಿಂದ ಅಲ್ಲ. ಭಗವಾನ್ ಶ್ರೀಶಂಕರರು **ಅದ್ಭುತ ಜೀವನ್ಮುಕ್ತರೂ** ಆಗಿದ್ದರು ಎಂಬುದು ನಮಗೆ ಅವರ ಬ್ರಹ್ಮಸೂತ್ರಭಾಷ್ಯದ ವಾಕ್ಯಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ.

'ಜೀವನ್ಮುಕ್ತರು' ಎಂದರೆ ಏನರ್ಥ? **ಜೀವನ್ ಏವ ಮುಕ್ತಃ ಜೀವನ್ಮುಕ್ತಃ** ಬದುಕಿರುವಾಗಲೇ, ಉಸಿರಾಡುತ್ತಿರುವಾಗಲೇ, ದೇಹೇಂದ್ರಿಯಮನೋಬುದ್ಧಿಗಳಿಂದ ಆಯಾ ಕೆಲಸಕಾರ್ಯಗಳನ್ನು ಮಾಡುತ್ತಿರುವಾಗಲೇ ಬ್ರಹ್ಮನಿಷ್ಠನಾದವನನ್ನೇ **ಜೀವನ್ಮುಕ್ತ** ಎನ್ನುತ್ತಾರೆ. ಹಾಗಾದರೆ ಜೀವನ್ಮುಕ್ತನಾದವನು ಉಸಿರಾಡಬಾರದೇ? ಬದುಕಿರುವುದಕ್ಕೆ ಬೇಕಾದಷ್ಟೂ ಕೆಲಸಕಾರ್ಯಗಳನ್ನು ಮಾಡುವುದಿಲ್ಲವೇ? ಜೀವನ್ಮುಕ್ತನೆಂದರೆ ಬಂಡೇಕಲ್ಲಿನಂತೆ, ಮರದ ತುಂಡಿನಂತೆ, ಗುಂಡುಕಲ್ಲಿನಂತೆ ಇರುತ್ತಾನೆ ಎಂದರ್ಥವೇ? ಎಂದರೆ, ಅಲ್ಲ. ಮತ್ತೇನೆಂದರೆ, ಬದುಕಿರುವಾಗಲೇ **'ಅಹಂ ಬ್ರಹ್ಮಾಸ್ಮಿ' ಎಂದು ಅನುಭವದಿಂದ ನಿಶ್ಚಿತವಾಗಿ ಸಾಕ್ಷಾತ್ತಾಗಿ ತಿಳಿದಿರುವವನೇ ಜೀವನ್ಮುಕ್ತನು ಎನಿಸುತ್ತಾನೆ.** ಈ ಅರ್ಥದಲ್ಲಿ ಶ್ರೀಶಂಕರರು ನಿಜಕ್ಕೂ **ಅದ್ಭುತ ಜೀವನ್ಮುಕ್ತರೇ** ಎಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಶ್ರೀಶಂಕರರು ತಮ್ಮ ಭಾಷ್ಯಗಳಲ್ಲಿ ಅಲ್ಲಲ್ಲಿ **ಜೀವನ್ನೇವ ಮುಕ್ತೋ ಭವತಿ, ಜೀವಂತ ಏವ ಮುಕ್ತಾ ಭವಂತಿ** ಎಂದು ಅನೇಕ ಕಡೆಗಳಲ್ಲಿ ಬರೆದಿರುತ್ತಾರೆ. ಉದಾಹರಣೆಗೆ:

**ಮಿಥ್ಯಾಪ್ರತ್ಯಯನಿಮಿತ್ತತ್ವಾತ್ ಸಶರೀರತ್ವಸ್ಯ, ಅಶರೀರತ್ವಸ್ಯ ಸ್ವಾಭಾವಿಕತ್ವಾಚ್ಚ ಸಿದ್ಧಂ ಜೀವತೋಽಪಿ ವಿದುಷಃ ಅಶರೀರತ್ವಂ ಸ್ವಾಭಾವಿಕಮ್।**

ಬ್ರ. ಸೂ. ಭಾ. ೧-೧-೪

*ಶರೀರವೇ ನಾನು ಎಂಬೀ ತಿಳಿವಳಿಕೆಯು ಅಜ್ಞಾನದಿಂದ ತೋರುತ್ತಿರುವುದರಿಂದಲೂ, ಅಶರೀರನೇ ನಾನು ಎಂಬುದು ಸ್ವಾಭಾವಿಕವಾಗಿರುವುದರಿಂದಲೂ ಬದುಕಿರುವಾಗಲೇ ಬ್ರಹ್ಮಜ್ಞಾನಿಗೆ ಅಶರೀರತ್ವವು ಸ್ವಾಭಾವಿಕವಾಗಿ ಸಿದ್ಧವಾಗುತ್ತದೆ.*

ಬ್ರಹ್ಮಜ್ಞಾನಿಯು ಬದುಕಿರುವಾಗಲೇ, ಇವನಿಗೆ **ಅಹಂ ಬ್ರಹ್ಮಾಸ್ಮಿ** ಎಂಬ ನಿಶ್ಚಯಜ್ಞಾನವು ಉಂಟಾಗಿರುತ್ತದೆ. **ನಾಹಂ ದೇಹಃ, ನಾಹಮ್ ಇಂದ್ರಿಯಾಣಿ, ನಾಹಂ ಮನಃ, ನೇದಂ ಜಗತ್ ಪರಮಾರ್ಥತಃ ಅಸ್ತಿ**— ಎಂದು ನಿಶ್ಚಯಜ್ಞಾನವಾದಮೇಲೆ ಅವನು ಜೀವನ್ಮುಕ್ತನೇ ಅಲ್ಲವೇ? ಅಂಥ ನಿಶ್ಚಯಜ್ಞಾನವನ್ನುಳ್ಳ ಬ್ರಹ್ಮಜ್ಞಾನಿಪುಂಗವರಾದ **ಶ್ರೀಶಂಕರರು ಅದ್ಭುತ ಜೀವನ್ಮುಕ್ತರು** ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. **ನಮಃ ಶ್ರೀಶಂಕರಾಯ.**

# 41. ಅದ್ಭುತ ಪ್ರಿಯಗುರುಗಳಾಗಿ

ಈ ವಿಶಾಲ ಪ್ರಪಂಚದಲ್ಲಿ ನೂರಾರು ಗುರುಗಳೂ, ಜಗದ್ಗುರುಗಳೂ ಇರಬಹುದು. ಆದರೆ ಪ್ರಿಯಗುರುಗಳು ದೊರಕುವುದು ಅತ್ಯಂತ ವಿರಳ! ಸಾಮಾನ್ಯಶಿಷ್ಯನ ಬಳಿಗೆ ಹೋಗಿ ಅವನ ಪರಿಸ್ಥಿತಿಯನ್ನು ಅರಿತು ಅವನ ಮಟ್ಟಕ್ಕೆ ಇಳಿದು, ಅವನಿಗೆ '**ತತ್ತ್ವಮಸಿ**' ಎಂಬ ಸಂದೇಶವನ್ನು ನೀಡಿ, ಅವನ ಸ್ವಂತ ಬಾಯಿಂದಲೇ "**ಅಹಂ ಬ್ರಹ್ಮಾಸ್ಮಿ**" ಎಂಬ ಅನುಭವದ ಮಾತನ್ನು ಆಡಿಸುವ ಮಹಾತ್ಮನೇ '**ಪ್ರಿಯಗುರು**' ಎನಿಸುತ್ತಾನೆ. ಈ ಅರ್ಥದಲ್ಲಿ ಶಂಕರರು '**ಅದ್ಭುತ ಪ್ರಿಯಗುರು'ಗಳೂ** ಆಗಿರುತ್ತಾರೆ.

ಇದಕ್ಕೊಂದು ಕಥೆ: ಶ್ರೀಶಂಕರರು, ಕಾಂಚಿಪಟ್ಟಣದಲ್ಲಿ ಪರಿವ್ರಾಜಕ ರಾಗಿದ್ದಾಗ ಅವರ ಕಿವಿಗೆ "ಅಯ್ಯೋ, ನಾನು ಬದುಕಿರಲಾರೇ! ನನ್ನ ಜೀವನವು ಹೀಗಾಯಿತಲ್ಲಾ! ನಾನು ಸತ್ತರೆ ಸಾಕಪ್ಪಾ ಭಗವಂತಾ!" ಎಂಬ ಆರ್ತನಾದವು ಬೀಳುತ್ತದೆ. ಅಲ್ಲಿಗೆ ಶ್ರೀಶಂಕರರು ಹೋಗಿ ನೋಡಿದಾಗ ಅಲ್ಲೊಬ್ಬ ಕುಷ್ಠ ರೋಗಿಯು ನರಳಾಡುತ್ತಾ, ಸಂಕಟಪಡುತ್ತಾ ಇದ್ದನಂತೆ. ಅವನಿಗೆ ಶ್ರೀಶಂಕರರು ವೇದಾಂತವನ್ನು ಉಪದೇಶಿಸಿದರೆಂದೂ, ಅದರಿಂದ ಸಂತುಷ್ಟನಾಗಿ ಅವನು '**ನಾನು ಬ್ರಹ್ಮವೇ**' ಎಂದು ತಿಳಿದುಕೊಂಡನೆಂದೂ ಒಂದು ಕಥೆ: ಇದಕ್ಕೊಂದು ಪ್ರಸಿದ್ಧವಾದ ಶ್ಲೋಕವೂ ಇದೆ. ಇದಕ್ಕೆ '**ಏಕಶ್ಲೋಕೀ**' ಎಂದೂ ಹೆಸರಿದೆ.

**ಕಿಂ ಜ್ಯೋತಿಸ್ತವ ಭಾನುಮಾನ್ ಅಹನಿ ಮೇ ರಾತ್ರೌ ಪ್ರದೀಪಾದಿಕಮ್**
**ಸ್ಯಾದೇವಂ ರವಿದೀಪದರ್ಶನವಿಧೌ ಕಿಂ ಜ್ಯೋತಿರಾಖ್ಯಾಹಿ ಮೇ।**
**ಚಕ್ಷುಸ್ತಸ್ಯ ನಿಮೀಲನಾದಿಸಮಯೇ ಕಿಂ ಧೀರ್ಧಿಯೋ ದರ್ಶನೇ**
**ಕಿಂ ತತ್ರಾಹಮತೋ ಭವಾನ್ ಪರಮಕಂ ಜ್ಯೋತಿಸ್ತದಸ್ಮಿ ಪ್ರಭೋ॥**

ಪ್ರಶ್ನೋತ್ತರರೂಪದಲ್ಲಿದೆ ಈ ಶ್ಲೋಕ:

ಶಂಕರ : ನಿನಗೆ ಬೆಳಕು ಯಾವುದಪ್ಪ?
ಶಿಷ್ಯ : ಹಗಲಿನಲ್ಲಿ ಸೂರ್ಯ, ರಾತ್ರಿಯಲ್ಲಿ ದೀಪ, ಚಂದ್ರ.
ಶಂಕರ : ಸರಿ, ಸೂರ್ಯ, ದೀಪಕ್ಕೆ ಬೆಳಕು ಯಾರಪ್ಪ?
ಶಿಷ್ಯ : ಬುದ್ಧಿ.
ಶಂಕರ : ಬುದ್ಧಿಗೂ ಬೆಳಕು ಯಾರಪ್ಪ?
ಶಿಷ್ಯ : ನಾನೇ; ಗುರುದೇವಾ.
ಶಂಕರ : ಆ ಜ್ಯೋತಿಯೇ ನೀನು.
ಶಿಷ್ಯ : ಅಹಂ ಬ್ರಹ್ಮಾಸ್ಮಿ; ನಾನೇ ಸ್ವಯಂಜ್ಯೋತಿ ಬ್ರಹ್ಮವು.

## 42. "ಅದ್ಭುತ ಶಂಕರ"–100ನೇ ಕೃತಿಯ ಲೋಕಾರ್ಪಣೆ

**ಸ್ಥಳ : ಅಧ್ಯಾತ್ಮ ಮಂದಿರ**

**ಪರಮಾರ್ಥ ವಿಚಾರ ಸಂಘ ಟ್ರಸ್ಟ್ (ರಿ.), ಬೆಂಗಳೂರು - 560 004**

- ಗ್ರಂಥಲೇಖಕ **ವೇ॥ ಕೆ. ಜಿ. ಸುಬ್ರಾಯಶರ್ಮರು** ವೇದಘೋಷ ಮಾಡಿದರು.
- ಸದ್ಗುರುಭಕ್ತರಾದ **ಶ್ರೀ ಸಿ. ಎ. ಸಂಜೀವಮೂರ್ತಿಗಳು** ಪ್ರಾರ್ಥನೆ ಮಾಡಿದರು.
- ಶಾಂಕರ ಸಂದೇಶಗಳಿಂದಲೇ ಜಗತ್ತಿಗೆ ಶಾಂತಿ, ಮಾನವಜನ್ಮಕ್ಕೆ ಸಾರ್ಥಕ್ಯ ಎಂದು **ಶ್ರೀ ಶ್ರೀ ಸದಾನಂದಗಿರಿ ಸ್ವಾಮಿಗಳು** ಹೇಳಿದರು.
- ಶ್ರೀಶಂಕರರು ಅನ್ವರ್ಥ ಸದ್ಗುರು ಹಾಗೂ ಜಗದ್ಗುರುಗಳು ಎಂದು **ಡಾ॥ ಪ್ರೊ. ವೈ. ರಾಜಾರಾಮ್** ಹೇಳಿದರು.
- ಶ್ರೀಶಂಕರರು ಭವಭಯವನ್ನು ದೂರಮಾಡುವ ಪವಾಡಪುರುಷರು ಎಂದು **ಡಾ॥ ಪ್ರೊ. ಎಸ್. ಎನ್. ಓಂಕಾರ್**ರವರು ಹೇಳಿದರು.
- ಶ್ರೀಶಂಕರರು ಸಿದ್ಧ ಹಾಗೂ ಪವಾಡಪುರುಷರೂ ಹೌದು ಎಂದು **ಡಾ॥ ಪ್ರೊ. ವೈ. ನರಹರಿಯವರು** ತಿಳಿಸಿದರು.
- ಶ್ರೀಶಂಕರರು ಅನ್ವರ್ಥ ಬ್ರಹ್ಮಜ್ಞಾನಿಗಳೂ ಕಾರುಣ್ಯಸಿಂಧುಗಳೂ ಎಂದು **ಡಾ॥ ಪ್ರೊ. ಆರ್. ಎನ್. ನಾಗರಾಜ್** ತಿಳಿಸಿದರು.
- ಇದೆಲ್ಲವೂ **'ಶ್ರೀಶ್ರೀಸಚ್ಚಿದಾನಂದೇಂದ್ರಸದ್ಗುರುಸೇವಾನುಗ್ರಹಫಲ'** ಎಂದು **ಡಾ॥ ಕೆ. ಜಿ. ಸುಬ್ರಾಯಶರ್ಮರು** ಸಂತೋಷದಿಂದ ಹೇಳಿದರು.
- **"ಅದ್ಭುತ ಶಂಕರ" ಕೃತಿರತ್ನದ ಲೋಕಾರ್ಪಣ ಸಮಾರಂಭದಲ್ಲಿ ಪರಮಾರ್ಥ ವಿಚಾರ ಸಂಘ ಟ್ರಸ್ಟ್ (ರಿ.) ವತಿಯಿಂದ ಲೇಖಕ ಕೆ. ಜಿ. ಸುಬ್ರಾಯಶರ್ಮಾರವರಿಗೆ "ಅದ್ಭುತ ಶಾಂಕರರತ್ನ" ಎಂಬ ಗೌರವ ಪ್ರಶಸ್ತಿಯನ್ನು ನೀಡಿ ಅವರನ್ನು ಸನ್ಮಾನಿಸಲಾಯಿತು.**
- ಶ್ರೀಶರ್ಮರು "ಅದ್ಭುತಪರಿಶುದ್ಧ ವೇದಾಂತಿಗಳು" ಎಂದು ಅಧ್ಯಕ್ಷ **ಶ್ರೀ ಬಿ. ಎ. ಮಂಜುನಾಥ್**ರವರು ತಿಳಿಸಿದರು.
- ಪ್ರವಚನಮಂದಿರವು ಶ್ರೋತೃಗಳಿಂದ ತುಂಬಿಹೋಗಿತ್ತು. ಕಡೆಯಲ್ಲಿ ಎಲ್ಲರಿಗೂ ಲಘು ಉಪಾಹಾರವನ್ನೂ ಏರ್ಪಡಿಸಲಾಗಿತ್ತು.
- ಮುದ್ರಿತವಾಗಿದ್ದ 1000 ಪ್ರತಿಗಳೂ 10 ನಿಮಿಷದಲ್ಲಿ ಖರ್ಚಾಗಿಬಿಟ್ಟವು!

॥ ಶ್ರೀ ಶ್ರೀ ಅದ್ಭುತಶಂಕರಾಯ ನಮಃ ॥

# ಪರಮಾರ್ಥ ವಿಚಾರ ಸಂಘ ಟ್ರಸ್ಟ್ (ರಿ.)

**'ಅಧ್ಯಾತ್ಮಮಂದಿರ', ವಿಶ್ವೇಶ್ವರಪುರಂ, ಬೆಂಗಳೂರು - 560 004**

**ಮಹಾಮಹೋಪಾಧ್ಯಾಯ, ವಿದ್ವಾನ್**
**ಡಾ॥ ಕೆ. ಜಿ. ಸುಬ್ರಾಯಶರ್ಮಾರವರಿಗೆ**
**"ಅದ್ಭುತ ಶಂಕರ"–100 ನೇ ಕೃತಿಯ ಬಿಡುಗಡೆಯಂದು**
**ತಾ॥ 21-10-2018 ನೇ ಭಾನುವಾರದಂದು ಸಮರ್ಪಿಸಿದ**

# "ಗೌರವ ಪ್ರಶಸ್ತಿಪ್ರದಾನ ಪತ್ರ"

ಪೂಜ್ಯ ಸದ್ಗುರುಗಳೇ

ತಾವು ಪರಮಪೂಜ್ಯ **ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರ** ಶಿಷ್ಯರಾಗಿ, ಅವರ ಸೇವೆಯನ್ನು ಸುಮಾರು ಹದಿನಾರು ಸತತ ಸಂವತ್ಸರಗಳವರೆಗೆ ಮಾಡಿ, ಸದ್ಗುರುಗಳವರ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾಗಿದ್ದೀರಿ. ತಾವು ಈವರೆಗೆ ೯೯ ವೇದಾಂತಕೃತಿರತ್ನಗಳನ್ನು ಬರೆದು, ಇದೀಗ **"ಅದ್ಭುತ ಶಂಕರ"** ಎಂಬ **ನೂರನೆಯ ಕೃತಿಯನ್ನು** ರಚಿಸಿರುತ್ತೀರಿ. ಇಂದು ಈ ಮಂದಿರದಲ್ಲಿ ತಮ್ಮ ನೂರನೆಯ ಕೃತಿರತ್ನ **"ಅದ್ಭುತ ಶಂಕರ"** ಗ್ರಂಥದ ಲೋಕಾರ್ಪಣ ಸಂದರ್ಭದಲ್ಲಿ, ಇಂದ್ರಸಭೆಯಂತೆ ಕಂಗೊಳಿಸುತ್ತಿರುವ ಈ ಸಭೆಯಲ್ಲಿ ನಾವುಗಳು ತಮಗೆ

# ಅದ್ಭುತ ಶಾಂಕರರತ್ನ

ಎಂಬ ಪ್ರಶಸ್ತಿಯನ್ನು ಸಮರ್ಪಿಸಿ, ಜರತಾರಿ ಶಾಲನ್ನು ಹೊದಿಸಿ, ಫಲಪುಷ್ಪತಾಂಬೂಲಗಳನ್ನು ನೀಡಿ ತಮ್ಮನ್ನು ಗೌರವಿಸುತ್ತಿದ್ದೇವೆ.

ತಾ॥ 21-10-2018
ಭಾನುವಾರ

ಸಾಷ್ಟಾಂಗ ಪ್ರಣಾಮಗಳೊಂದಿಗೆ
ಅಧ್ಯಕ್ಷರು ಮತ್ತು ಟ್ರಸ್ಟಿಗಳು
ಪರಮಾರ್ಥ ವಿಚಾರ ಸಂಘ ಟ್ರಸ್ಟ್ ರಿ.
ಬೆಂಗಳೂರು

॥ ಧಿಯೋ ಯೋ ನಃ ಪ್ರಚೋದಯಾತ್ ॥

**ವಿಪ್ರ ಟ್ರಸ್ಟ್ (ರಿ.) ಮತ್ತು ಶ್ರೀ ಅನ್ನಪೂರ್ಣೇಶ್ವರಿ ಟ್ರಸ್ಟ್ (ರಿ).**

**100 ಅಡಿ ರಸ್ತೆ, ವಿನೋಬನಗರ, ಶಿವಮೊಗ್ಗ - 577 204**

**ಮಹಾಮಹೋಪಾಧ್ಯಾಯರೂ, ವೇದಾಂತಶಿಲ್ಪಿಗಳೂ ಆದ**

**ವಿದ್ವಾನ್ ಕೆ. ಜಿ. ಸುಬ್ರಾಯಶರ್ಮಾ ಇವರಿಗೆ**

**ದಿನಾಂಕ 30-9-2018 ಭಾನುವಾರದಂದು**

**ಗೌರವಪೂರ್ವಕವಾಗಿ ಸಮರ್ಪಿಸಿದ**

# "ಅಭಿನಂದನಾ ಪತ್ರ"

**ಶ್ರೀರಾಮಕೃಷ್ಣ ಪರಮಹಂಸರ** ಆಶೀರ್ವಾದದಿಂದ ವೀರ ಸಂನ್ಯಾಸಿ ವಿವೇಕಾನಂದರು ಜಗದ್ವಿಖ್ಯಾತರಾದಂತೆ, ಪರಮ ಗುರುಗಳಾದ **ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ** ನೆರಳಿನಂತೆ ನಿಂತು, ಅಂತೇವಾಸಿಗಳಾಗಿ, ಪರಿಶುದ್ಧವಾದ ಮನಸ್ಸಿನಿಂದ ಅವರ ಸೇವೆಯನ್ನು ಮಾಡಿ, ಪರಿಪೂರ್ಣ ಆಶೀರ್ವಾದ ಪಡೆದು ತಾವು ಅದ್ವೈತಭಾಸ್ಕರರಾಗಿ, ವೀರವೇದಾಂತಿಯಾಗಿ ಹೊರಹೊಮ್ಮಿದ್ದೀರಿ. ತಮ್ಮ ಅಖಂಡ ಹಾಗೂ ಅವಿರತ ಪ್ರವಚನಗಳನ್ನು ಕೇಳಿ ಕೃತಕೃತ್ಯತೆ ಪಡೆದ ಪುಣ್ಯವಂತರು ಅಗಣಿತ. ನಮ್ಮ ಸಮಾಜದ ಶಿಖರಪ್ರಾಯರಾದ, ಸುಮೇರುವಾದ ತಮಗೆ **ವಿಪ್ರ ಟ್ರಸ್ಟ್ ಬಳಗವು**

# ವಿಪ್ರರತ್ನಶಿರೋಮಣಿ

ಎಂಬ ಬಿರುದನ್ನು ನೀಡಿ ಹೃನ್ಮನಃಪೂರ್ವಕವಾಗಿ ಗೌರವಿಸುತ್ತಾ, ಪರಮಾತ್ಮನ ಅನುಗ್ರಹವು ತಮಗೂ, ತಮ್ಮ ಕುಟುಂಬಕ್ಕೂ ಸದಾ ಇರಲೆಂದು ಪ್ರಾರ್ಥಿಸುತ್ತೇವೆ. ಅಭಿನಂದನೆಗಳು.

ತಾ ॥ 30-9-2018, ಭಾನುವಾರ
ವಿನೋಬನಗರ
ಶಿವಮೊಗ್ಗ - 577 204

ಅಧ್ಯಕ್ಷರು ಮತ್ತು ಟ್ರಸ್ಟಿಗಳು
ವಿಪ್ರ ಟ್ರಸ್ಟ್ (ರಿ.) ಮತ್ತು
ಶ್ರೀ ಅನ್ನಪೂರ್ಣೇಶ್ವರಿ ಟ್ರಸ್ಟ್ (ರಿ.)

# 45. ಅದ್ಭುತ ಶೋಕಮೋಹಾತೀತರಾಗಿ

ಶ್ರೀಶಂಕರರ ಪ್ರತಿಯೊಂದು ವಾಕ್ಯವೂ ಮುಮುಕ್ಷುಸಾಧಕರಿಗೆ ಮಾರ್ಗ ದರ್ಶಕವೇ ಆಗಿರುತ್ತದೆ; ಪ್ರತಿಯೊಂದು ಭಾಷ್ಯಪಂಕ್ತಿಯೂ ಧೈರ್ಯವನ್ನು ಕೊಡುತ್ತದೆ. ಶ್ರೀಶಂಕರರ **ಪ್ರಸ್ಥಾನತ್ರಯಭಾಷ್ಯ** ಗ್ರಂಥಗಳನ್ನು ಸಮರ್ಥರಾದ ಸದ್ಗುರುಗಳಿಂದ ಅಧ್ಯಯನಮಾಡಿದ ಮುಮುಕ್ಷುಗಳಿಗೆ ಈ ಮಾತುಗಳು ಸತ್ಯ ಎನಿಸುತ್ತವೆ. ಶ್ರೀಶಂಕರರ ಹಿತೋಪದೇಶಗಳನ್ನು ಸರಿಯಾಗಿ ಶ್ರವಣಮಾಡಿ, ಅದರಂತೆ ಮನನ ನಿದಿಧ್ಯಾಸನಗಳನ್ನೂ ಮಾಡಿದರೆ, ಅಂಥ ಜಿಜ್ಞಾಸು ಮುಮುಕ್ಷುಗಳಿಗೆ ಆತ್ಮಜ್ಞಾನವು ಉಂಟಾಗಿ, ಅವರು ಶೋಕಮೋಹಗಳಿಂದ ಈ ಜನ್ಮದಲ್ಲಿಯೇ ಮುಕ್ತರೇ ಆಗಿಬಿಡುತ್ತಾರೆ.

ಉದಾಹರಣೆಗೆ ಕೇನೋಪನಿಷದ್ಭಾಷ್ಯದಿಂದ ಈ ಕೆಳಗಿನ ಒಂದು ವಾಕ್ಯ ವನ್ನೂ ಅದರ ಅರ್ಥವನ್ನೂ ನೋಡೋಣ:

**ಏತಸ್ಮಾಚ್ಚ ಪ್ರತ್ಯಗಾತ್ಮವಿಜ್ಞಾನಾತ್ ಸಂಸಾರಬೀಜಮಜ್ಞಾನಂ ಕಾಮ ಕರ್ಮಪ್ರವೃತ್ತಿಕಾರಣಮ್ ಅಶೇಷತೋ ನಿವರ್ತತೇ। "ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ", "ತರತಿ ಶೋಕಮಾತ್ಮವಿತ್" ಇತ್ಯಾದಿ ಶ್ರುತಿಭ್ಯಃ।** ಕೇನಭಾಷ್ಯ, ಅವತರಣಿಕಾ

*ಈ ಪ್ರತ್ಯಗಾತ್ಮವಿಜ್ಞಾನದಿಂದ, ಕಾಮಕರ್ಮಪ್ರವೃತ್ತಿಗೆ ಹೇತುವಾದ, ಸಂಸಾರಕ್ಕೆ ಬೀಜವಾದ ಅಜ್ಞಾನವು ಸಂಪೂರ್ಣವಾಗಿ ನಾಶವಾಗಿಬಿಡುತ್ತದೆ. ಏಕೆಂದರೆ, ಏಕತ್ವವನ್ನು ಕಾಣುವವನಿಗೆ ಶೋಕವೆಲ್ಲಿ? ಮೋಹವೆಲ್ಲಿ? ಆತ್ಮನನ್ನು ಬಲ್ಲವನು ಶೋಕವನ್ನು ದಾಟಿಹೋಗುತ್ತಾನೆ ಎಂದು ಮುಂತಾಗಿ ಶ್ರುತಿಗಳು ಹೇಳುತ್ತಿರುವುದರಿಂದ.*

ಶೋಕಮೋಹಗಳೇ ಸಂಸಾರ, ಅವಿದ್ಯಾಕಾಮಕರ್ಮಗಳೇ ಸಂಸಾರ, ರಾಗ ದ್ವೇಷಗಳೇ ಸಂಸಾರ, ಜನ್ಮಮರಣಗಳೇ ಸಂಸಾರ, ಧರ್ಮಾಧರ್ಮಗಳೇ ಸಂಸಾರ; ಈ ಸಂಸಾರಕ್ಕೆಲ್ಲ ಅಜ್ಞಾನವೇ ಕಾರಣ. ಅಜ್ಞಾನವು ಆತ್ಮಜ್ಞಾನದಿಂದ ಮಾತ್ರವೇ ತೊಲಗಬೇಕೇ ಹೊರತು ಉಪಾಯಾಂತರವಿಲ್ಲ. ಶ್ರೀಶಂಕರರು ಈ ಮೇಲಿನ ವಾಕ್ಯದಲ್ಲಿ **ಪ್ರತ್ಯಗಾತ್ಮವಿಜ್ಞಾನದಿಂದ ಸಂಸಾರಕಾರಣವಾದ ಅಜ್ಞಾನವು ತೊಲಗುತ್ತದೆ, ಅನಂತರ ಶೋಕಮೋಹಗಳೂ ತೊಲಗುತ್ತವೆ** ಎಂದು ಬರೆದಿರುತ್ತಾರೆ. ಇದು ಶ್ರೀಶಂಕರರ ಸ್ವಾನುಭವದ ಮಾತುಗಳೇ ಹೊರತು ಪುಸ್ತಕದ ಬದನೇಕಾಯಲ್ಲ. ಹೀಗಾಗಿ ಶಂಕರರನ್ನು **"ಅದ್ಭುತ ಶೋಕಮೋಹಾ ತೀತರು"** ಎಂದು ಧೈರ್ಯವಾಗಿ ಕರೆಯಬಹುದಲ್ಲವೇ?

# 46. ಶರ್ಮರು, ಅದ್ಭುತ ವೇದಾಂತಿಗಳಾಗಿ!

ಶ್ರೀ ಕೆ. ಜಿ. ಸುಬ್ರಾಯಶರ್ಮರು ಹುಟ್ಟಿದ್ದು ೧೯೪೭ರಲ್ಲಿ. ೧೯೫೯ ರಲ್ಲಿಯೇ **ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸದ್ಗುರುಗಳಲ್ಲಿ** ಶಿಷ್ಯವೃತ್ತಿ ಪ್ರಾರಂಭ. ಸುಮಾರು ಹದಿನಾರು ಅಖಂಡ ಸತತ ಸಂವತ್ಸರಗಳ ವರೆಗೆ ಸದ್ಗುರುಗಳ ಅಂತೇವಾಸಿಗಳಾಗಿ, ಸತ್ ಶಿಷ್ಯರಾಗಿದ್ದು ತಮ್ಮ ಸದ್ಗುರುಗಳಿಂದಲೇ ಶ್ರೀ ಶರ್ಮರಿಗೆ ಸಂಸ್ಕೃತ, ವೇದಾಂತಗಳ ಅಧ್ಯಯನ. ಸದ್ಗುರುಗಳು ತಮ್ಮ ಭೌತಿಕದೇಹವನ್ನು ತ್ಯಜಿಸುವ ವರೆಗೂ ೧೯೭೫ ರ ವರೆಗೂ ಜೊತೆಯಲ್ಲಿದ್ದು ಸದ್ಗುರುಸೇವೆಮಾಡುವ ಸೌಭಾಗ್ಯ ಶರ್ಮರದ್ದು!

೧೯೫೯ ರಿಂದ ಪ್ರಾರಂಭಿಸಿ ೨೦೧೮ ರ ವರೆಗೂ, ಇಂದಿಗೂ ಶ್ರೀ ಶರ್ಮರು ಯಾವಾಗಲೂ ವೇದಾಂತಭಾಷ್ಯ ಪಾಠ ಪ್ರವಚನ ಉಪನ್ಯಾಸಗಳನ್ನು ಮಾಡುತ್ತಾ, ವೇದಾಂತಗ್ರಂಥಗಳನ್ನು ರಚಿಸುತ್ತಾ, ತಮ್ಮ ಸಂಪೂರ್ಣ ಜೀವನ ವನ್ನು ವೇದಾಂತದಲ್ಲಿಯೇ ಕಳೆಯುತ್ತಿದ್ದಾರೆ. **ದೇಶವಿದೇಶಗಳಲ್ಲಿ ಸಂಚರಿಸಿ ಈವರೆಗೆ ಶ್ರೀ ಶರ್ಮರು ಸುಮಾರು ತೊಂಭತ್ತಾರು ಸಹಸ್ರಕ್ಕೂ ಹೆಚ್ಚಿನ ವೇದಾಂತ ಪ್ರವಚನಗಳನ್ನು ಮಾಡಿರುತ್ತಾರೆ. ಈಗಲೂ ಮಾಡುತ್ತಲೇ ಇದ್ದಾರೆ.** ಕನ್ನಡ, ಸಂಸ್ಕೃತ, ಇಂಗ್ಲೀಷು, ತೆಲುಗು ಭಾಷೆಗಳಲ್ಲಿ ಪರಿಣತರಾಗಿ ರುವ ಶರ್ಮರು ಈ ಭಾಷೆಗಳಲ್ಲಿ ವೇದಾಂತಗ್ರಂಥಗಳನ್ನೂ ಬರೆದಿರುತ್ತಾರೆ.

ಶ್ರೀ ಶರ್ಮರು ಇದೀಗ ಮಹಾಮಹೋಪಾಧ್ಯಾಯರೂ, ವೇದಾಂತ ಚಕ್ರ ವರ್ತಿಗಳೂ ಆಗಿ ಸುಮಾರು ಅರವತ್ತೆಂಟಕ್ಕೂ ಹೆಚ್ಚಿನ ಪ್ರಶಸ್ತಿಗಳಿಂದ ಭೂಷಿತ ರಾಗಿ, ಡಾ॥ ಕೆ. ಜಿ. ಸುಬ್ರಾಯಶರ್ಮರಾಗಿ **ಸಂಚಾರಿ ವೇದಾಂತ ವಿಶ್ವಕೋಶ** ಎಂದೇ ಪ್ರಸಿದ್ಧರಾಗಿರುತ್ತಾರೆ. ಇದೀಗ ಡಾ॥ ಶರ್ಮರ ನೂರನೆಯ ವೇದಾಂತ ಕೃತಿರತ್ನ **"ಅದ್ಭುತ ಶಂಕರ"** ಗ್ರಂಥವು ಜನಪ್ರಿಯವಾಗಿ, ಮುದ್ರಿತವಾಗಿದ್ದ ಪ್ರತಿಗಳೆಲ್ಲವೂ ಕೇವಲ ಹತ್ತು ನಿಮಿಷಗಳಲ್ಲಿ ಖರ್ಚಾಗಿಬಿಟ್ಟವು! ಇಂಥ ಅದ್ಭುತ ವೇದಾಂತಸೇವೆಯನ್ನು ಮಾಡುತ್ತಿರುವ ಡಾ॥ ವಿದ್ವಾನ್ ಕೆ. ಜಿ. ಸುಬ್ರಾಯ ಶರ್ಮರು ನಿಜಕ್ಕೂ **ಅದ್ಭುತ ವೇದಾಂತಿಗಳಲ್ಲವೇ**? ಇವರಿಗೆ **"ಅದ್ಭುತ ಶಾಂಕರ ರತ್ನ"** ಎಂಬ ಪ್ರಶಸ್ತಿಯು ಸಾರ್ಥಕವಾಗಿರುತ್ತದೆ. ಡಾ॥ ಶರ್ಮರು ಬರೆದಿರುವ ಒಂದು ನೂರೂ ವೇದಾಂತಕೃತಿಗಳು ಶರ್ಮರನ್ನು ಅದ್ಭುತವೇದಾಂತಿಗಳನ್ನಾಗಿ ಸಿರುವುದರಲ್ಲಿ ಸಂಶಯವಿಲ್ಲ! ಕ್ರಿಕೆಟ್ ಪ್ರಪಂಚದಲ್ಲಿ ಶ್ರೀ ಸಚಿನ್ ತೆಂಡೂಲ್‌ಕರ್ ಅವರು Century ಬಾರಿಸಿ ವಿಶ್ವವಿಖ್ಯಾತರಾಗಿದ್ದರೆ, **ನಮ್ಮ ಡಾ॥ ಶರ್ಮಾಜಿ ಯವರು** ವೇದಾಂತ ಪ್ರಪಂಚದಲ್ಲಿ Century ವೇದಾಂತ ಕೃತಿಗಳನ್ನು ಬರೆದು ಜನಪ್ರಿಯರಾಗಿದ್ದಾರೆ ಎಂದು ಪ್ರೊ. ಡಾ॥ ವೈ. ನರಹರಿ ಹೇಳಿದರು.

## ವಿದ್ವಾನ್ ಡಾ|| ಕೆ. ಜಿ. ಸುಬ್ರಾಯಶರ್ಮಾರವರ ವೇದಾಂತ ಗ್ರಂಥಗಳು

1. "ವಿವೇಕಭಾಸ್ಕರ"
2. "ಶಾಂಕರ ಸಂವತ್ಸರ"
3. "ವೇದಾಂತ ಸಂವತ್ಸರ"
4. "ಗೀತಾ ಸಂವತ್ಸರ"
5. "ಸುಭಾಷಿತ ಸಂವತ್ಸರ"
6. "ಪ್ರಬೋಧ ಚಿಂತಾಮಣಿ"
7. "ಜ್ಞಾನಾಮೃತಬಿಂದು"
8. "ಗೀತೋಪದೇಶಾಮೃತ"
9. "ಜರ್ಮನಿಯಲ್ಲಿ ಶರ್ಮರು"
10. ವಿದ್ವಾನ್ ಕೆ. ಜಿ. ಸುಬ್ರಾಯಶರ್ಮಾ
11. "ವ್ಯಾಸ ಪೂರ್ಣಿಮಾ"
12. "ಕೇನ ರಸಾಯನ"
13. "ಜೀವನ್ಮುಕ್ತ ಚತುಷ್ಟಯ"
14. "ಶಿವರಾತ್ರಿ"
15. "ನವೋಪನಿಷದಃ"
16. "ಶಾಂತಿಮಂತ್ರಗಳು"
17. "ವೇದಮಹಿಮೆ"
18. "50 Reflections on Morals"
19. "ಪೀಯೂಷ ಧಾರಾ"
20. "ಆದಿಗುರು ಶಂಕರ"
21. "48 'ಅಷ್ಟಕ' ಸ್ತೋತ್ರಗಳು"
22. "ಕನ್ನಡ ಶಂಕರ"
23. "ಆರಾಧನ ಸಂದೇಶ"
24. "ಸರಳ ರಮಣ"
25. "ನ ಹಿ ಜ್ಞಾನೇನ ಸದೃಶಂ"
26. "ಉಪದೇಶಸಿಂಚನಂ"
27. "ಸುದಿನಂ"
28. "ಶಂಕರಜಯಂತೀ"
29. "ಬಾಲರಾಮಾಯಣಂ"
30. "ಸಂದೇಶಾಮೃತ"
31. "ವಿಭೂತಿರೂಪಿಕೃಷ್ಣ"
32. "ಅಧ್ಯಾರೋಪಾಪವಾದ"
33. "ಶಂಕರ Ph.D."
34. "ಗೌಡಪಾದಾಮೃತ"
35. "ವೇದಾಂತಮಕರಂದ"
36. "ಶ್ರೀರಮಣಸುಧಾ"
37. "ಧರ್ಮ-ವೇದ-ಬ್ರಹ್ಮ"
38. "ಸದ್ಗುರೂಪಾಸನಂ"
39. "ಜನ್ಮಾಂತರ"
40. "ಗೀತಾಕಲ್ಪತರು"
41. "ಮಹರ್ಷಿಗಳು"
42. "ಉಪನಯನಂ"
43. "ಔಪನಿಷದ ಪುರುಷ"
44. "ಸಂಸ್ಕೃತ ವೈಭವ"
45. "ತೈತ್ತಿರೀಯದ ತಿರುಳು"
46. "ರಾಮಾಂಜನೇಯ"
47. ವೇದಾಂತದಲ್ಲಿನ ಪದಗಳೂ ಅರ್ಥಗಳೂ
48. "ತತ್ತ್ವಮಸಿ"
49. "ಬ್ರಹ್ಮಜ್ಞಾನಫಲಂ"
50. "ಜ್ಞಾನಸಾಧನಗಳು"
51. "108 'ಅಷ್ಟಕ' ಸ್ತೋತ್ರಗಳು"
52. "ಚತುಷ್ಟಯ ಸಂಗ್ರಹ"
53. "ಸಂಗ್ರಾಹಕ ಶ್ಲೋಕಗಳು"
54. "ಶ್ರೀಶ್ರೀಗಳ ಸಂಶೋಧನೆ"
55. "ಮಹರ್ಷಿಗಳ 'ಅಷ್ಟಕ' ಸ್ತೋತ್ರಗಳು"
56. "ಶಾಂಕರ ಮಕರಂದ"
57. "ನೀತಿ ಶ್ಲೋಕಗಳು"
58. "ಕೈವಲ್ಯೋಪನಿಷತ್"
59. "ವಿವೇಕ ರತ್ನ"
60. "ಗುರುಶಿಷ್ಯ ಸಂಬಂಧ"
61. "ಲಕ್ಷಣ ಶ್ಲೋಕಗಳು"
62. "ಶ್ರೀರಮಣರ ಉಪದೇಶಸಾರ"
63. "ಅಜ್ಞಾನ ವಿಮುಕ್ತಿ"
64. "ವಂದೇ ಶಂಕರಸದ್ಗುರುಮ್"
65. "ಚತುಸ್ಸೂತ್ರೀಭಾಷ್ಯಸಾರ"
66. ಶ್ರೀರಮಣಮಹರ್ಷಿಗಳ "ಸದ್ದರ್ಶನಮ್"
67. "ತಸ್ಮೈ ಶ್ರೀಗುರವೇ ನಮಃ"
68. "ಗೀತೋಪನಿಷತ್"
69. "ಪ್ರಸ್ಥಾನತ್ರಯಂ"
70. "ಪ್ರಥಮ ಪುಸ್ತಕಂ"
71. "ನನ್ನ ಗುರುಕುಲವಾಸ"
72. "ವೇದಾಂಗಗಳು"
73. "ಗೀತಾಜಯಂತೀ"
74. "ಶಂಕರಹೃದಯಂ"
75. "ಮಕ್ಕಳಿಗಾಗಿ ಸ್ತೋತ್ರಗಳು"
76. "ಗೀತೆಯಲ್ಲಿ ಗುಣವಿಮರ್ಶೆ"
77. "ಸದ್ಗುರುಭಾಸ್ಕರ"
78. "ಶಾಂಕರಭಾಷ್ಯಾಮೃತಂ"
79. "ಶ್ರೀಸುರೇಶ್ವರರ ಸಿಂಹಗರ್ಜನೆ"
80. "ಉಪಮಾ ಕಾಳಿದಾಸಸ್ಯ"
81. "ಪ್ರಣವೋಪಾಸನಂ"
82. "ಕವಿಮುನಿ ಕಂಡ ಶಿವ"
83. "ಬ್ರಾಹ್ಮೀಸ್ಥಿತಿಗೆ 40 ಸೋಪಾನಗಳು"
84. "ಶಾಂಕರಬೋಧಾಮೃತಂ"

85. "ಪ್ರಬೋಧ ಶ್ಲೋಕಗಳು"
86. "ವೇದಾಂತಡಿಂಡಿಮಸಾರ"
87. "ಶತಕತ್ರಯಸಾರ"
88. "ಪಂಚಕ ಪಂಚಕಂ"
89. "ನೈಷ್ಕರ್ಮ್ಯಸಿದ್ಧಿಸಾರ"
90. "ಈಶಾವಾಸ್ಯಮಿದಂ ಸರ್ವಂ"
91. "ಮಾತೃದೇವೋ ಭವ"
92. "ಸುರೇಶ್ವರ ಸಂವತ್ಸರ"
93. "70ರ ವೀರವೇದಾಂತಿ"
94. "ತುರೀಯಂ ಪದಂ"
95. "ಬ್ರಹ್ಮಚರ್ಯವ್ರತಂ"
96. "ಗೀತೆಯಲ್ಲಿ ಸಾಂಖ್ಯಯೋಗ"
97. "ಶ್ರವಣದ ಮಹತ್ತ್ವ"
98. "ವಿದುರನೀತಿಸಾರ"
99. "ದಾನದ ಮಹಿಮೆ"
100. "ಅದ್ಭುತ ಶಂಕರ"

## ವೇದಾಂತ ಪ್ರವಚನಗಳು M.P. 3 ಸಿ. ಡಿ. ಗಳಲ್ಲಿ ಲಭ್ಯವಿವೆ

1. ದಶೋಪನಿಷತ್ತುಗಳ ಸಂದೇಶಗಳು (10 ಗಂಟೆಗಳು)
2. ಬ್ರಹ್ಮಸೂತ್ರಶಾಂಕರಭಾಷ್ಯ, ಚತುಸ್ಸೂತ್ರೀಭಾಷ್ಯ (56 ಗಂಟೆಗಳು)
3. ಶ್ವೇತಾಶ್ವತರೋಪನಿಷತ್ ಶಾಂಕರಭಾಷ್ಯಂ (108 ಗಂಟೆಗಳು)
4. ಐತರೇಯೋಪನಿಷತ್ ಶಾಂಕರಭಾಷ್ಯಂ (48 ಗಂಟೆಗಳು)
5. ಈಶಾವಾಸ್ಯೋಪನಿಷತ್ ಶಾಂಕರಭಾಷ್ಯಂ (28 ಗಂಟೆಗಳು)
6. ಅಧ್ಯಾರೋಪ ಅಪವಾದಪ್ರಕ್ರಿಯೆ (90 ನಿಮಿಷಗಳು)
7. ನಮಗೆ ಇಂದು ವೇದಾಂತ ಬೇಕೇ? (90 ನಿಮಿಷಗಳು)
8. ಮುಂಡಕೋಪನಿಷತ್–ಶಾಂಕರಭಾಷ್ಯಮ್ (45 ಗಂಟೆಗಳು)
9. ಕಾಠಕೋಪನಿಷತ್–ಶಾಂಕರಭಾಷ್ಯಮ್ (69 ಗಂಟೆಗಳು)
10. ದ್ವಾದಶವೇದಾಂತರತ್ನಮಾಲಿಕಾ (13 ಗಂಟೆಗಳು)
11. ದಶೋಪನಿಷತ್ತುಗಳ ಪ್ರವಚನಗಳು (DVD 10 ಗಂಟೆಗಳು)
12. अध्यारोपापवादमहिमा (60 ನಿಮಿಷ)
13. Avasthaatraya Prakriya (60 Minutes)
14. माण्डूक्यरहस्यविवृति (60 ನಿಮಿಷ)
15. ಭಗವದ್ಗೀತೋಪನ್ಯಾಸ (DVD)
16. ತೈತ್ತಿರೀಯ, ಪುರುಷಸೂಕ್ತ ಮಂತ್ರ ಪಠನ
17. ಬ್ರಹ್ಮಸೂತ್ರಸಾರ (DVD)
18. Power of Shaanthi Manthras
19. Essence of the Maandukya Upanishad
20. "ಕನ್ನಡ ಶಂಕರ"—ಶ್ರೀ ಶ್ರೀ ಸ್ವಾಮಿಗಳವರು
21. Sri Shankara Bhagavathpaadaachaarya
22. ಮಾಂಡೂಕ್ಯೋಪನಿಷತ್‌ಸಾರ
23. ೬೦ ಶಾಂಕರಭಾಷ್ಯಪ್ರವಚನಗಳ ಸಾರ
24. ಶ್ರೀಶಂಕರರ ನಿರ್ವಾಣಷಟ್ಕಮ್
25. ವ್ಯಾಸಪೂಜಾ, ಗುರ್ವಷ್ಟಕಮ್
26. ತೈತ್ತಿರೀಯೋಪನಿಷತ್ ಶಾಂಕರಭಾಷ್ಯಂ (120 ಗಂಟೆಗಳು)
27. वेदान्तप्रक्रियाप्रत्यभिज्ञा

---

ವಿವರಗಳಿಗೆ : ವಿದ್ವಾನ್ ಡಾ॥ **ಕೆ. ಜಿ. ಸುಬ್ರಾಯಶರ್ಮಾ**
**ದೂರವಾಣಿ : 080-2639 6786; ಮೊಬೈಲ್ : 98862 81622**